## ೫೫ ಕರ್ಮಗಳಲ್ಲಿ ಪರಿವರ್ತನೆಯಾಗುವ ಬಗೆ

**೧. ಕರ್ಮಗಳ ಪರಿವರ್ತನೆಯು ಯಾವುದರಿಂದಾಗುತ್ತದೆ ?**

ಜೀವಿಯ ಶುಭಾಶುಭ ಯೋಗದಿಂದ ಮತ್ತು ತೀವ್ರ, ಮಂದ ಪರಿಣಾಮ ಗಳಿಗನುಸಾರವಾಗಿ ಜ್ಞಾನಾವರಣಾದಿ ಕರ್ಮಗಳು ಬಂಧವಾಗುತ್ತವೆ. ಅವು ಉದಯಕ್ಕೆ ಬಂದು ಫಲ ನೀಡುವ, ನಿರ್ಜರೆಯಾಗುವ ಕ್ರಮದಲ್ಲಿ ಕೆಲವು ಸಂದರ್ಭದಲ್ಲಿ ಪರಿವರ್ತನೆಯಾಗುವುದುಂಟು. ಕೆಲವು ಕರ್ಮಗಳು ಸಂದರ್ಭ ಅನುಸಾರ ಉದಯವಾಗಿ ಫಲ ನೀಡಿ ಮೇಲೇರುತ್ತವೆ. ಕೆಲವು ಉದಯವೇ ಆಗದಂತೆ ನಶಿಸಿಹೋಗುತ್ತವೆ. ಇವೆಲ್ಲಾ ಪರಿವರ್ತನ ಕ್ರಿಯೆಯು ದಶವಿಧ ಕರ್ಣ ಎಂಬ ವಿಧಾನದಿಂದಾಗುತ್ತದೆ.

**೨. ದಶವಿಧಕರ್ಣ ಎಂದರೇನು ?**

ಜ್ಞಾನಾವರಣೀಯಾದಿ ಎಂಟೂ ಕರ್ಮಗಳಲ್ಲಿ ಆಯುಷ್ಯ ಕರ್ಮ ಒಂದನ್ನು ಬಿಟ್ಟು ಉಳಿದ ಏಳೂ ಕರ್ಮಗಳು ಆತ್ಮನಿಗೆ ಪ್ರತಿ ಕ್ಷಣದಲ್ಲೂ ಬಂಧ ವಾಗುತ್ತಲೇ ಇರುತ್ತವೆ. ಹೀಗೆ ಬಂಧವಾದ ಕರ್ಮಗಳು ಸಮಯಾನುಸಾರ ಉದಯಕ್ಕೆ ಬಂದು ಸುಖವನ್ನೋ - ದುಃಖವನ್ನೋ ನೀಡುತ್ತವೆ. ಆದರೂ ಕೆಲವು ಸಂದರ್ಭದಲ್ಲಿ ಅವು ಫಲ ಕೊಡದೇನೇ ಅಕಾಮನಿರ್ಜರೆಯಾಗುತ್ತದೆ. ಕೆಲವು ಫಲ ಕೊಟ್ಟೇತೀರುತ್ತವೆ. ಕೆಲವು ಸಂದರ್ಭದಲ್ಲಿ ಬಂಧವಾಗಿರುವ ಕರ್ಮಗಳನ್ನು ಪರಿವರ್ತನೆ-ಮಾರ್ಪಾಟು ಮಾಡಿಕೊಳ್ಳುವ ಅಧಿಕಾರವು ಆತ್ಮನಿಗಿರುತ್ತದೆ. ಏಕೆಂದರೆ ಆತ್ಮನೇ ಕರ್ಮಬಂಧ ಮಾಡಿಕೊಂಡವನು, ಅವನೇ ಅನುಭವಿಸುವವನು ಮತ್ತು ಅವನೇ ಅವುಗಳ ನಿರ್ಜರೆ ಮಾಡಿ ಮುಕ್ತ ನಾಗುವವನಾಗಿದ್ದಾನೆ. ಪುಣ್ಯದ ಫಲವನ್ನು ಅನುಭವಿಸುವ ಸಾಧಕನು ಅಪ ಮಾರ್ಗ ಹಿಡಿದರೆ, ಆರ್ತಧ್ಯಾನ, ರೌದ್ರಧ್ಯಾನಾಸಕ್ತನಾದರೆ, ಹಿಂಸಾದಿ ಪಾಪ ಕಾರ್ಯದಲ್ಲಿ ತೊಡಗಿದರೆ, ಅನಾಚಾರ, ಅತ್ಯಾಚಾರ ಮತ್ತು ತೀವ್ರವಾದ ರಾಗ-ದ್ವೇಷ, ಮೋಹ-ಚಿಂತೆ, ದುಃಖಕ್ಕೆ ಒಳಗಾದರೆ, ಅತ್ಯಾಚಾರ, ಅನಾಚಾರ ದಿಂದ ಅನಾಹುತ ಮಾಡಿದರೆ, ದುರ್ಭಾವದಿಂದ ಕೂಡಿದ್ದರೆ, ಆ ಸಂದರ್ಭ ದಲ್ಲಿ ಉದಯವಾಗಿದ್ದ ಪುಣ್ಯ ಕರ್ಮವು ಕೂಡಲೇ ಅಶುಭವಾದ ಪಾಪಕರ್ಮವಾಗಿ ತಾನಾಗಿಯೇ ಮಾರ್ಪಾಡಾಗಿ ದುಃಖವನ್ನು ಅನುಭವಿಸಬೇಕಾಗುತ್ತದೆ. ಹೀಗೆಯೇ ಸಾಧಕನು ಪಾಪಕರ್ಮೋದಯವಾಗಿದ್ದಾಗ, ದುಃಖವನ್ನು ಅನುಭವಿಸುತ್ತಿದ್ದರೂ

ಶುಭಪರಿಣಾಮಿಯಾಗಿ, ಶುಭಕಾರ್ಯಾಸಕ್ತನಾಗಿ, ಸಮ್ಯಗ್ದೃಷ್ಟಿಯೂ, ಧರ್ಮ ಧ್ಯಾನದಿಂದ ಕೂಡಿದವನೂ, ವ್ರತಿಕನೂ, ಸದಾಚಾರ-ಸರಳವೃತ್ತಿಯಿಂದ, ತಾಳ್ಮೆಯಿಂದ, ಕ್ಷಮಾಧಾರಿಯಾಗಿ ದಾನ, ಧರ್ಮ, ಪರೋಪಕಾರ, ದೇವಪೂಜೆ, ಗುರುಸೇವೆ, ಸ್ವಾಧ್ಯಾಯಗಳನ್ನು ಮಾಡುತ್ತಿದ್ದರೆ ತನಗೆ ಉದಯವಾಗಿ ಫಲ ನೀಡುತ್ತಿದ್ದ ಅಶುಭಕರ್ಮವು ಶುಭಕರ್ಮವಾಗಿ ಪರಿವರ್ತನೆಗೊಂಡು ಸುಖ ನೀಡುತ್ತದೆ. ಕೆಲವು ತೀವ್ರವಾದ ಪರಿಣಾಮದಿಂದ ಬಂಧವಾದ ಕರ್ಮಗಳು ಏನು ಮಾಡಿದರೂ ಪರಿವರ್ತನೆಯಾಗದೆ ಅವುಗಳ ಫಲವನ್ನು ಅನುಭವಿಸಲೇ ಬೇಕಾಗುತ್ತದೆ. ಈ ವಿಧವಾದ ಕರ್ಮದ ಕ್ರಿಯಾ ವಿಧಾನವು ಹತ್ತು ತರನಾಗಿರುತ್ತದೆ. ಇದೇ ದಶವಿಧ ಕರ್ಣವೆಂಬ ಕರ್ಮಕ್ರಿಯಾ ಸೂಚಿಯಾಗಿದೆ.

**೩. ದಶವಿಧ ಕರ್ಣಗಳಾವುವು ?**

1) ಬಂಧ 2) ಸತ್ತಾ 3) ಉತ್ಕರ್ಷಣ 4) ಅಪಕರ್ಷಣ 5) ಸಂಕ್ರಮಣ 6) ಉದಯ 7) ಉದೀಕರಣ 8) ಉಪಶಮ 9) ನಿಧತ್ತಿ 10) ನಿಕಾಚನ.

ಇವೇ ಕರ್ಮದ ಹತ್ತು ಅವಸ್ಥೆಗಳು.

**೪. ಬಂಧವೆಂದರೇನು ?**

ಸಂಸಾರೀ ಜೀವಿಯ ಶುಭಾಶುಭ ಪರಿಣಾಮ ಮತ್ತು ಕಾರ್ಯಗಳಿಗೆ ತಕ್ಕಂತೆ ಕಾರ್ಮಣ-ವರ್ಗಣವೆಂಬ ಪುದ್ಗಲಾಣುಗಳು ಆತ್ಮ ಪ್ರದೇಶಕ್ಕೆ ಬಂದು ಅಂಟುವುದು. ಯಾರ ಪರಿಣಾಮ ಮತ್ತು ಕಾರ್ಯಗಳು ಶುಭವಾಗಿರುವುವೋ ಆ ಸಮಯದಲ್ಲಿ ಬಂದಂಟಿದ ಕರ್ಮವು ಪುಣ್ಯಕರ್ಮವಾಗಿಯೂ, ಯಾರ ಪರಿಣಾಮ ಮತ್ತು ಕಾರ್ಯಗಳು ಅಶುಭವಾಗಿರುವುವೋ ಆ ಸಮಯದಲ್ಲಿ ಬಂದಂಟಿದ ಕರ್ಮವು ಪಾಪಕರ್ಮವಾಗಿಯೂ ಪರಿಣಮಿಸುವುದು. ಈ ರೀತಿ ತಮ್ಮ ಮನ, ವಚನ, ಕಾಯಗಳ ಕಾರ್ಯಗಳ ಶುಭಾಶುಭ ಯೋಗಗಳಿಗನುಸಾರವಾಗಿ ಕರ್ಮಗಳು ತಮ್ಮತ್ತ ಆಕರ್ಷಿತವಾಗಿ ಆತ್ಮ ಪ್ರದೇಶದಲ್ಲಿ ಬಂದು ಸೇರುತ್ತವೆ. ಹೀಗೆ ಜೀವ-ಜಡಗಳ ಸಂಯೋಗವಾಗುವುದು. ಇದೇ ಕರ್ಮ ಬಂಧ. ಸಂಸಾರೀ ಜೀವಿಗಳಿಗೆ ಈ ಕ್ರಿಯೆಯು ನಿರಂತರವಾಗಿ ಆಗುತ್ತಿರುತ್ತದೆ. ಹಿಂಸಾದಿ ಕಾರ್ಯಗಳು ರಾಗ-ದ್ವೇಷಾದಿ ಪರಿಣಾಮಗಳೇ ಅಶುಭವಾದವುಗಳು. ಅಹಿಂಸಾದಿ ವ್ರತಪಾಲನೆ, ದಾನ, ಪೂಜೆ, ಪರೋಪಕಾರ, ಸ್ವಾಧ್ಯಾಯ, ಶಾಂತಿ-ಸಮಾಧಾನಾದಿ ಕಾರ್ಯಗಳು ಶುಭವಾದವುಗಳು.



**೫. ಸತ್ತ ಎಂದರೇನು ?**

ಕರ್ಮಬಂಧವು ಜೀವಿಗಳ ತೀವ್ರವಾದ ಅಥವಾ ಮಂದವಾದ ಪರಿಣಾಮಕ್ಕೆ ಅನುಸಾರ ಶುಭಾಶುಭವಾದ ಕರ್ಮಗಳಾಗಿ ಬಂಧವಾಗುತ್ತವೆ. ಹೀಗೆ ಬಂಧವಾದ ಕರ್ಮಗಳು ಕೆಲವು ಸಂದರ್ಭಗಳಲ್ಲಿ ತಕ್ಷಣವೇ ಉದಯವಾಗಿ ಫಲ ಕೊಡಬಹುದು ಅಥವಾ ಕೊಡದೆಯೂ ಇರಬಹುದು. ಕರ್ಮಗಳು ಆತ್ಮನಲ್ಲಿ ಬಂಧವಾದ ಮೇಲೆ ಉದಯಕ್ಕೆ ಬರುವ ಸಮಯದ ಮಧ್ಯದ ಅವಧಿಯ ಕಾಲದಲ್ಲಿ ಕರ್ಮಗಳು ಸತ್ತಾವಸ್ಥೆಯಲ್ಲಿ ಇರುತ್ತವೆ. ಇದು ಕರ್ಮಗಳು ಉದಯಕ್ಕೆ ಬಂದು ಫಲ ಕೊಡಲು ಇನ್ನೂ ಪಕ್ವವಾಗದ ಅವಸ್ಥೆಯಾಗಿದೆ. ಅಂದರೆ ಈ ಜನ್ಮದಲ್ಲಿ ಮಾಡಿದ ಕರ್ಮವು ಮುಂದೊಂದು ಜನ್ಮದಲ್ಲಿ ಉದಯಕ್ಕೆ ಬಂದು ಫಲ ಕೊಡಬಹುದು. ಅವನಿಗೂ ಆ ಕರ್ಮವು ಆತ್ಮ ಪ್ರದೇಶದಲ್ಲಿ ಇದ್ದೇ ಇರುತ್ತದೆ. ಈ ಅವಸ್ಥೆಗೆ ಸತ್ತಾವಸ್ಥೆ ಎನ್ನುತ್ತಾರೆ. ಕಟ್ಟಿಕೊಂಡ ಕರ್ಮಗಳು ಉದಯಕ್ಕೆ ಬಂದು ಫಲ ಕೊಡುವವತನಕ ಆತ್ಮ ಪ್ರದೇಶದಲ್ಲಿ ಇರುವ ಕಾಲವೇ ಸತ್ತಾವಸ್ಥೆಯಾಗಿರುತ್ತದೆ.

**೬. ಉತ್ಕರ್ಷಣವೆಂದರೇನು ?**

ಬಂಧವಾದ ಕರ್ಮಕ್ಕೆ ಕೆಲವು ಸಂದರ್ಭದಲ್ಲಿ ಹೆಚ್ಚಿನ ರೀತಿಯಲ್ಲಿ ಫಲ ಕೊಡುವ ಸ್ಥಿತಿಗೆ ಉತ್ಕರ್ಷಣವೆನ್ನುವರು. ಕೇವಲ ರಾಜನಾಗಬೇಕಾಗಿದ್ದವನು ಚಕ್ರವರ್ತಿಯಾಗುವ ಅವಕಾಶ ದೊರೆಯುವುದು. ಹಾಗೆಯೇ ಸಣ್ಣ ತಪ್ಪಿಗೆ ಹೆಚ್ಚಿನ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ಹೀಗೆಯೇ ರಾಜನಾಗ ಬೇಕಾಗಿದ್ದವನಿಗೆ ಅದು ದೊರೆಯದೇ ಪರದೇಶಿಯಾಗುವಂತಾಗುವುದು. ಇಂತಹ ಪರಿವರ್ತನೆಯೇ ಉತ್ಕರ್ಷಣವಾಗಿದೆ. ಇದು ಶುಭವೂ-ಅಶುಭವೂ ಆಗಿರಬಹುದು. ಹೀಗೆ ಕರ್ಮಗಳ ಸ್ಥಿತಿ ಮತ್ತು ಅನುಭಾಗದ ವೃದ್ಧಿಯಾಗುವುದೇ ಉತ್ಕರ್ಷಣ, ಎಂದರೆ ಹೆಚ್ಚಾಗುವುದು.

**೭. ಅಪಕರ್ಷಣವೆಂದರೇನು ?**

ಈ ಹಿಂದೆ ಕಟ್ಟಿದ ಕರ್ಮಗಳ ಸ್ಥಿತಿ ಮತ್ತು ಅನುಭಾಗವು ಕಡಿಮೆಯಾಗುವುದೇ ಅಪಕರ್ಷಣ. ಈಗ ಜೀವಿಯು ಮಾಡುವ ಶುಭ ಪರಿಣಾಮ, ಸತ್ಕಾರ್ಯ, ಸದಾಚಾರಗಳಿಂದ ಹಿಂದೆ ಕಟ್ಟಿದ ಅಶುಭಕರ್ಮ ಮತ್ತು ಅನುಭಾಗವು ಮತ್ತದರ ಶಕ್ತಿಯು ಕಡಿಮೆಯಾಗುವುದು. ಏನೋ ಅನಾಹುತ

ವಾಗುವ ಅವಕಾಶವಿದ್ದರೂ ಸ್ವಲ್ಪ ಮಾತ್ರ ಅನುಭವಿಸುವಂತಾಗುವುದು. ಶ್ರೇಣಿಕನಿಗೆ ಏಳನೇ ನರಕದ ಆಯುಷ್ಯ ಕಟ್ಟಿತ್ತು. ಆದರೆ ಆತನು ಪಶ್ಚಾತ್ತಾಪ ಪಟ್ಟು ಸಮ್ಯಗ್ದೃಷ್ಟಿಯಾದ್ದರಿಂದ ಆ ಗತಿಯ ಸ್ಥಿತಿಯು ಕಡಿಮೆಯಾಗಿ ಏಳನೇ ನರಕದ ಬದಲು ಮೊದಲನೇ ನರಕದಲ್ಲಿ ಜನ್ಮ ತಾಳುವಂತಾಯಿತು. ನರಕದ ದುಃಖದಲ್ಲಿಯೂ ಕಡಿಮೆಯಾಯಿತು. ಇದಕ್ಕೆ ಅಪಕರ್ಷಣವೆನ್ನುತ್ತಾರೆ. ಅಪಕರ್ಷಣವೆಂದರೆ ಕಡಿಮೆಯಾಗುವುದು.

### ೮. ಸಂಕ್ರಮಣವೆಂದರೇನು ?

ಈ ಹಿಂದೆ ಮಾಡಿದ ಶುಭಾಶುಭ ಕರ್ಮಗಳು ಕೆಲವು ಸಂದರ್ಭದಲ್ಲಿ ಪರಿವರ್ತನೆಯಾಗುವುದು. ಇದಕ್ಕೆ ಸಂಕ್ರಮಣವೆನ್ನುವರು. ಅಜ್ಞಾನ, ಅವಿರತ, ಪ್ರಮಾದ, ಕಷಾಯ ಯೋಗಗಳಿಂದ ಮಾಡಿದ್ದರಿಂದ ಬಂಧವಾದ ಅಶುಭ ಕರ್ಮಗಳು ಉದಯಕ್ಕೆ ಬಂದು, ಫಲವನ್ನು ಕೊಡಲು ಪ್ರಾರಂಭಿಸಿದಾಗ ಅದೇ ಜೀವಿಯು ತಾನು ಹಿಂದೆ ಮಾಡಿದ ಕೆಟ್ಟ ಪರಿಣಾಮ ಕಾರ್ಯಗಳು ತಪ್ಪು ಎಂದು ಭಾವಿಸಿ ತೀವ್ರವಾಗಿ ಪಶ್ಚಾತ್ತಾಪ ಪಟ್ಟರೆ, ಣಮೋಕಾರ ಮಂತ್ರ ಜಪಿಸಿದರೆ, ಸಮ್ಯಗ್ದೃಷ್ಟಿಯಾದರೆ, ವ್ರತಿಕನಾದರೆ, ಸ್ತೋತ್ರ, ಮುನಿ ಸೇವೆ, ಸ್ವಾಧ್ಯಾಯ ಮಾಡಿದರೆ ಹಿಂದೆ ಮಾಡಿದ ಪಾಪಕರ್ಮಗಳು ಉದಯವಿದ್ದರೂ ಅವು ಈಗ ಮಾಡಿದ ಹೊಸ ಪುಣ್ಯ ಕರ್ಮಗಳಿಂದ ಮಾರ್ಪಾಟಾಗಿ ಅವೂ ಶುಭ ಫಲವನ್ನೇ ನೀಡುತ್ತವೆ. ಇದೇ ಸಂಕ್ರಮಣ. ಉದಾಹರಣೆಗೆ ತನಗಾಗದವನಿಗೆ ವಿಷವನ್ನು ಕೊಟ್ಟಾಗ ಅದನ್ನು ಕುಡಿದವನು ಸಭ್ಯನೂ, ಸಮ್ಯಗ್ದೃಷ್ಟಿಯೂ, ಶುಭೋಪಯೋಗ ಪರಿಣಾಮದಲ್ಲಿರುವವನೂ ಆಗಿರುವುದರಿಂದ ಅವನು ವಿಷವನ್ನು ಕುಡಿದುದರಿಂದ ಅವನಲ್ಲಿ ಬಹುಕಾಲದಿಂದ ಕಾಡುತ್ತಿದ್ದ ಭಯಂಕರವಾದ ರೋಗವು ಆ ವಿಷಪಾನದಿಂದ ವಾಸಿಯಾಗುತ್ತದೆ. ಸಾಯಲಿ ಎಂದು ಬಾವಿಗೆ ತಳ್ಳಿದರೆ ಅಲ್ಲಿ ಅವನಿಗೆ ಧನದ ನಿಧಿಯೇ ಸಿಗುತ್ತದೆ. ಹೀಗೆ ಚಂದನ, ವನಮಾಲೆ, ಅನಂತಮತಿ ಮುಂತಾದವರು ತಮ್ಮ ದುಃಖದ ಕಾಲದಲ್ಲಿ ಅವುಗಳಿಂದ ಬಿಡುಗಡೆಯಾಗಿರುವ ಉದಾಹರಣೆಗಳಿವೆ. ಕೆಲವರಿಗೆ ಎಷ್ಟೇ ಕೆಡುಕು ಮಾಡಿದರೂ ಅದರಿಂದ ಒಳ್ಳೆಯದೇ ಆಗುತ್ತದೆ. ಈ ಕರ್ಮದ ಪರಿವರ್ತನಾ ಕ್ರಿಯೆಗೆ ಪುಣ್ಯ ಸಂಕ್ರಮಣವೆನ್ನುವರು.

ಹೀಗೆಯೇ ಪಾಪ ಸಂಕ್ರಮಣವೂ ಆಗುವುದು. ಪುಣ್ಯೋದಯವಾಗಿದ್ದಾಗ ಪಾಪಕಾರ್ಯಗಳಲ್ಲಿ ತೊಡಗಿದರೆ, ತೀವ್ರವಾದ ರಾಗ-ದ್ವೇಷ ಮಾಡಿದರೆ ಅದರ



ಫಲದಿಂದ ಪುಣ್ಯವು ಪಾಪರೂಪವಾಗಿ ಪರಿವರ್ತನೆಗೊಂಡು ದುಃಖವನ್ನು ಅನುಭವಿಸಬೇಕಾಗುವುದು. ಸಂಕ್ರಮಣ ಎಂದರೆ ಬದಲಾಗುವುದು.

ಆದರೆ ಈ ಸಂಕ್ರಮಣವು, ದರ್ಶನಾವರಣೀಯ, ಜ್ಞಾನಾವರಣೀಯವಾಗಿ ಪರಿವರ್ತನೆಯಾಗುವುದಿಲ್ಲ. ಅಂದರೆ ಮೂಲ ಕರ್ಮಗಳು ಬೇರೆಬೇರೆ ಕರ್ಮಪ್ರಕೃತಿಗಳಾಗಿ ಪರಿವರ್ತನೆಯಾಗುವುದಿಲ್ಲ. ಆಯಾ ಕರ್ಮಗಳಲ್ಲಿ ಮಾತ್ರವೇ ಏರುಪೇರು-ಪರಿವರ್ತನೆ ಆಗುತ್ತವೆ. ಅಂದರೆ ಸಾತಾವೇದನೀಯವು ಅಸಾತಾವೇದನೀಯವಾಗಿಯೂ, ಅಸಾತಾವೇದನೀಯವು ಸಾತಾವೇದನೀಯವಾಗಿಯೂ ಪರಿವರ್ತನೆಯಾಗುತ್ತವೆ. ಈ ರೀತಿ ಸಂಕ್ರಮಣವೇನಿದ್ದರೂ ಸಜಾತೀಯ ಕರ್ಮಗಳಲ್ಲಿ ಮಾತ್ರವೇ ಆಗುತ್ತದೆ.

### ೯. ಉದಯವೆಂರೇನು ?

ಕಟ್ಟಿದ ಕರ್ಮದ ಸ್ಥಿತಿಯು ತತ್ಕಾಲದಲ್ಲೋ-ಕಾಲಾನುಕ್ರಮದಲ್ಲೋ ಪೂರ್ಣರೂಪದಲ್ಲಿ ಉದಯವಾಗಿ ಫಲವನ್ನು ಕೊಡುವುದೇ ಉದಯ. ಇವು ಶುಭಾಶುಭವಾಗಿರಬಹುದು.

### ೧೦. ಉದೀಕರಣವೆಂದರೇನು ?

ಕರ್ಮಗಳು ಫಲ ಕೊಡಲು ಉದಯವಾಗಬೇಕಾಗಿದ್ದ ಕಾಲಕ್ಕಿಂತ ಮೊದಲೇ ಉದಯವಾಗಿ ಫಲ ಕೊಡದೇ ಉದುರಿಹೋಗುವುದು.

ಓರ್ವನಿಗೆ 80 ವರ್ಷ ಆಯುಷ್ಯಬಂಧವಾಗಿರುತ್ತದೆ. ಆದರೆ ಅವನು 60ನೇ ವಯಸ್ಸಿನಲ್ಲೇ ಅಪಘಾತವಾಗಿ ತೀರಿಕೊಳ್ಳುತ್ತಾನೆ. ಇದಕ್ಕೆ ಅಪಮೃತ್ಯುವೆನ್ನುತ್ತಾರೆ. ಒಬ್ಬನಿಗೆ ಜೀವಾವಧಿ ಶಿಕ್ಷೆಯಾಗಿರುತ್ತದೆ ಆದರೆ ಕಾರಣಾಂತರದಿಂದ ಅವನ ಒಳ್ಳೆಯ ನಡತೆ-ದೇಶದಲ್ಲಿ ವಿಶೇಷ ಘಟನೆ ನಡೆದು ಅವನಿಗೆ ಇನ್ನೂ ಮುಂಚೆಯೇ ಬಿಡುಗಡೆಯಾಗುತ್ತದೆ. ಹೀಗೆ ಯಾವಾಗಲೋ ಕರ್ಮವು ಫಲಕೊಡುವುದಿದ್ದರೂ, ಅದು ಕೆಲವು ಸಂದರ್ಭದಲ್ಲಿ ಮೊದಲೇ ಉದಯಕ್ಕೆ ಬಂದು ಫಲನೀಡುತ್ತದೆ. ಇದು ಶುಭಾಶುಭಗಳೆರಡರಲ್ಲೂ ಆಗುವುದು.

### ೧೧. ಉಪಶಮವೆಂದರೇನು ?

ಬಂಧವಾಗಿದ್ದ ಕರ್ಮಗಳು ಉದಯವಾಗದೇ ತಾನಾಗಿಯೇ ಫಲ ಕೊಡದೆ ನಾಶವಾಗುವುದಕ್ಕೆ ಉಪಶಮವೆನ್ನುವರು. ಶಾಂತ ಪರಿಣಾಮದಲ್ಲಿದ್ದಾಗ ಕೋಪಮಾಡಿಕೊಳ್ಳುವ ಸಂದರ್ಭವಿದ್ದರೂ ಸಿಟ್ಟುಮಾಡಿಕೊಳ್ಳದಿರುವುದು,

ಸುಖವನ್ನಾಗಲೀ-ದುಃಖವನ್ನಾಗಲೀ ಅನುಭವಿಸಬೇಕಾಗಿದ್ದರೂ ಅವು ಒದಗದಿರುವುದು. ಅವುಗಳ ಶಕ್ತಿಯು ಶಮನವಾಗುವುದು.

ಈ ಉಪಶಮವು ಜಪ, ಧ್ಯಾನ, ತಪಗಳಿಂದ ಎಷ್ಟೋ ಕರ್ಮಗಳು ತಾವಾಗಿಯೇ ಅಕಾಮನಿರ್ಜರೆಯಾಗುವುವು. ಹೀಗೆ ಉದಯಕ್ಕೆ ಬರದೆ-ಫಲ ನೀಡದೆ ನಾಶವಾಗುವ ಕರ್ಮದ ಕಾರ್ಯವೇ ಉಪಶಮ.

**೧೨. ನಿಧತ್ತಿ ಎಂದರೇನು ?**

ಕೆಲವು ಕರ್ಮಗಳು ಉದೀರಣ ಎಂದರೆ ಉದಯವಾಗಬೇಕಾಗಿದ್ದ ಕಾಲಕ್ಕಿಂತ ಮೊದಲೇ ಉದಯವಾಗುವುದು ಮತ್ತು ಸಂಕ್ರಮಣ ಎಂದರೆ ಕರ್ಮಗಳ ಸ್ಥಿತಿಯು ಬದಲಾಗುವುದು. ಎಂಬೀ ಕ್ರಿಯೆಗಳಾಗುವುದಿಲ್ಲ. ಅಂದರೆ ಉದೀಕರಣ ಮತ್ತು ಸಂಕ್ರಮಣ ಆಗುವುದಿಲ್ಲ. ವೃದ್ಧಿ-ಹಾನಿಯಾಗದೆ ಕೇವಲ ಉತ್ಕರ್ಷಣ-ಅಪಕರ್ಷಣವಾಗುತ್ತವೆ. ಅಂದರೆ ಜಪ-ಧ್ಯಾನ-ಭಜನೆ-ಸ್ವಾಧ್ಯಾಯ, ಪೂಜೆ-ಧರ್ಮಕಾರ್ಯಗಳಲ್ಲಿದ್ದಾಗ ಉದಯವಾದ ಕರ್ಮಗಳು ಫಲ ನೀಡದೆ ತಣ್ಣಗಿರುತ್ತವೆ. ಅಂದರೆ ಆಗ ಅವು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಹಾಗೆಯೇ ಆ ಸಮಯದಲ್ಲಿ ಶುಭ ಕರ್ಮಗಳು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತವೆ. ಹಾಗೆಯೇ ಅಶುಭಕಾರ್ಯದಲ್ಲಿದ್ದಾಗ ಪೂರ್ಣಕರ್ಮಗಳು ತಣ್ಣಗಿದ್ದು ಪಾಪಕರ್ಮಗಳ ಶಕ್ತಿಯು ಹೆಚ್ಚಾಗುತ್ತದೆ. ಆ ಸಮಯದಲ್ಲಿ ಆಗಬಾರದ ಕಾರ್ಯವೂ, ಅಗಾಧವಾದ, ಅಸಾಧ್ಯವಾದ ಘಟನೆಗಳು ಆಗಿಬಿಡುತ್ತವೆ.

**೧೩. ನಿಕಾಚನವೆಂದರೇನು ?**

ಕೆಲವು ತೀವ್ರವಾದ ಪರಿಣಾಮದಲ್ಲಿ ಬಂಧವಾದ ಶುಭಾಶುಭ ಕರ್ಮಗಳು ತಮ್ಮ ಫಲವನ್ನು ನೀಡಿಯೇ ತೀರುತ್ತವೆ. ಇವು ಏನು ಮಾಡಿದರೂ ಅಕಾಮನಿರ್ಜರೆಯಾಗುವುದಿಲ್ಲ ಇವು ಯಾವುದಕ್ಕೂ ಜಗ್ಗುವುದಿಲ್ಲ. ಇವುಗಳ ಫಲವನ್ನು ಅನುಭವಿಸಿಯೇ ತೀರಬೇಕು. ಇವು ಬೇಗ ಉದಯವಾಗುವುದಿಲ್ಲ, ನಿಧಾನವಾಗಿಯೂ ಆಗುವುದಿಲ್ಲ, ಕಡಿಮೆಯೂ ಆಗುವುದಿಲ್ಲ, ಹೆಚ್ಚಾಗಿಯೂ ಆಗುವುದಿಲ್ಲ ಅಥವಾ ಬದಲಾಗವುದೂ ಇಲ್ಲ.

ಇದು ನಿರ್ಧಿಷ್ಟ ಸಮಯದಲ್ಲಿ ಫಕ್ವವಾಗಿ ಉದಯಕ್ಕೆ ಬಂದು ಫಲ ನೀಡಿಯೇಬಿಡುವಂತಹ ಕರ್ಮದ ಸ್ಥಿತಿಯಾಗಿದೆ. ಇದಕ್ಕೆ ನಿಕಾಚನ ಕರ್ಮಸ್ಥಿತಿಯೆನ್ನುವರು. ಮುನಿಗಳು, ತಪಸ್ವಿಗಳು, ಸಜ್ಜನರು, ಉಪಸರ್ಗ-ಪರೀಷಹಗಳನ್ನು ಅನುಭವಿಸುವುದು ಇದರಿಂದಲೇ.



ಆದರೆ ಇಂತಹ ನಿಕಾಚವೂ ಜಿನೇಂದ್ರ ಭಗವಂತನ ದರ್ಶನ, ಸ್ತುತಿ, ಭಜನೆ, ಭಕ್ತಿಯಿಂದ ತಣ್ಣಗಾಗುತ್ತದೆ. ಜಿನದರ್ಶನ, ಸ್ತುತಿಗೆ ಜಗ್ಗದ ಕರ್ಮ ಯಾವುದೂ ಇಲ್ಲ.

**೧೪. ಈ ದಶವಿಧ ಕರ್ಣದ ಸ್ಥಿತಿಯ ಬೋಧೆಯೇನು ?**

ಈ ರೀತಿಯ ದಶಕರ್ಣದ ಸ್ಥಿತಿಯ ಕರ್ಮ ಪರಿವರ್ತನೆಯ ಅರಿವಿನಿಂದ ಸದಾ ಶುಭಪರಿಣಾಮದಿಂದಿರಬೇಕು. ವ್ರತ, ನೇಮ, ಜಪ, ಧ್ಯಾನ, ಜಿನದರ್ಶನ, ಪೂಜೆ, ದಾನ, ಶಾಂತಿ, ಪರಿಣಾಮ, ಸಮಾಧಾನ, ಪರಹಿತ ಬಯಸುವುದು, ದಯಾಭಾವ, ಪಂಚಪದ ಸ್ಮರಣ, ಭಜನೆ, ಮುಂತಾದ ಸತ್ಕಲಾಕ್ಷೇಪದೊಂದಿಗೆ ತನ್ನ ಜೀವನವನ್ನು ಸರಳ-ಸಭ್ಯ-ಸಾತ್ವಿಕ-ಪ್ರಾಮಾಣಿಕವಾಗಿ ನಡೆಸಬೇಕೆಂಬ ಬೋಧೆಯು ಈ ದಶವಿಧ ಕರ್ಣದ ಬಗ್ಗೆ ತಿಳಿಯುವುದರಿಂದಾಗುತ್ತದೆ.

**೧೫. ಕರ್ಮಗಳ ಬಗ್ಗೆ ನಮ್ಮ ಪುರುಷಾರ್ಥವೇನು ?**

ಈ ಹತ್ತೂ ವಿಧಾನಗಳುಳ್ಳ ಕರ್ಮಗಳ ಅವಸ್ಥೆಯ ಬಗ್ಗೆ ವಿಚಾರಮಾಡಿದರೆ ಆತ್ಮವು ತನ್ನ ಪರಿಣಾಮಕ್ಕೆ ತಕ್ಕಂತೆ ಕರ್ಮಗಳನ್ನು ಪ್ರಬಲ, ದುರ್ಬಲ, ಸಬಲ, ಈ ರೀತಿ ಹೆಚ್ಚು-ಕಮ್ಮಿ ಮಾಡಿಕೊಳ್ಳಬಹುದೆಂದು ಗೊತ್ತಾಗುತ್ತದೆ.

ಒಮ್ಮೊಮ್ಮೆ ಜೀವಕ್ಕೆ ಕಟ್ಟಿದ ಕರ್ಮವು ಫಲ ಕೊಡದೆ ಹೋಗಬಹುದು. ಇನ್ನೊಮ್ಮೆ ಕರ್ಮವು ಉದಯವಾಗುವ ಕಾಲಕ್ಕಿಂತ ಮೊದಲೇ ಕರಗಿಹೋಗಬಹುದು. ಮತ್ತೊಮ್ಮೆ ಮುಂಚಿತವಾಗಿಯೇ ನಶಿಸಿಹೋಗಬಹುದು. ಇದೆಲ್ಲಾ ಆತ್ಮನ ಶುಭಾಶುಭ ಪರಿಣಾಮಕಾರ್ಯ ಯೋಗಗಳನ್ನು ಅವಲಂಬಿಸಿದೆ. ಇದಕ್ಕೆ ನಮ್ಮ ಪ್ರಯತ್ನವೂ, ಪುರುಷಾರ್ಥವೂ ಬೇಕು.

ಕಟ್ಟಿಕೊಂಡ ಕರ್ಮವನ್ನು ಅನುಭವಿಸಿಯೇ ತೀರಬೇಕೆಂಬ ನಿಯಮವೇನಿಲ್ಲ. ಜೀವನಲ್ಲಿ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳೆಂಬ ರತ್ನತ್ರಯಗಳು ಪ್ರಾಪ್ತವಾದಾಗ, ಜಪ, ಧ್ಯಾನ, ಜಿನದರ್ಶನ, ವ್ರತ, ನೇಮ, ನಿಯಮಗಳ ಪಾಲನೆಯಿಂದ ಅನೇಕ ಕರ್ಮಗಳು ತನ್ನಿಂದ ತಾನೇ ಕಳಚಿ ಹೋಗುತ್ತವೆ. ಈ ಬೋಧೆಯು ದಶವಿಧ ಕರ್ಣವೆಂಬ ವಿಧಾನವನ್ನು ತಿಳಿಯುವುದರಿಂದ ಆಗುತ್ತದೆ. ಇದರಿಂದ ನಮ್ಮ ನಡೆ-ನುಡಿಗಳು ಸುಧಾರಿಸುತ್ತವೆ. ಶುಭಕಾರ್ಯ, ಭಾವನೆಗಳ ಫಲವೇನೆಂದು ಗೊತ್ತಾಗಿ ಇವನ್ನು ನಮ್ಮ ಜೀವನದಲ್ಲಿ ಅಳಗಡಿಸಿಕೊಂಡು ಬಾಳಬೇಕೆಂಬ ಬೋಧೆಯಾಗುತ್ತದೆ. ಜಿನದರ್ಶನ, ಜಿನಭಕ್ತಿ,

ಸಮ್ಯಕ್ತ್ವದ ಶಕ್ತಿ ಎಂತಹುದು ಎಂದು ಗೊತ್ತಾಗುತ್ತದೆ. ಇದರಿಂದ ನಮ್ಮ ನಡೆ-ನುಡಿಗಳು ಸುಧಾರಿಸುತ್ತವೆ ಆದ್ದರಿಂದ ನಮ್ಮ ಶುಭಯೋಗ, ಶುಭ ಭಾವನೆಗಳಿಂದ ಶುಭವಾದ, ಉತ್ತಮವಾದ ಪುಣ್ಯಬಂಧ ಮಾಡಿಕೊಳ್ಳುವುದು ಒಳ್ಳೆಯದು. ಯಾವ ಸಂದರ್ಭದಲ್ಲೂ ಪಾಪಸಂಪಾದನೆ ಮಾಡಿಕೊಳ್ಳಬಾರದು. ಇವೆಲ್ಲಕ್ಕೂ ಸಮ್ಯಕ್ತ್ವವನ್ನು ಬಹುಶ್ರಮೆಯಿಂದ, ಪ್ರಯತ್ನದಿಂದ, ಪುರುಷಾರ್ಥದಿಂದ ಧಾರಣೆ ಮಾಡಿ ಅದನ್ನು ಕಾಪಾಡಿಕೊಳ್ಳಬೇಕು. ಇದರಿಂದ ಸ್ವರ್ಗಾದಿ ಮೋಕ್ಷ ಲಭಿಸುವುದು.

*ಶ್ರೀಕುಲಂ ಆಪ್ತಗೋತ್ರಂ ಅಮಲಾಂಗಂ ಅತಂದ್ರತೆ, ಸಮ್ಯಗಾಯು*
*ವಿದ್ಯಾಕುಶಲತ್ವಂ ಆದೊಡಂ, ಇದೆನ್ನದು ಇದನ್ಯಂ ಎನುತ್ತೆ ಕಂಡು,*
*ನಿರ್ವ್ಯಾಕುಲನಾಗಿಯೆಲ್ಲರಿಂ ಅಲ್ದು, ಮಣಿತ್ರಯಸಂಪರ್ಕ್ಕೆ*
*ರತ್ನಾಕರನಾದವಂ, ತವಕೃತಾತ್ಮನಲಾ ಅಪರಾಜಿತೇಶ್ವರಾ !*

**ಅರ್ಥ :-** ಶ್ರೀಮಂತ ಕುಲದಲ್ಲಿ ಹಾಗೂ ಉತ್ತಮ ಗೋತ್ರದಲ್ಲಿ ಜನನ, ದೃಢಕಾಯದ ಶರೀರವನ್ನು ಹೊಂದಿರುವುದು, ಚಟುವಟಿಕೆಯಿಂದ ಉತ್ಸಾಹ ಭರಿತನಾಗಿರುವುದು, ಪೂರ್ಣ ಆಯುಷ್ಯವನ್ನು ಹೊಂದಿರುವುದು, ವಿದ್ಯಾ ಪಾರಂಗತನಾಗಿ ಪ್ರತಿಭಾಶಾಲಿಯಾಗಿರುವುದು-ಇವೆಲ್ಲಾ ಪ್ರಾಪ್ತವಾಗಿದ್ದರೂ, ಅವುಗಳಲ್ಲೇ ಮನಸ್ಸಿಟ್ಟು ಮರುಳಾಗದೇ ಯಾವುದು ತನ್ನ ಆತ್ಮಕ್ಕೆ ಹಿತ, ಯಾವುದು ಅಹಿತ ಎಂಬುದನ್ನು ಮನಗಂಡು, ನಿಶ್ಚಿಂತೆಯಿಂದ ಸರ್ವಸಂಗ ಪರಿತ್ಯಾಗಿಯಾಗಿ ರತ್ನತ್ರಯವನ್ನು ಧರಿಸಿದಾಗಲೇ ಆ ಚೇತನ ಅಪರಾಜಿತೇಶ್ವರನ ಕೃಪೆಗೆ ಪಾತ್ರನಾಗುತ್ತಾನೆ. --ರತ್ನಾಕರಕವಿ, ಅಪರಾಜಿತೇಶ್ವರ ಶತಕ.

*ಚಿದ್ರೂಪಃ ಕೇವಲಃ ಶುದ್ಧ ಆನಂದಾತ್ಮೇತ್ಯಹಂ ಸ್ಮರೇ ।*
*ಮುಕ್ತ್ಯೈ ಸರ್ವಜ್ಞೋಪದೇಶಃ ಶ್ಲೋಕಾರ್ಧೇನ ನಿರೂಪಿತಃ ॥*

**ಅರ್ಥ :-** ಈ ಶುದ್ಧ ಚಿದ್ರೂಪವು ಅನ್ಯ ದ್ರವ್ಯಗಳ ಸಂಸರ್ಗದಿಂದ ರಹಿತವಾಗಿ ಒಂದೇ ಇದೆ, ಶುದ್ಧವಿದೆ ಮತ್ತು ಆನಂದಸ್ವರೂಪವಿದೆಯೆಂದು ನಾನು ಸ್ಮರಣೆ ಮಾಡುತ್ತೇನೆ. ಏಕೆಂದರೆ ಇದು ಅರ್ಧಶ್ಲೋಕದಲ್ಲಿ ಹೇಳಲಾದ ಯಾವ ಸರ್ವಜ್ಞ ಭಗವಂತರ ಉಪದೇಶವಿದೆ ಅದುವೇ ಮೋಕ್ಷದ ಕಾರಣವಿದೆ. ---ತತ್ತ್ವಜ್ಞಾನತರಂಗಿಣಿ.



## ೫೬ ಧ್ಯಾನ

**೧. ಧ್ಯಾನ ಎಂದರೇನು ?**

ಅತಿ ಚಂಚಲವಾದ ಮನಸ್ಸನ್ನು ಒಂದೇ ವಿಷಯದಲ್ಲಿ ಸ್ಥಿರಗೊಳಿಸಿ ಆ ವಿಷಯವನ್ನು ಚಿಂತಿಸುವುದಕ್ಕೆ ಧ್ಯಾನವೆನ್ನುತ್ತಾರೆ."ಏಕಾಗ್ರಶ್ಚಿಂತನಾ ನಿರೋಧೋ ಧ್ಯಾನಂ" ಎಂದರೆ ಏಕಾಗ್ರತೆಯಿಂದ ಒಂದೇ ವಿಷಯದ ಬಗ್ಗೆ ಚಿಂತನ-ಮನನ ಮಾಡುವುದೇ ಧ್ಯಾನ, ಇತರ ಎಲ್ಲಾ ಚಿಂತೆಯನ್ನು ಬಿಟ್ಟು ಒಂದೇ ವಿಚಾರವನ್ನು ಕುರಿತು ಚಿಂತಿಸುವುದರಲ್ಲಿ ಮನದ ಪರಿಣಾಮವನ್ನು ತೊಡಗಿಸುವುದು ಧ್ಯಾನವೆನಿಸಿದೆ.





**೨. ಧ್ಯಾನವು ಎಷ್ಟು ಹೊತ್ತು ಇರುತ್ತದೆ ?**

ಧ್ಯಾನವು ಉತ್ತಮಸಂಹನನ (ಶರೀರದ ಶಕ್ತಿ) ಇರುವವರಿಗೆ ಒಂದು ಅಂತರ್ಮುಹೂರ್ತ ಅಂದರೆ ಒಂದು ಸಮಯದಿಂದ ಹಿಡಿದು ಹೆಚ್ಚು ಎಂದರೆ ೪೭ ನಿಮಿಷದ ವರೆಗೆ ಮಾತ್ರ ಇರುತ್ತದೆ. ಮನಸ್ಸನ್ನು ಅಷ್ಟು ಕಾಲ ಮಾತ್ರ ನಿಲ್ಲಿಸಲು ಸಾಧ್ಯ. ಅದೂ ಪರಿಣತರಾದ ತಪಸ್ವಿಗಳೂ, ಸಾಧಕರೂ, ವೃದ್ಧಿಯುಳ್ಳವರಿಗೆ ಮಾತ್ರ ಸಾಧ್ಯ. ವಜ್ರವೃಷಭನಾರಾಚಸಂಹನನ (ವಜ್ರಕಾಯ ಶರೀರ ಉಳ್ಳವನು) ವಜ್ರನಾರಾಚಸಂಹನನ, ನಾರಾಚಸಂಹನ ಎಂಬ ಈ ಮೂರೂ ಉತ್ತಮ ಸಂಹನನ ಉಳ್ಳವರಿಗೆ, ಒಂದೇ ಉತ್ತಮವಾದ ವಿಷಯದ ಬಗ್ಗೆ ತಮ್ಮ ಮನಸ್ಸನ್ನು ಏಕಾಗ್ರಗೊಳಿಸಲು ಸಾಧ್ಯ, ನಿಜವಾಗಿ ಇದು ಆತ್ಮಧ್ಯಾನವಾಗಿದೆ. ಸಂಹನನ ಎಂದರೆ ಶರೀರ.

**೩. ಆತ್ಮಧ್ಯಾನವು ಯಾರಿಗೆ ಸಾಧ್ಯವಿಲ್ಲ ?**

ತೀರಾ ಚಂಚಲ ಸ್ವಭಾವದವರಿಗೆ, ಹೇಡಿಗಳಿಗೆ, ಸಾಂಸಾರಿಕ ಕ್ರಿಯೆಗಳಲ್ಲಿ ತೊಡಗಿರುವವರಿಗೆ, ಆರಂಭಪರಿಗ್ರಹಿಗಳಿಗೆ ಕೋಪ-ಸಂತಾಪವಿರುವವರಿಗೆ-ಹಿಂಸಕರಿಗೆ, ಅವ್ರತಿಗಳಿಗೆ, ಅಸಂಯಮಿಗಳಿಗೆ, ಮಾಯಾಚಾರಿಗಳಿಗೆ, ಭೋಜನ, ಶಯನಗಳೇ ಆದಿಯಾಗಿ ವಿಷಯ-ಕಷಾಯ ಯುಕ್ತರಾದವರಿಗೆ ಮತ್ತು ಹೀನ ಸಂಹನನದವರಿಗೆ ಆತ್ಮಧ್ಯಾನ ಸಾಧ್ಯವಿಲ್ಲ.

**೪. ಧ್ಯಾನದ ವಿಧಗಳಾವುವು ?**

ಧ್ಯಾನದಲ್ಲಿ ಮುಖ್ಯವಾಗಿ ೩ ವಿಧ :-

1. ಶುಭ ಧ್ಯಾನ 2. ಅಶುಭ ಧ್ಯಾನ 3. ಶುದ್ಧ ಧ್ಯಾನ.

**೫. ಶುಭಧ್ಯಾನಗಳಾವುವು ?**

ಧರ್ಮಧ್ಯಾನವು ಶುಭಧ್ಯಾನವಾಗಿದೆ.

**೬. ಶುದ್ಧಧ್ಯಾನ ಯಾವುದು ?**

ಶುಕ್ಲಧ್ಯಾನವು ಶುದ್ಧ ಧ್ಯಾನವಾಗಿದೆ.

**೭. ಅಶುಭ ಧ್ಯಾನಗಳಾವುವು ?**

ಆರ್ತಧ್ಯಾನ ಮತ್ತು ರೌದ್ರಧ್ಯಾನಗಳು ಅಶುಭಧ್ಯಾನಗಳು.

ಹೀಗೆ ಧ್ಯಾನವು ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನ ಎಂದು ನಾಲ್ಕು ವಿಧವಾಗಿದೆ.

**೮. ಆರ್ತಧ್ಯಾನ ಎಂದರೇನು ?**

ನೋವು, ನಲಿವು, ಸಂಕಟಗಳಿಂದ ಸುಮ್ಮನೇ ಕೊರಗುವುದು, ನಷ್ಟವಾದಾಗ, ಕಾರ್ಯ ಕೈಗೂಡದಿದ್ದಾಗ, ದುಃಖಿಸುವುದು, ದೀನ-ದರಿದ್ರತೆಯಿಂದ ನೋಯುವುದು ಮುಂತಾದವು ಆರ್ತಧ್ಯಾನವಾಗಿದೆ.

**೯. ಆರ್ತಧ್ಯಾನದ ಭೇದಗಳಾವುವು ?**

ಇಷ್ಟವಿಯೋಗ, ಅನಿಷ್ಟ ಸಂಯೋಗ, ವೇದನೆ, ನಿದಾನ ಎಂಬೀ ನಾಲ್ಕು ಆರ್ತಧ್ಯಾನದ ಭೇದಗಳು.



**೧೦. ಇಷ್ಟವಿಯೋಗವೆಂದರೇನು ?**

ತನಗೆ ಅನುಕೂಲವಾದುದೂ, ತನ್ನಲ್ಲಿದ್ದ ಧನ, ಧಾನ್ಯ-ವಸ್ತು, ವಾಹನ, ಮನೆ-ಮಡದಿ-ಪುತ್ರ ಮುಂತಾದವರು ಇಲ್ಲವಾದಾಗ ದುಃಖಿಸುವುದು ಇಷ್ಟ ವಿಯೋಗ ಆರ್ತಧ್ಯಾನವಾಗುತ್ತದೆ. ತನಗೆ ಇಷ್ಟವಾದ ವಸ್ತುಗಳು ಕಳೆದರೆ, ವಿಯೋಗವಾದರೆ ದುಃಖವಾಗುವುದು ಇಷ್ಟವಿಯೋಗವಾಗುತ್ತದೆ.

**೧೧. ಅನಿಷ್ಟ ಸಂಯೋಗವೆಂದರೇನು ?**

ತನಗೆ ಬೇಡವಾದ, ಇಷ್ಟವಿಲ್ಲದುದು ಒದಗಿದಾಗ ದುಃಖವಾಗುತ್ತದೆ. ನಷ್ಟವಾದಾಗ, ಹಾನಿಯಾದಾಗ, ಭಯ, ಶತ್ರು, ಬಡತನ, ಚಳಿ, ಮಳೆ ಮುಂತಾದವು ತನಗೆ ಬೇಡವಾದ, ಅನಿಷ್ಟವಾದ ಪೀಡೆಗಳು ಉಂಟಾದಾಗ ದುಃಖಿಸುವುದು ಅನಿಷ್ಟಸಂಯೋಗವೆಂಬ ಆರ್ತಧ್ಯಾನವಾಗಿದೆ.

**೧೨. ವೇದನಾ ಆರ್ತಧ್ಯಾನವೆಂದರೇನು ?**

ರೋಗ-ರುಜಿನ, ಅಪಘಾತ, ಬಡತನ, ಅಂಗಹೀನತೆ, ಮುಪ್ಪು, ಅಸಮರ್ಥತೆ, ಭಯ, ಪೀಡೆ ಮುಂತಾದವುಗಳಿಂದ ತನಗೆ ನೋವು, ವೇದನೆಯಾಗುವುದರಿಂದ ದುಃಖಿಸುವುದು ವೇದನಾ ಆರ್ತಧ್ಯಾನವಾಗಿದೆ.

**೧೩. ನಿದಾನ ಆರ್ತಧ್ಯಾನವೆಂದರೇನು ?**

ತನಗೆ ಅದಾಗಬೇಕು, ಇದಾಗಬೇಕು, ಲಾಭ ಬರಬೇಕು, ಉತ್ತಮಗತಿ ಸಿಗಬೇಕು, ತಾನು ದೊಡ್ಡ ವಿದ್ಯಾವಂತನಾಗಬೇಕು, ದೊಡ್ಡ ಹುದ್ದೆ ಸಿಗಬೇಕು, ವಸ್ತು-ವಾಹನ, ಮನೆ-ಆಸ್ತಿಗಳ ಮಾಲೀಕನಾಗಬೇಕೆಂದು ಕೊರಗುವುದು ನಿದಾನ ಆರ್ತಧ್ಯಾನವಾಗಿದೆ.

**೧೪. ಆರ್ತಧ್ಯಾನದ ಚಿಹ್ನೆಗಳಾವುವು ?**

ಭಯಪಡುವುದು, ಶೋಕಿಸುವುದು, ದುಃಖದಿಂದ ಕೊರಗುವುದು, ಸಂಶಯಗ್ರಸ್ತರಾಗಿರುವುದು, ತಪ್ಪುಮಾಡುವುದು, ಕಲಹ, ಚಿಂತೆ, ಯೋಚನೆ, ಚಂಚಲ ಸ್ವಭಾವ, ಉನ್ಮಾದ, ನಿದ್ರೆ, ಭ್ರಮೆ, ಮೂರ್ಛೆ ರೋಗದ ವೇದನೆ, ನರಳಾಟ, ಗೋಳಾಟ ಮುಂತಾದವು ಆರ್ತಧ್ಯಾನದ ಬಾಹ್ಯ ಚಿಹ್ನೆಗಳಾಗಿವೆ.

**೧೫. ಆರ್ತಧ್ಯಾನ ಮಾಡುವುದರಿಂದ ಆಗುವ ಹಾನಿ ಏನು ?**

ಆರ್ತಧ್ಯಾನದಿಂದ ದುರ್ಗತಿಯಾಗುತ್ತದೆ. ತಿರ್ಯಂಚರಾಗಿ ಜನಿಸುತ್ತಾರೆ.

ಮನೋವ್ಯಾಧಿಯಿಂದ ನರಳುತ್ತಾರೆ. ಸದಾ ದುಃಖವನ್ನು ಅನುಭವಿಸ ಬೇಕಾಗುತ್ತದೆ. ಆರ್ತಧ್ಯಾನಿಗಳಿಗೆ ಸಮ್ಯಕ್ತ್ವ ಪ್ರಾಪ್ತವಾಗುವುದಿಲ್ಲ. ಸದಾ ಮಿಥ್ಯಾದೃಷ್ಟಿಗಳಾಗಿರುತ್ತಾರೆ ಮತ್ತು ಬಹಿರಾತ್ಮರಾಗಿರುತ್ತಾರೆ. ಇವರು ಆತ್ಮ - ಧರ್ಮ ನಂಬುವುದಿಲ್ಲ.

**೧೬. ರೌದ್ರಧ್ಯಾನ ಎಂದರೇನು ?**

ಕೋಪ, ತಾಪ, ಸಿಡುಕು, ಸಿಟ್ಟು, ಒರಟುತನ, ಹಿಂಸಾಭಾವ, ದುಡುಕು ತನ, ಪಂಚಪಾಪಗಳಲ್ಲಿ ಆಸಕ್ತಿಯ ಭಾವನೆಯನ್ನು ಹೊಂದಿ ಅದೇ ಚಿಂತನೆ ಯಲ್ಲೇ ತೊಡಗಿರುವುದು ರೌದ್ರಧ್ಯಾನ. ಈ ಭಾವನೆಯವರಿಗೆ ನಿರ್ದಯ ವಿರುತ್ತದೆ. ಧರ್ಮ-ಕರ್ಮ, ಪಾಪ-ಪುಣ್ಯಗಳ ಬಗ್ಗೆ ಆಸಕ್ತಿ ಇರುವುದಿಲ್ಲ. ಪರರಿಗೆ ಕೆಡುಕನ್ನೇ ಮಾಡುವ ದುರ್ಭಾವವಿರುತ್ತದೆ. ಸದಾ ಅಶುಭ ಪರಿಣಾಮದಿಂದ ಇರುತ್ತಾರೆ. ಇವರು ಮಿಥ್ಯಾದೃಷ್ಟಿಗಳಾಗಿರುತ್ತಾರೆ.

**೧೭. ರೌದ್ರಧ್ಯಾನದ ಭೇದಗಳಾವುವು ?**

ರೌದ್ರಧ್ಯಾನದಲ್ಲಿ 4 ಭೇದಗಳಿವೆ :- 1. ಹಿಂಸಾನಂದ 2. ಮೃಷಾನಂದ 3. ಚೌರ್ಯಾನಂದ 4. ಪರಿಗ್ರಹಾನಂದ.

**೧೮. ಹಿಂಸಾನಂದ ಎಂದರೇನು ?**

ಪ್ರಾಣಿಹಿಂಸೆಯನ್ನು ತಾನು ಮಾಡುವುದು, ಬೇರೆಯವರಿಂದ ಮಾಡಿಸು ವುದು, ಹಿಂಸೆಯನ್ನು ಮಾಡುವ ಭಾವನೆ ಹೊಂದಿರುವುದು, ವಿನಾಕಾರಣ ಪರಿಸರ ಹಾಳುಮಾಡುವುದು. ಗಿಡಮರಗಳನ್ನು ಕಡಿಯುವುದು. ಪ್ರಾಣಿಗಳಿಗೆ ನೋವನ್ನುಂಟುಮಾಡಿ, ಅವು ನೋಯುತ್ತಿದ್ದರೆ ಅದನ್ನು ನೋಡಿ ತಾನು ಆನಂದ ಪಡುವುದು ಹಿಂಸಾನಂದ ಎಂಬ ರೌದ್ರಧ್ಯಾನವಾಗಿದೆ. ರೌದ್ರಧ್ಯಾನಿಗೆ ದಯಾ, ಕರುಣೆ, ಪರೋಪಕಾರ, ಅಹಿಂಸೆಯ ಭಾವನೆ ಇರುವುದಿಲ್ಲ.

**೧೯. ಮೃಷಾನಂದ ಎಂದರೇನು ?**

ಅಸತ್ಯವೇ ಮೃಷೆ. ಸುಳ್ಳು ಹೇಳುವುದು, ಮೋಸಮಾಡುವುದು, ಪರರನ್ನು ವಂಚಿಸುವುದು, ಕಲ್ಪಿತ ವಿಷಯಗಳ ಪ್ರಚಾರ ಮಾಡುವುದು, ಸದಾ ಇತರರಿಗೆ ಮೋಸ ಮಾಡುವುದರಲ್ಲೇ ಆಸಕ್ತಿ ಇರುವುದು, ಯಂತ್ರ, ಮಂತ್ರ, ತಂತ್ರ, ಮಾಟ, ಇಂದ್ರಜಾಲ, ಮಾಯಾ, ಮೋಡಿಗಳಿಂದ ಜನರನ್ನು ಮೋಸಮಾಡುವುದು.



ತನ್ನ ಚಮತ್ಕಾರಕ್ಕೆ, ತನ್ನ ಮೋಸಕ್ಕೆ ಒಳಗಾದ ಜನರು ದುಃಖಿಸುವುದನ್ನು ಕಂಡು ತಾನು ಆನಂದ ಪಡುವುದಕ್ಕೆ ಮೃಷಾನಂದ ರೌದ್ರಧ್ಯಾನವೆನ್ನುವರು.

**೨೦. ಚೌರ್ಯಾನಂದ ಎಂದರೇನು ?**

ಚೌರ್ಯ ಎಂದರೆ ಕಳ್ಳತನ, ಕಳವು ಮಾಡುವ ಚಿಂತೆಯಲ್ಲಿ ತೊಡಗು ವುದು. ಪರರ ವಸ್ತುಗಳನ್ನು ಧನಾದಿಗಳನ್ನು ಅಪಹರಿಸುವುದು, ಪರರಿಂದ ಪಡೆದ ಹಣ-ವಸ್ತುಗಳನ್ನು ಹಿಂದಿರುಗಿಸದೆ ಮೋಸ ಮಾಡುವುದು ಇತರರನ್ನು ವಂಚಿಸಿ ಅವರ ಒಡವೆ-ವಸ್ತುಗಳನ್ನು ಕದಿಯುವುದರಲ್ಲಿ ಸದಾ ಮಗ್ನನಾಗಿ ಅದರ ಬಗ್ಗೆಯೇ ಚಿಂತೆ ಮಾಡುವುದು, ಕಳ್ಳತನವೇ ಆನಂದವಾಗಿರುವ ಭಾವನೆಯೇ ಚೌರ್ಯಾನಂದವೆಂಬ ರೌದ್ರಧ್ಯಾನವಾಗಿದೆ.

**೨೧. ಪರಿಗ್ರಹಾನಂದ ರೌದ್ರಧ್ಯಾನವೆಂದರೇನು ?**

ಧನ-ಧಾನ್ಯ, ವಸ್ತು-ವಾಹನ, ಪೀಠೋಪಕರಣ ಮುಂತಾದವುಗಳನ್ನು ಕೂಡಿಹಾಕುವುದರಲ್ಲೇ ತತ್ಪರನಾಗಿರುವುದು, ಸಂಗ್ರಹ ಭಾವನೆ ಇರುವುದು, ಆರಂಭಾದಿ ಪರಿಗ್ರಹದಿಂದ ಅತ್ಯಾಸೆಯಿಂದ, ಮೋಹದಿಂದ, ಮೋಸಮಾಡಿ ಧನಸಂಚಯ ಮಾಡುವುದರಲ್ಲೇ ಆನಂದವನ್ನು ಅನುಭವಿಸುವುದು ಪರಿಗ್ರಹಾ ನಂದ ರೌದ್ರಧ್ಯಾನವಾಗಿದೆ.

**೨೨. ರೌದ್ರಧ್ಯಾನದ ಚಿಹ್ನೆಗಳಾವುವು ?**

ಸದಾ ಸಿಟ್ಟು, ಕೋಪ-ತಾಪದಿಂದಿರುವುದು, ಮಾತಾಡಿಸಿದರೆ ಮೇಲೆ ಬೀಳುವುದು, ದುರ್ಭಾವನೆ, ಬೈಗುಳ, ದುರ್ವಚನ, ಭಯಂಕರ ರೂಪ, ಸಿಡುಕು ಸ್ವಭಾವ, ಅನ್ಯರಿಗೆ ತೊಂದರೆ ಕೊಟ್ಟು ಸಂತೋಷ ಪಡುವ ಸ್ವಭಾವ ವಿರುವುದು ರೌದ್ರಧ್ಯಾನಿಯ ಬಾಹ್ಯಚಿಹ್ನೆಗಳು.

**೨೩. ರೌದ್ರಧ್ಯಾನದಿಂದಾಗುವ ಹಾನಿ ಏನು ?**

ರೌದ್ರಧ್ಯಾನಿಗೆ ಯಾವಾಗಲೂ ಹಿಂಸೆ ಮುಂತಾದ ಪಾಪಕಾರ್ಯಗಳನ್ನು ಮಾಡುವ ಭಾವನೆಯಿಂದ ಇದು ಅಶುಭವಾಗಿ ಪಾಪಕರ್ಮ ಬಂಧವಾಗುತ್ತದೆ. ಇದರಿಂದ ನರಕಾದಿ ದುರ್ಗತಿ ಹೊಂದಿ ದುಃಖಪಡಬೇಕಾಗುತ್ತದೆ. ಜನರನ್ನು ಕಳ್ಳತನ-ಸುಳ್ಳುಗಳಿಂದ ವಂಚಿಸುವುದರಿಂದ ತಿರ್ಯಂಚ ಗತಿಗಳಲ್ಲಿ ಜನ್ಮತಾಳಿ ದುಃಖಪಡಬೇಕಾಗುತ್ತದೆ. ರೌದ್ರಧ್ಯಾನದಿಂದ ಧರ್ಮ-ವ್ರತ, ಸಮ್ಯಕ್ತ್ವ ಪ್ರಾಪ್ತ

ವಾಗುವುದಿಲ್ಲ. ಆತ್ಮಧ್ಯಾನ ಆಗುವುದಿಲ್ಲ, ಮಿಥ್ಯಾದೃಷ್ಟಿ ಬಹಿರಾತ್ಮನಾಗಿರುತ್ತಾನೆ. ರೌದ್ರಧ್ಯಾನಿಗೆ ಸಮ್ಯಕ್ತ್ವ ಉಂಟಾಗುವುದಿಲ್ಲ.

**೨೪. ಧರ್ಮಧ್ಯಾನದ ಲಕ್ಷಣ ಮತ್ತು ಚಿಹ್ನೆ ಏನು ?**

ಶುಭಭಾವನೆ, ಶುಭಕಾರ್ಯಾಸಕ್ತಿ, ಧರ್ಮಚಿಂತನೆ, ಧಾರ್ಮಿಕ ವೃತ್ತಿ, ದಯೆ, ಅನುಕಂಪ, ತಾಳ್ಮೆ, ಶಾಂತಿ, ಸಹನೆ, ಜಿನದೇವ-ಗುರು-ಶಾಸ್ತ್ರಗಳಲ್ಲಿ ಶ್ರದ್ಧೆ, ಭಕ್ತಿ, ಪೂಜೆ, ವ್ರತ, ನೇಮ, ನಿಷ್ಠೆ, ಆತ್ಮವಿಶ್ವಾಸ, ಉತ್ತಮ ಮನೋಭಾವ, ಧ್ಯಾನ, ಜಪ, ಸತ್ಕಾಲಕ್ಷೇಪ, ಸರಳ-ಸಾತ್ವಿಕವೃತ್ತಿ, ಉಪಕಾರೀ ಮನೋಭಾವ, ಸೌಜನ್ಯತೆ, ಮಾನವೀಯತೆ, ರಾಗ-ದ್ವೇಷಗಳನ್ನು ಮಾಡದಿರುವುದು, ಮಂದ ಕಷಾಯಿಯಾಗಿರುವುದು, ಸತ್ಪರಿಣಾಮಿಯಾಗಿರುವುದು, ಪಾಪಕಾರ್ಯಗಳನ್ನು ತ್ಯಜಿಸುವುದು, ಕೋಪ-ತಾಪ ಬಿಟ್ಟಿರುವುದು, ದುರ್ಭಾವ, ದುಃಖ-ದುಮ್ಮಾನ ವಿಲ್ಲದಿರುವುದೂ, ಮಿಥ್ಯಾತ್ವ, ಮೂಢನಂಬಿಕೆಗಳನ್ನು ಬಿಟ್ಟು ಸಮ್ಯಗ್ದೃಷ್ಟಿಯಾಗಿರುವುದು, ಸಪ್ತವ್ಯಸನ, ದುರಾಚಾರಗಳನ್ನು ಬಿಟ್ಟಿರುವುದು ಮುಂತಾದವುಗಳೆಲ್ಲ ಧರ್ಮಧ್ಯಾನವೆನಿಸುತ್ತದೆ. ಧರ್ಮವು ಶುಭಧ್ಯಾನವಾಗಿದೆ. ಯಾರ ಮನ-ವಚನ-ಕಾಯಗಳ ಕ್ರಿಯೆಗಳು ಶುಭವೂ, ಉತ್ತಮವೂ ಆಗಿರುತ್ತದೋ ಅವರು ಧರ್ಮಧ್ಯಾನಿಗಳಾಗಿರುತ್ತಾರೆ ಅವರು ಧಾರ್ಮಿಕರಾಗಿರುತ್ತಾರೆ.

**೨೫. ಧರ್ಮಧ್ಯಾನದ ಭೇದಗಳಾವುವು ?**

ಧರ್ಮಧ್ಯಾನವು ೪ ವಿಧವಾಗಿದೆ :-

1. ಆಜ್ಞಾವಿಚಯ 2. ಅಪಾಯವಿಚಯ 3. ವಿಪಾಕವಿಚಯ 4. ಸಂಸ್ಥಾನವಿಚಯ. ವಿಚಯ ಎಂದರೆ ವಿಚಾರ ಮಾಡುವುದು.

**೨೬. ಆಜ್ಞಾವಿಚಯ ಎಂದರೇನು ?**

ಸರ್ವಜ್ಞ ಜಿನೇಂದ್ರರು ಹೇಳಿರುವ ಧರ್ಮದ ಆಜ್ಞೆಯನ್ನು ಕಟ್ಟುಪಾಡುಗಳನ್ನು, ವಿಧಿ-ವಿಧಾನಗಳನ್ನು, ರೀತಿ-ನೀತಿಗಳನ್ನು ನಂಬಿ, ಇವು ಸತ್ಯವಾದವುಗಳೆಂದು ತಿಳಿದು, ಇವುಗಳ ಬಗ್ಗೆ ವಿಚಾರ-ಮನನ-ಆಚರಣೆ ಮಾಡುವುದು ಆಜ್ಞಾವಿಚಯವೆನಿಸುತ್ತದೆ. ಜಿನವಾಣಿಯ ವಿಷಯವು ಪ್ರಮಾಣವೂ, ಆಧಾರವೂ, ಆತ್ಮಕಲ್ಯಾಣಕ್ಕೆ ಸಹಕಾರಿಯೂ ಎಂದು ನಂಬಿ, ತಿಳಿದು, ಆಚರಿಸುವುದು ಜಿನದೇವ, ಜಿನಗುರು, ಜಿನವಾಣಿ, ಜಿನಧರ್ಮದಲ್ಲಿ ದೃಢವಾದ ಶ್ರದ್ಧಾ-ಭಕ್ತಿ ಇಟ್ಟು,ಅದರಂತೆ ತಿಳಿದು, ಪಾಲಿಸುವುದು ಆಜ್ಞಾವಿಚಯವಾಗಿದೆ.



**೨೭. ಅಪಾಯವಿಚಯ ಎಂದರೇನು ?**

ಜಿನಧರ್ಮಕ್ಕೆ, ಸದ್ಧರ್ಮಕ್ಕೆ ಸಂಭವಿಸಿದ ಅಪಾಯಗಳನ್ನೂ, ಅವುಗಳ ನಿವಾರಣೆಗಳಿಗೆ ಉಪಾಯಗಳನ್ನೂ ದೂರಮಾಡುವ ಬಗ್ಗೆ ಚಿಂತನೆ ಮಾಡುವುದು ಮೋಕ್ಷಮಾರ್ಗಕ್ಕೆ ಒದಗುವ ಮಿಥ್ಯಾತ್ವ, ದುಷ್ಪರಿಂದಾಗುವ ಉಪಟಳವನ್ನು ನಿವಾರಿಸುವ ಬಗ್ಗೆ ಚಿಂತನೆ ಮಾಡಿ, ಅವುಗಳ ನಿವಾರಣೆಗೆ ಪ್ರಯತ್ನಿಸುವುದು ಮತ್ತು ತನ್ನಿಂದ ಧರ್ಮಕ್ಕೆ ಯಾವ ಅಪವಾದ, ಧಕ್ಕೆ, ಕಳಂಕ, ದೋಷ ಬರಬಾರದೆಂದು ಎಚ್ಚರ ವಹಿಸುವುದ ಅಪಾಯವಿಚಯ ಧರ್ಮಧ್ಯಾನವಾಗಿದೆ. ತನ್ನ ಆತ್ಮೋನ್ನತಿಗೆ, ಸತ್ಪರಿಣಾಮಕ್ಕೆ , ತಾನು ನಂಬಿಕೆಗೆ ಯಾವ ಅಪಾಯವೂ ಬರದಂತೆ ಎಚ್ಚರವಹಿಸುವುದು ಅಪಾಯವಿಚಯವೆನ್ನುವರು, ಆತ್ಮಶಾಂತಿಗೆ ಅಡ್ಡವಾಗಿರುವ ಕರ್ಮಗಳನ್ನು ಕಳೆದುಕೊಳ್ಳುವ ಬಗ್ಗೆ ಚಿಂತನ ಮಾಡುವುದೂ ಅಪಾಯವಿಚಯವಾಗಿದೆ.

**೨೮. ವಿಪಾಕವಿಚಯವೆಂದರೇನು ?**

ತಾವು ಈ ಹಿಂದೆ ಮಾಡಿರುವ ಕರ್ಮವು ಈಗ ಉದಯಕ್ಕೆ ಬಂದು ಸುಖವೋ, ದುಃಖವೋ ಅನುಭವಿಸುವಾಗ ವಿಕಾರವಾಗದೆ, ಹರ್ಷ-ವಿಷಾದ ಪಡದೆ, ಕರ್ಮಗಳ ವೈಚಿತ್ರ್ಯಗಳನ್ನು ವಿಚಾರ ಮಾಡುವುದು, ಸತ್ಕರ್ಮದಿಂದ ಸದ್ಗತಿ-ದುಷ್ಕರ್ಮದಿಂದ ದುರ್ಗತಿಯಾಗುವುದೆಂದು ತಿಳಿದು, ಅಶುಭವೂ, ದುರಿತ ದುಃಖಕ್ಕೆ ಕಾರಣವಾದ ಕಾರ್ಯಗಳಲ್ಲಿ ತೊಡಗದೆ, ದುರ್ವಿಚಾರ, ದುರ್ಭಾವನೆ ಮಾಡದೆ ಇರುವುದು, ಸದ್ಭಾವನೆಯಲ್ಲಿದ್ದು ಆತ್ಮಧ್ಯಾನದಲ್ಲಿ ತೊಡಗಿ, ಕರ್ಮಗಳು ಉದಯಕ್ಕೆ ಬಂದು ಕಾಡದಂತೆ ಕಾರ್ಯಮಗ್ನವಾಗುವುದು ವಿಪಾಕವಿಚಯವೆಂಬ ಧರ್ಮಧ್ಯಾನವಾಗಿದೆ.

**೨೯. ಸಂಸ್ಥಾನ ವಿಚಯ ಎಂದರೇನು ?**

ಈ ಲೋಕದ ಮತ್ತು ತನ್ನ ಶರೀರದ ಬಗ್ಗೆ ವಿಚಾರ ಮಾಡುವುದು, ಲೋಕಾಕೃತಿಯನ್ನು ಚಿಂತನೆ ಮಾಡುವುದು, ಈ ಲೋಕದಲ್ಲಿ ತನ್ನ ಗತಿ-ಸ್ಥಳ ಇಲ್ಲಿ ಅನುಭವಿಸುವ ಸುಖ-ದುಃಖಗಳನ್ನು ವಿಚಾರ ಮಾಡುವುದು, ಸ್ವರ್ಗ-ನರಕ-ಮಾನವ-ತಿರ್ಯಂಚ ಗತಿಗಳಿಗೆ ಕಾರಣವನ್ನು ಚಿಂತಿಸುವುದು. ಈ ಜಗತ್ತಿನಲ್ಲಿ ಉತ್ತಮಗತಿ-ನೀಚಗತಿಗಳಲ್ಲಿ ಹುಟ್ಟಿ, ಸುಖ-ದುಃಖಗಳನ್ನು ಅನುಭವಿಸುವುದಕ್ಕೆ ತನ್ನ ಹಿಂದಿನ ಕರ್ಮಗಳೇ ಕಾರಣವೆಂದು ತಿಳಿದು, ಮುಂದೆ

ಉತ್ತಮ ಗತಿಗಳಲ್ಲಿ ಸುಖಿಯಾಗಿ ಬಾಳಲು ಬೇಕಾದ ಶುಭಕರ್ಮಗಳಲ್ಲಿ, ಶುಭ ವಿಚಾರಗಳಲ್ಲಿ ಆಸಕ್ತನಾಗುವುದನ್ನು ಸಂಸ್ಥಾನವಿಚಯ ಧರ್ಮಧ್ಯಾನವೆನ್ನುವರು.

**೩೦. ಧ್ಯಾನದ ಸ್ವರೂಪವೇನು ? ಅದರ ಭೇದಗಳಾವುವು ?**

ಧರ್ಮಾನುಸರಣೆಯಿಂದ, ಧರ್ಮಭಾವನೆಯಿಂದ, ಆತ್ಮಕಲ್ಯಾಣವಾಗುವುದೆಂದು ನಂಬುವುದರಿಂದ ಈ ಧರ್ಮಧ್ಯಾನವು ಅವಿರತ ಸಮ್ಯಗ್ದೃಷ್ಟಿಯಾದವರಿಗೆ ಲಭಿಸುವುದು. ಇದು ಮುಂದಿನ ಗುಣಸ್ಥಾನದವರೆಗೆ ಹೆಚ್ಚುತ್ತಾ ಹೋಗಿ ಅಪ್ರಮತ್ತವೆಂಬ 7ನೇ ಗುಣಸ್ಥಾನದವರೆಗೆ ತಲುಪುತ್ತದೆ. ಧರ್ಮಧ್ಯಾನದಲ್ಲಿ ತೊಡಗಿದವನು ಯಾವ ತಪ್ಪನ್ನೂ, ದೋಷವನ್ನೂ ಮಾಡದೆ ಧರ್ಮದಲ್ಲಿ ಸದಾ ಆಸಕ್ತನಾಗಿರುತ್ತಾನೆ.

ಈ ಧರ್ಮಧ್ಯಾನವು ಆತ್ಮಕಲ್ಯಾಣಕ್ಕೆ ಕಾರಣವಾಗಿರುವುದರಿಂದ ಕರ್ಮನಿರ್ಜರೆಗೆ ಸಾಧನವಾಗಿರುವುದರಿಂದ ಇದರಲ್ಲಿ ಮತ್ತೆ ಕೆಲವು ಕ್ರಮಗಳನ್ನು ಅನುಸರಿಸಬೇಕು.

ಧರ್ಮಧ್ಯಾನದಲ್ಲಿ ನಾಲ್ಕುವಿಧ :-

1. ಪದಸ್ಥ ಧರ್ಮಧ್ಯಾನ
2. ಪಿಂಡಸ್ಥ ಧರ್ಮಧ್ಯಾನ
3. ರೂಪಸ್ಥ ಧರ್ಮಧ್ಯಾನ
4. ರೂಪಾತೀತ ಧರ್ಮಧ್ಯಾನ.

**೩೧. ಪದಸ್ಥ ಧರ್ಮಧ್ಯಾನವೆಂದರೇನು ?**

ಪಂಚನಮಸ್ಕಾರಾದಿ ಮಂತ್ರಗಳನ್ನೂ, ಬೀಜಾಕ್ಷರಗಳನ್ನೂ ಜಪಮಾಡುವುದು, ಅವುಗಳ ಸ್ವರೂಪವನ್ನು ಧ್ಯಾನ ಮಾಡುವುದು, ಅವುಗಳನ್ನು ತನ್ನ ಶರೀರದ ಒಳಗೆ ರೂಪಿಸಿಕೊಂಡು ಚಿಂತಿಸುವುದು, ಮಂತ್ರಗಳನ್ನು ಅವುಗಳ ಅರ್ಥವನ್ನು ಚಿಂತಿಸುವುದು; ಇದಕ್ಕೆ ಪದಸ್ಥ ಧರ್ಮಧ್ಯಾನವೆಂದು ಹೆಸರು.

ಅರಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸಾಧುಗಳ ಗುಣಾವಳಿಯೊಂದಿಗೆ ಜಪಿಸುವುದೂ, ಪದಸ್ಥ ಧರ್ಮಧ್ಯಾನವಾಗಿದೆ.

**೩೨. ಪಿಂಡಸ್ಥ ಧರ್ಮಧ್ಯಾನವೆಂದರೇನು ?**

ಪಾತ್ರೆಯ ಒಳಗೆ ಸ್ಫಟಿಕದ ಬಿಂಬವಿರುವಂತೆ, ಹಾಲಿನಲ್ಲಿ ತುಪ್ಪವಿರುವಂತೆ,



ಕಲ್ಲಿನಲ್ಲಿ ಚಿನ್ನವಿರುವಂತೆ, ಹೂವಿನಲ್ಲಿ ಸುಗಂಧವಿರುವಂತೆ ತನ್ನ ಶರೀರದ ತುಂಬ ವ್ಯಾಪಿಸಿರುವ ಜ್ಞಾನ-ದರ್ಶನ-ಚೇತನ ಶಕ್ತಿಯ ಆತ್ಮನ ಕುರಿತು ಧ್ಯಾನ ಮಾಡುವುದೂ, ಆತ್ಮನಿಗೆ ಅಂಟಿರುವ ಕರ್ಮದ ನಿವಾರಣೆ ಮಾಡಲು ಕಳೆದುಕೊಳ್ಳಲು ತನ್ನ ಶರೀರದ ಆಕೃತಿಯಾಗಿ ಇರುವ ಆತ್ಮನನ್ನು ಕಾಣಲು ಶ್ರಮಿಸುವುದನ್ನು ಪಿಂಡಸ್ಥ ಧರ್ಮಧ್ಯಾನವೆನ್ನುತ್ತಾರೆ. ಈ ಧ್ಯಾನದಲ್ಲಿ ಪೃಥ್ವಿ, ವಾಯು, ಜಲ, ಅಗ್ನಿ, ತತ್ತ್ವಧಾರಣೆಗಳ ವಿಧಾನ ಉಂಟು. ಭಾವದಲ್ಲಿ ಬೀಜಾಕ್ಷರಗಳನ್ನು ಬರೆದುಕೊಂಡು ಧ್ಯಾನಿಸುವುದೂ ಉಂಟು.

**೩೩. ರೂಪಸ್ಥ ಧರ್ಮಧ್ಯಾನವೆಂದರೇನು ?**

ಜಿನೇಂದ್ರ ಭಗವಂತನ ಸ್ವರೂಪವನ್ನು ಮತ್ತು ನಿರಾಕಾರನಾದ ಸಿದ್ಧ ಪರಮಾತ್ಮನನ್ನು ಕುರಿತು ಧ್ಯಾನ ಮಾಡುವುದು.

ಜಿನಮಂದಿರದಲ್ಲಿರುವ ಜಿನೇಂದ್ರ ಭಗವಂತನಂತೆ ವೀತರಾಗನೂ, ನಿರ್ವಿಕಾರಿಯೂ, ನನ್ನಾತ್ಮನೂ ಇದೇ ಎಂದೂ, ಅದು ಕರ್ಮದಿಂದ ಆವೃತ್ತವಾಗಿ ಕಾಣದಂತೆ ಆಗಿದೆ ಎಂದೂ ಧ್ಯಾನಮಾಡುವುದು. ಸಮವಸರಣದ ಆಕೃತಿಯನ್ನು ಸ್ಮರಿಸುತ್ತಾ ಅದರಲ್ಲಿ ವಿರಾಜಮಾನರಾಗಿರುವ ಅರಿಹಂತರಂತೆ ತನ್ನಾತ್ಮನಿದ್ದಾನೆಂದೂ, ಚಿಂತಿಸುತ್ತಾ, ಅರಿಹಂತರ ಸ್ವರೂಪವನ್ನೇ ಧ್ಯಾನಿಸುತ್ತಾ ಮೈ-ಮನ-ಇಂದ್ರಿಯವನ್ನು ಮರೆಯುವುದು ರೂಪಸ್ಥ ಧ್ಯಾನವಾಗಿದೆ.

**೩೪. ರೂಪಾತೀತ ಧ್ಯಾನವೆಂದರೇನು ?**

ಸಕಲ ಕರ್ಮಮಲದಿಂದ ನಿವೃತ್ತನಾದ ಶುದ್ಧ ಚಿದ್ರೂಪನಾದ ಸಿದ್ಧ ಪರಮಾತ್ಮನನ್ನು ಧ್ಯಾನಿಸುತ್ತಾ, ಸಿದ್ಧರ ಗುಣಗಳನ್ನು ಸ್ಮರಿಸುತ್ತಾ ಇರುವುದೂ, ಸಿದ್ಧಪರಮಾತ್ಮನು ರೂಪಾತೀತನೆಂದೂ, ಜ್ಞಾನಾವರಣಾದಿ ಕರ್ಮರಹಿತನೆಂದೂ, ಅಶರೀರಿ, ಅವಿನಾಶಿ, ನಿತ್ಯನಿರ್ಮಲನೆಂದೂ, ಕೇವಲಜ್ಞಾನ, ದರ್ಶನ, ಚೇತನನೆಂದೂ ಚಿಂತಿಸುವುದೂ ರೂಪಾತೀತ ಧರ್ಮಧ್ಯಾನವಾಗಿದೆ.

**೩೫. ಧರ್ಮಧ್ಯಾನದಿಂದ ಆಗುವ ಪ್ರಯೋಜನವೇನು ?**

ಧರ್ಮಧ್ಯಾನದಿಂದ ಆತ್ಮೋನ್ನತಿಯಾಗುವುದು, ಶುಭಯೋಗದಿಂದ ಪುಣ್ಯಬಂಧವಾಗುವುದು, ಸತ್ಕಾಲಕ್ಷೇಪವಾಗುವುದು, ರಾಗ-ದ್ವೇಷ-ಮೋಹಗಳ ಶಕ್ತಿ ಕಡಿಮೆಯಾಗಿ ಸತ್ಪರಿಣಾಮವಾಗುವುದು, ಕಷಾಯಗಳು ತಗ್ಗುವುವು, ಮಾನವೀಯ ಗುಣಗಳೂ ಹೆಚ್ಚುವುವು. ಜಿನದೇವ-ಗುರು-ಧರ್ಮ ಶಾಸ್ತ್ರಗಳ

ಶ್ರದ್ಧೆ ಹೆಚ್ಚುವುದು, ಪ್ರಾಮಾಣಿಕತೆ, ಆತ್ಮಗೌರವ ಬೆಳೆಯುವುದು, ಆತ್ಮಶಕ್ತಿ ಹೆಚ್ಚಾಗುವುದು.

ಧರ್ಮಧ್ಯಾನಿಯು ಸಮ್ಯಗ್ದೃಷ್ಟಿಯೂ, ಅಂತರಾತ್ಮನೂ ಆಗಿರುತ್ತಾನೆ. ತನ್ನಿಂದ ಯಾವ ತಪ್ಪುಗಳೂ ಆಗದೆ ಸ್ವಚ್ಛವಾದ ಬಾಳುವೆ ಆಗುವುದು ಧರ್ಮ ಧ್ಯಾನಿಗೆ ಸಮ್ಯಕ್ತ್ವ ಪ್ರಾಪ್ತವಾಗುತ್ತದೆ.

ಧರ್ಮಕಾರ್ಯದಲ್ಲಿ ತೊಡಗುವುದೂ, ಧಾರ್ಮಿಕ ಚಿಂತನ ಮಾಡುವುದೂ, ಶಾಂತಿ ಸಮಾಧಾನದಿಂದಿರುವುದೂ ಧರ್ಮಧ್ಯಾನವೇ ಆಗಿದೆ.

ಧ್ಯಾನದಲ್ಲಿ ಅಷ್ಟಾಂಗಯೋಗಧ್ಯಾನವೂ ಇದೆ.

1. ಯಮ- ಪಾಪಗಳ ತ್ಯಾಗ 2. ನಿಯಮ - ಕಾಲಮರ್ಯಾದೆ 3. ಆಸನ - ಚಿತ್ತದಿಂದ ಕೂಡುವುದು 4. ಪ್ರಾಣಾಯಾಮ - ಶ್ವಾಸೋಚ್ಛ್ವಾಸದ ತಡೆ 5. ಪ್ರತ್ಯಾಹಾರ- ದೃಷ್ಟಿಯನ್ನು ಹಣೆಯಲ್ಲಿ ಸ್ಥಾಪಿಸುವುದು 6. ಮನನ-ಆತ್ಮ ಚಿಂತನೆ 7. ಏಕಾಗ್ರತೆ 8. ಆತ್ಮಸ್ವರೂಪದಲ್ಲಿ ಲೀನನಾಗುವ ಸಮಾಧಿ ಭಾವ. **ಇದೇ ಅಷ್ಟಾಂಗಯೋಗ.**

**೩೬. ಶುಕ್ಲಧ್ಯಾನವೆಂದರೇನು ?**

ನಿರ್ಮಲ ಪರಿಣಾಮವನ್ನು ಹೊಂದುವುದು, ರಾಗ-ದ್ವೇಷವನ್ನು ಬಿಡುವುದು, ವೀತರಾಗ ಭಾವನೆಯಲ್ಲಿರುವುದು, ಬಾಹ್ಯದ ಚಿಂತನೆಯನ್ನು ಸಂಪೂರ್ಣವಾಗಿ ತೊರೆಯುವುದು, ಶುದ್ಧಾತ್ಮಧ್ಯಾನದಲ್ಲಿ ತಲ್ಲೀನನಾಗುವುದು ಶುಕ್ಲಧ್ಯಾನ ವಾಗಿದೆ. ಇದು ಮುನಿಗಳಾದವರು ಅಪ್ರಮತ್ತಾವಸ್ಥೆಯಲ್ಲಿ ಅಂದರೆ 7ನೇ ಗುಣಸ್ಥಾನದಲ್ಲಿ ಮಾಡುವ ಧ್ಯಾನ. ಈ ಧ್ಯಾನದಿಂದ ಕರ್ಮನಿರ್ಜರೆಯು ಕ್ರಮವಾಗಿ ಆಗುವುದು. ಇದು ಶ್ರೇಷ್ಠವಾದ, ಶುದ್ಧವಾದ, ಆತ್ಮದರ್ಶನ ಮಾಡುವ ಧ್ಯಾನವಾಗಿದೆ. ಇದನ್ನು ಪರಮಶುಕ್ಲಧ್ಯಾನ ವೆನ್ನುವರು. ಶುಕ್ಲ ಎಂದರೆ ಸ್ವಚ್ಛವಾದ ಕೊಳೆ, ದೋಷವಿಲ್ಲದ, ಶುದ್ಧ ಸ್ಫಟಿಕದಂತೆ ಹಾಲಿನಂತೆ ಬೆಳ್ಳಗೆ ಇರುವ ಪರಿಣಾಮ ಎಂದರ್ಥ. ಮುಕ್ತಿ ಹೊಂದಲು ಹತ್ತಿರವಾಗಿರುವವರಿಗೆ ಮಾತ್ರ ಈ ಧ್ಯಾನ ಸಿದ್ಧಿಸುತ್ತದೆ. ಉತ್ತಮ ಸಂಹನನವುಳ್ಳ ಮಹಾಮುನಿಗಳು ಗುಣಸ್ಥಾನಗಳನ್ನು ಏರುತ್ತಾ, ಈ ಧ್ಯಾನಮಾಡಿ ಅರಹಂತರೂ, ಸಿದ್ಧರೂ ಆಗುತ್ತಾರೆ. ಶುಕ್ಲಧ್ಯಾನದಿಂದ ರಾಗ, ದ್ವೇಷ, ಮೋಹಗಳು ಕ್ಷಯವಾಗುತ್ತವೆ.

**೩೭. ಶುಕ್ಲಧ್ಯಾನದ ಭೇದಗಳಾವುವು ?**



ಶುಕ್ಲಧ್ಯಾನದಲ್ಲಿ ನಾಲ್ಕು ವಿಧ :

1. ಪೃಥಕ್ತ್ವ ವಿತರ್ಕ ವಿಚಾರ
2. ಏಕತ್ವ ವಿತರ್ಕ
3. ಸೂಕ್ಷ್ಮ ಕ್ರಿಯಾ ಪ್ರತಿಪಾತಿ
4. ವ್ಯಪರತಕ್ರಿಯಾ ನಿವೃತ್ತಿ

**೩೮. ಪೃಥಕ್ತ್ವವಿತರ್ಕ ವಿಚಾರವೆಂದರೇನು ?**

ಶೃತಜ್ಞಾನದ ಮೂಲಕ ಯಾವುದೇ ಒಂದು ಪದಾರ್ಥದ ವಿಚಾರವನ್ನು ಮಾಡುತ್ತಾ ಅದನ್ನು ಬಿಟ್ಟು , ಮತ್ತೆ ಆ ಪದಾರ್ಥದ ಪರ್ಯಾಯ ಅವಸ್ಥೆಯನ್ನು ಮತ್ತೆ ಅದನ್ನು ಬಿಟ್ಟು, ಪುನಃ ಆ ಪದಾರ್ಥದ ಮೂಲ ವಿಚಾರವನ್ನು ಮಾಡುವುದೂ ಮತ್ತು ಒಂದು ಶಾಸ್ತ್ರದ ವಚನವನ್ನು ಅವಲಂಬಿಸಿ ವಿಚಾರ ಮಾಡಿ ಅದನ್ನು ಬಿಟ್ಟು, ಮಗದೊಂದು ವಿಚಾರದ ಬಗ್ಗೆ ಪರಿವರ್ತಿಸಿಕೊಳ್ಳುವುದು ಹೀಗೆ ಮನ, ವಚನ, ಕಾಯಗಳ ಯೋಗವನ್ನು ಶುದ್ಧಾವಸ್ಥೆಯ ಕಡೆ ಪರಿವರ್ತಿಸುತ್ತಾ ವಿಚಾರ ಮಗ್ನನಾಗಿ ಆತ್ಮಧ್ಯಾನದ ಸಿದ್ಧಿಯ ಕಡೆ ಸಾಗುವುದೇ ಪೃಥಕ್ತ್ವವಿತರ್ಕ ವಿಚಾರ ಶುಕ್ಲಧ್ಯಾನವೆನ್ನುವರು.

**೩೯. ಏಕತ್ವವಿತರ್ಕವೆಂದರೇನು ?**

ಪೃಥಕ್ತ್ವವಿತರ್ಕ ವಿಚಾರದ ಮುಂದಿನ ಅವಸ್ಥೆಯೇ ಏಕತ್ವವಿತರ್ಕ. ಅಂದರೆ ಹಿಂದೆ ಒಂದೇ ವಸ್ತುವಿನ ವಿಷಯದ ಬಗ್ಗೆ ಧ್ಯಾನಿಸುತ್ತಾ ಅವುಗಳಲ್ಲಿ ವಿಶೇಷವಾಗಿ ಪರಿಣತಿ ಹೊಂದಿ, ಜ್ಞಾನದ ಸಿದ್ಧಿಯನ್ನು ಸಾಧಿಸುತ್ತಾ ಸಾಗುವುದು. ಹಲವಾರು ವಿಷಯಗಳ ವಿಧಗಳನ್ನು ತೊರೆದು ಕರ್ಮಗಳನ್ನು ಪ್ರತ್ಯೇಕತೆಗೊಳಿಸಿ ಅವುಗಳನ್ನು ನಿರ್ಜರೆ ಮಾಡಿಕೊಳ್ಳುತ್ತಾ ಸಾಗುವುದು. ಹಾಗಾಗಿ ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯ ಕರ್ಮಗಳನ್ನು ಕ್ರಮವಾಗಿ ಸುಡುತ್ತಾ ಹೋಗುವುದು. ಏಕತ್ತ್ವವಿತರ್ಕ ಶುಕ್ಲಧ್ಯಾನವಾಗಿದೆ. ಅಂತಹ ಧ್ಯಾನಿಯು ಕ್ಷೀಣಮೋಹಕಷಾಯವೆಂಬ ಹನ್ನೆರಡನೇ ಗುಣಸ್ಥಾನ ವರ್ತಿಯಾಗಿ ಸಕಲ ಘಾತೀಯ ಕರ್ಮಗಳನ್ನು ನಾಶ ಮಾಡಿ ಹದಿಮೂರನೆಯ ಗುಣಸ್ಥಾನದ ಸಯೋಗಕೇವಲಿ ಅಥವಾ ಅರಿಹಂತ ಪದವಿ ಅಥವಾ ಜ್ಞಾನೇಂದ್ರ ಪದವಿಗೇರುತ್ತಾರೆ. ಇದು ಪಟ್ಟುಹಿಡಿದು ಧ್ಯಾನದಿಂದ ವಿಚಲಿತರಾಗದೆ ಮಾಡುವ

ಶುಕ್ಲಧ್ಯಾನ-ಆತ್ಮ ಬೇರೆ ಶರೀರ ಬೇರೆ ಎಂದು ತಿಳಿದು ಆತ್ಮತತ್ತ್ವವನ್ನು ಮಾತ್ರ ಗ್ರಹಿಸುವುದು.

**೪೦. ಸೂಕ್ಷ್ಮಕ್ರಿಯಾ ಪ್ರತಿಪಾತಿ ಎಂದರೇನು ?**

ಸಯೋಗ ಕೇವಲಿಯಾದ ನಂತರ ತಮ್ಮ ಆಯುಷ್ಯ ಮುಗಿಯುತ್ತಾ ಬಂದಾಗ ಅವರು ಒಂದು ನಿರ್ಜನ ಪ್ರದೇಶದಲ್ಲಿ ಅಯೋಗ ಕೇವಲಿಗಳಾಗಿ ಧ್ಯಾನಮಾಡುತ್ತಾರೆ. ಅಂದರೆ ಮನ-ವಚನ-ಕಾಯಗಳ ಕ್ರಿಯೆಯನ್ನು ಪೂರ್ಣ ನಿಲ್ಲಿಸಿ ಪರಿಶುದ್ಧವಾದ ಧ್ಯಾನದಲ್ಲಿ ಮಗ್ನರಾಗುತ್ತಾರೆ. ಇದು ಹದಿನಾಲ್ಕನೇ ಗುಣಸ್ಥಾನವಾಗಿರುತ್ತದೆ. ಶ್ವಾಸೋಚ್ಛ್ವಾಸವನ್ನು ನಿಲ್ಲಿಸಿ, ಆತ್ಮ ಪ್ರದೇಶದ ಪರಿ ಸ್ಪಂದನವನ್ನು ನಿಲ್ಲಿಸುತ್ತಾರೆ. ಇದೇ ಸೂಕ್ಷ್ಮಕ್ರಿಯಾ ಪ್ರತಿಪಾತಿಯೆಂಬ 3ನೇ ಶುಕ್ಲಧ್ಯಾನ. ಆಗ ಇನ್ನೂ ಆಯುಷ್ಯವೆಂಬ ಒಂದು ಪ್ರಾಣಮಾತ್ರವಿರುತ್ತದೆ.

**೪೧. ವ್ಯಪರತಕ್ರಿಯಾ ನಿವೃತ್ತಿಯೆಂದರೇನು ?**

ಸಕಲಕರ್ಮ ಮುಕ್ತನಾಗಲು ತೊಡಗಿ, ದೇಹದಿಂದ ಆತ್ಮನನ್ನು ಸಂಪೂರ್ಣ ಬಿಡುಗಡೆ ಮಾಡಿ, ಶುದ್ಧ ಚಿದ್ರೂಪರೇ ತಾವಾಗಲು ಮಾಡುವ ಕೊನೆಯ ಶುಕ್ಲ ಧ್ಯಾನ. ಆಗ ತನ್ನಲ್ಲಿದ್ದ ಆಯುಷ್ಯವೆಂಬ ಆ ಘಾತೀಯ ಕರ್ಮವೂ ನಾಶ ವಾಗುತ್ತದೆ. ಆಗ ಧ್ಯಾನವನ್ನು ನಿಲ್ಲಿಸುತ್ತಾರೆ. ಈ ಭೌತಿಕ ಶರೀರದಿಂದ ಶುದ್ಧ ಚೈತನ್ಯವು ಬೇರ್ಪಟ್ಟು, ಲೋಕದ ತುತ್ತತುದಿಯಲ್ಲಿ ಸಿದ್ಧಲೋಕವನ್ನು ಸೇರಿ ಮುಕ್ತಾತ್ಮನಾಗುತ್ತದೆ. ಮತ್ತೆ ಈ ಸಂಸಾರ-ಶರೀರಗಳ ಬಂಧನ ಸಂಪೂರ್ಣ ವಾಗಿ ಇಲ್ಲವಾಗುತ್ತದೆ. ಸದಾ ಅನಂತಜ್ಞಾನಾದಿ ಅಷ್ಟಗುಣ ಸಹಿತವಾಗಿ, ಸುಖಾ ನಂದದಲ್ಲಿರುತ್ತದೆ. ಆ ಶುದ್ಧಾತ್ಮವು ಮೇಲೆ ಹೇಳಲ್ಪಟ್ಟ ಧರ್ಮಧ್ಯಾನವೂ, ಶುಕ್ಲಧ್ಯಾನವೂ ಮೋಕ್ಷಕ್ಕೆ ಕಾರಣಗಳಾಗಿವೆ. ಅದರಲ್ಲೂ ಧರ್ಮಧ್ಯಾನವನ್ನು ಯಥಾಶಕ್ತಿ ಗೃಹಸ್ಥರು ಮಾಡಬಹುದಾಗಿದೆ. ಶುಕ್ಲಧ್ಯಾನವಂತೂ ಯೋಗಿಗಳಿಗೆ ಮಾತ್ರ ಸಾಧ್ಯ.

ಧ್ಯಾನಗಳಲ್ಲಿ ಮೊದಲ ಆರ್ತಧ್ಯಾನ ಮತ್ತು ರೌದ್ರಧ್ಯಾನಗಳು ಅಶುಭವೂ, ಅಪಧ್ಯಾನವೂ ಆದ್ದರಿಂದ ಗೃಹಸ್ಥರೂ, ಮುನಿಗಳೂ ಮಾಡಬಾರದು. ಗೃಹಸ್ಥರು ಧರ್ಮಧ್ಯಾನವನ್ನೂ, ಮುನಿಗಳು ಧರ್ಮಧ್ಯಾನವನ್ನೂ ಮತ್ತು ಶುಕ್ಲಧ್ಯಾನವನ್ನೂ ಮಾಡಬಹುದು. ಸಾಧು-ಸಂತರು, ಮಹಾತ್ಮರು ಬಾಹ್ಯದೃಷ್ಟಿಯ ಪ್ರವೃತ್ತಿಯನ್ನು ನಿಲ್ಲಿಸಿ ಆಂತರ್ಯದಲ್ಲಿ ಉಂಟಾಗುವ ಆನಂದಸಾಗರದಲ್ಲಿ ಮುಳುಗೇಳುತ್ತಾರೆ. ಇದೇ ಧ್ಯಾನದ ಸಾರವಿದೆ.



# ೫೮ ಪಂಚ ಭಾವಗಳು

**೧. ಭಾವ ಎಂದರೇನು ?**

ಜೀವಸ್ವರೂಪವನ್ನು ವಿವರಿಸುವಾಗ ಜೈನ ದಾರ್ಶನಿಕರು ಎರಡು ದೃಷ್ಟಿ ಕೋನಗಳನ್ನು ಇಟ್ಟುಕೊಂಡಿರುತ್ತಾರೆ. ಒಂದು ನಿಶ್ಚಯದ ದೃಷ್ಟಿ, ಇನ್ನೊಂದು ವ್ಯಾವಹಾರಿಕ ದೃಷ್ಟಿ. ಈ ಎರಡೂ ನಯ ದೃಷ್ಟಿಗಳಿಂದ ಜೀವನ ಗುಣಲಕ್ಷಣ, ಪರ್ಯಾಯಗಳನ್ನು ವಿವೇಚಿಸಲಾಗುತ್ತದೆ. ಏಕೆಂದರೆ ಗುಣವು ದ್ರವ್ಯದ ಪರ್ಯಾಯವನ್ನು ಬಿಟ್ಟಿರಲಾರದು. ಅದಕ್ಕೆ ''**ಗುಣ ಪರ್ಯಾಯವತ್ ದ್ರವ್ಯಂ**'' ಎಂದಿದ್ದಾರೆ. ಗುಣವನ್ನು ವಿಮರ್ಶಿಸಲು ನಿಶ್ಚಯನಯದ ದೃಷ್ಟಿಯೂ, ಪರ್ಯಾಯದ ವಿಮರ್ಶೆಗೆ ವ್ಯವಹಾರನಯದ ದೃಷ್ಟಿಯೂ ಬೇಕು.

ಉದಾಹರಣೆಗೆ ಚಿನ್ನ ಮೂಲದ್ರವ್ಯ, ಅದರಿಂದ ಆಭರಣವು ಪರ್ಯಾಯ, ಇದು ವ್ಯವಹಾರ. ಆದರೆ ಆಭರಣಕ್ಕೆ ಮೂಲವಾದ ಚಿನ್ನದ ಗುಣ ನಿಶ್ಚಯ ವಾಗಿದೆ. ಹೀಗೆಯೇ ಜೀವ-ಆತ್ಮ ಚೇತನವು ಜ್ಞಾನ-ದರ್ಶನ ಸ್ವಭಾವವುಳ್ಳದ್ದು. ಆದರೆ ಅದು ಹೊರುವ ಗತಿ. ಶರೀರ-ಇಂದ್ರಿಯಗಳು ಪರ್ಯಾಯಗಳಿಗೆ ಕಾರಣ ಕರ್ಮವೇ ಆಗಿದೆ. ಈ ಕರ್ಮಗಳಿಗೆ ಜೀವನ ಭಾವಗಳೇ ಕಾರಣವಾಗಿವೆ. ಈ ಭಾವಗಳಿಂದಲೇ ಜೀವಿಯ ಗುಣಲಕ್ಷಣ- ಸಂಸಾರ-ಮುಕ್ತಿಗಳ ವಿವರ ಗೊತ್ತಾಗುತ್ತದೆ.

ಕರ್ಮಗಳ ಉಪಶಮ, ಕ್ಷಯ ಮೊದಲಾದ ನಿಮಿತ್ತಗಳಿಂದ ಜೀವಗಳ ಮೇಲೆ ಆಗುವ ಪರಿಣಾಮಕ್ಕೆ ಭಾವವೆನ್ನುವರು. ಹೊತ್ತ ಕರ್ಮಗಳನ್ನು ಕಳೆದುಕೊಳ್ಳಲು ಭಾವಗಳೇ ಕಾರಣವಾಗಿವೆ.

**೨. ಜೀವದ ಭಾವಗಳಾವುವು ?**

ಜೀವದಲ್ಲಿ ಐದು ರೀತಿಯ ಭಾವಗಳಿರುತ್ತವೆ. ಇವೇ ಪಂಚಭಾವಗಳು.

1. ಔಪಶಮಿಕ ಭಾವ 2. ಕ್ಷಾಯಿಕ ಭಾವ 3. ಕ್ಷಯೋಪಶಮಿಕ ಭಾವ 4. ಔದಾಯಿಕ ಭಾವ 5. ಪಾರಿಣಾಮಿಕ ಭಾವ.

**೩. ಔಪಶಮಿಕ ಭಾವವೆಂದರೇನು ?**

ಕಲ್ಮಶವಾದ ನೀರಿಗೆ ಚಿಲ್ಲದ ಬೀಜವನ್ನು ಹಾಕಿದಾಗ ನೀರಿನ ಕಲ್ಮಶವು ತಳ ಸೇರಿ ನೀರು ಸ್ವಚ್ಛವಾಗುತ್ತದೆ ಮತ್ತು ಅಡಿಗೆ ಮಾಡುವಾಗ ಅನ್ನ

ಬೇಯಿಸುವಾಗ ಉಕ್ಕಿ ಬರುತ್ತದೆ. ಆಗ ಅದಕ್ಕೆ ಸ್ವಲ್ಪ ತಣ್ಣೀರನ್ನು ಹಾಕಿದರೆ ಉಕ್ಕುವುದು ಶಮನವಾಗುತ್ತದೆ. ಹೀಗೆಯೇ ಯಾವ ಭಾವವು ಕರ್ಮದ ಶಕ್ತಿ ಸ್ವಲ್ಪ ಕಡಿಮೆಯಾಗುವುದೇ ಔಪಶಮಿಕ ಭಾವವಾಗಿರುತ್ತದೆ. ಇದರಿಂದ ಆತ್ಮನ ಸ್ವಭಾವ ಸ್ವಲ್ಪಕಾಲ ನಿರ್ಮಲವಾಗಿರುತ್ತದೆ. ಆದರೂ ಕರ್ಮದ ಸಂಯೋಗ ಇದ್ದೇ ಇರುವುದು. ಅದು ಯಾವಾಗಲಾದರೂ ಉದಯವಾಗಬಹುದು. ನೀರಿನ ಪಾತ್ರೆಯನ್ನು ಸ್ವಲ್ಪ ಕಲಕಿದರೂ ತಳದಲ್ಲಿರುವ ಕಲ್ಮಶ ಮೇಲೆದ್ದು ನೀರು ಮಲಿನವಾಗುವುದು. ಇದರಂತೆ ಧರ್ಮ, ಧ್ಯಾನ, ಸಮ್ಯಕ್ತ್ವ ಜಿನದೇವ-ಗುರು-ಧರ್ಮಶಾಸ್ತ್ರಗಳ ಆರಾಧನೆ, ಭಕ್ತಿ, ಸದಾಚಾರ, ಭಜನೆ, ಪೂಜೆ, ಧ್ಯಾನ, ಸತ್ಕಾಲಕ್ಷೇಪ, ಸ್ವಾಧ್ಯಾಯ, ಪುರಾಣ ಪ್ರವಚನ ಕೇಳುವ ಸಮಯದಲ್ಲಿ ಉಪಶಮ ಭಾವವಾಗುವುದು. ಈ ಭಾವವು ಸ್ವಲ್ಪವೇ ಕಾಲ ಇದ್ದರೂ ಆತ್ಮನು ಅಷ್ಟೇ ಸಮಯದಲ್ಲಿ ಉಜ್ವಲ-ನಿರ್ಮಲ ಶಾಂತನಾಗಿ ಕಾಣುವನು.

**೪. ಕ್ಷಾಯೋಪಶಮಿಕ ಭಾವ ಎಂದರೇನು ?**

ಕರ್ಮವು ಆತ್ಮನಿಂದ ಇನ್ನೂ ಪೂರ್ತಿ ಹೋಗಿರುವುದಿಲ್ಲ. ಕ್ರಮವಾಗಿ ಕಳೆಯುತ್ತಿರುತ್ತದೆ, ಕೆಲವು ಕರ್ಮಗಳು ಕಳೆದಿರುತ್ತವೆ, ಮತ್ತೆ ಕೆಲವು ಇದ್ದೇ ಇವೆ. ಅವು ಇನ್ನೂ ಉದಯಕ್ಕೆ ಬಂದಿಲ್ಲ, ಇಂತಹ ಸಂದರ್ಭದಲ್ಲಿ ಆಗುವ ಆತ್ಮನ ಪರಿಣಾಮವೇ ಕ್ಷಯೋಪಶಮಿಕ ಭಾವ. ತಿಳಿಯಾದ ನೀರನ್ನು ಬೇರೆ ಪಾತ್ರೆಗೆ ತೆಗೆದುಕೊಂಡಾಗ ಅದು ಸ್ವಚ್ಛವಾಗಿ ಕಂಡರೂ ಸೂಕ್ಷ್ಮವಾಗಿ ಅದರಲ್ಲಿ ಕಲ್ಮಷಗಳು ಇದ್ದೇಇರುತ್ತವೆ. ಆದರೂ ಇದು ಬಹುಕಾಲ ನಿರ್ಮಲವಾಗಿರುತ್ತದೆ. ಉಪಶಮ ಭಾವಕ್ಕಿಂತ ಉತ್ತಮ. ಎಣ್ಣೆಯ ಕರೆ, ಕೆಸರು ಮೆತ್ತಿದ ಬಟ್ಟೆಯನ್ನು ಒಮ್ಮೆ ತೊಳೆದಾಗ ಅದರಲ್ಲಿ ಅಂಟಿದ ಕಲೆಯ, ಕೊಳೆಯ ಗುರುತು ಇನ್ನೂ ಇರುವಂತೆ ಪೂರ್ಣ ಕಲೆ, ಕೊಳೆ ಹೋಗದಿರುವಂತೆ ಪೂರ್ಣ ಕರ್ಮ ನಾಶವಾಗಿ ಇರುವುದಿಲ್ಲ.ಆದರೂ ಈಗ ಪರಿಣಾಮ-ಭಾವ-ಜ್ಞಾನ ಮುಂತಾದವು ಸ್ವಲ್ಪ ಉತ್ತಮವಾಗಿರುತ್ತವೆ. ಈ ಭಾವಕ್ಕೆ ಮಿಶ್ರ ಭಾವವೆಂದೂ ಹೇಳುವರು.

**೫. ಕ್ಷಾಯಿಕಭಾವ ಎಂದರೇನು ?**

ಜೀವನು ತಾನು ಹೊತ್ತ ಕರ್ಮವು ಪೂರ್ಣ ನಿರ್ಜರೆ, ಕ್ಷಯ, ನಾಶ ಅಥವಾ ಇಲ್ಲದಂತಾದಾಗ ಆತ್ಮನ ಪರಿಪೂರ್ಣವಾದ, ನಿರ್ಮಲವಾದ, ಸ್ವಚ್ಛವಾದ, ಉಜ್ವಲವಾದ, ಅನುಪಮವಾದ, ಅಪೂರ್ವವಾದ ಸ್ವಸ್ವಭಾವವು ಪ್ರಕಟವಾಗುವುದು. ಅದಕ್ಕೆ ಕ್ಷಾಯಿಕ ಭಾವವೆನ್ನುವರು. ಕಲ್ಮಷವಾದ ನೀರಿನ ಪಾತ್ರೆಗೆ



ಚಿಲ್ಲದ ಬೀಜವನ್ನು ಹಾಕಿದಾಗ, ಕಲ್ಮಷವು ತಳದಲ್ಲಿ ಕುಳಿತಾಗ ಮೇಲಿನ ನಿರ್ಮಲವಾದ ನೀರನ್ನು ಪ್ರತ್ಯೇಕಿಸಿ, ಶೋಧಿಸಿ, ಕಾಯಿಸಿದಾಗ ನೀರು ಅತ್ಯಂತ ಸ್ವಚ್ಛ , ನಿರ್ಮಲವಾಗುವುದು. ಅನ್ನ ಪೂರ್ತಿಯಾದಾಗ, ಕೆಳಗಡೆ ಉರಿಯೂ ಇಲ್ಲದಿದ್ದಾಗ ಉಕ್ಕು ಬರುವುದೇ ಇಲ್ಲ. ಇಂತಹ ಪರಿಣಾಮವೇ ಕ್ಷಾಯಿಕ ಭಾವ. ಇದು ಅರಹಂತರು ಹಾಗೂ ಸಿದ್ಧರಿಗೆ ಇರುತ್ತದೆ.

**೬. ಔದಾಯಿಕಭಾವ ಎಂದರೇನು ?**

ಜೀವನಿಗೆ ಕರ್ಮಗಳು ಪಕ್ವವಾಗಿ ಸಮಯವನ್ನು ಒದಗಿಸಿಕೊಂಡು ಉದಯವಾಗಿ ಫಲವನ್ನು ಕೊಡಲಾರಂಭಿಸುತ್ತವೆ. ಆಗ ಜೀವನು ಈ ಸಂಸಾರದಲ್ಲಿ ಪುಣ್ಯವೋ, ಪಾಪವೋ ಇವುಗಳ ಫಲಗಳಾದ ಸುಖವನ್ನೋ, ದುಃಖವನ್ನೋ ಅನುಭವಿಸುತ್ತಾನೆ. ಇಂತಹ ಸಮಯದಲ್ಲಿ ಆಗುವ ಜೀವನ ಪರಿಣಾಮಕ್ಕೆ ಔದಾಯಿಕ ಭಾವವೆನ್ನುವರು. ಈ ಔದಾಯಿಕ ಭಾವದಲ್ಲಿ ದ್ರವ್ಯ - ಕ್ಷೇತ್ರ - ಕಾಲ - ಭಾವಗಳ ನಿಮಿತ್ತವಿರುತ್ತದೆ. ಯಾವುದಾದರೂ ಸಂದರ್ಭ, ಕಾಲ, ಮನೋಭಾವ, ಸ್ಥಳಗಳು ಕೂಡಿ ಬಂದಾಗ ಆ ಕರ್ಮವು ಉದಯವಾಗಿ ಜೀವನಿಗೆ ಫಲ ಕೊಡಲಾರಂಭಿಸುತ್ತದೆ. ಇದೇ ಔದಾಯಿಕ ಭಾವ. ಯಾರಾದರೂ ಸುಖವಾಗಿದ್ದಾಗ, ಭೋಗದಲ್ಲಿದ್ದಾಗ, ಚೆನ್ನಾಗಿದ್ದಾಗ, ಶ್ರೀಮಂತನಿದ್ದಾಗ ಆತನಿಗೆ ಪುಣ್ಯೋದಯವಾಗಿದೆ ಎನ್ನುತ್ತಾರೆ. ದುಃಖ-ಸಂಕಟ-ರೋಗ, ಅಪಘಾತ, ನಿಂದೆ, ಅಪಮಾನವಾದಾಗ ಆತನಿಗೆ ಪಾಪೋದಯವಾಗಿದೆ ಎನ್ನುತ್ತಾರೆ. ಈ ಸಂದರ್ಭದಲ್ಲಿ ಆಗುವ ಆತ್ಮನ ಪರಿಣಾಮವೇ ಔದಾಯಿಕಭಾವ.

**೭. ಪಾರಿಣಾಮಿಕಭಾವ ಎಂದರೇನು ?**

ಕರ್ಮಗಳ ಉಪಶಮ, ಕ್ಷಯೋಪಶಮ ಮತ್ತು ಉದಯಗಳ ಅಪೇಕ್ಷೆ ಇಲ್ಲದೆ ಆತ್ಮನ ಸ್ವಭಾವವಾದ ಪರಿಣಾಮವಿರುವುದೋ ಅದೇ ಪಾರಿಣಾಮಿಕ ಭಾವ. ಇದು ಸ್ವಭಾವಜನ್ಯವಾದುದು.

ಹೀಗೆ ಈ ಐದು ಭಾವಗಳು ಜೀವನ ಅಸಾಧಾರಣ ಭಾವಗಳಾಗಿರುತ್ತವೆ. ಇವು ಜೀವದ್ರವ್ಯಕ್ಕೆ ಮಾತ್ರ ಇರುತ್ತವೆ.

ಕರ್ಮವು ಜೀವದ ಭಾವವನ್ನು ಉತ್ಪತ್ತಿ ಮಾಡುವುದಿಲ್ಲ. ಜೀವವೂ ಕರ್ಮವನ್ನೇನೂ ಉತ್ಪನ್ನ ಮಾಡುವುದಿಲ್ಲ. ಆದರೆ ಇವೆರಡರ ಸಂಯೋಗ ಸಂಬಂಧದಿಂದ ನಿಮಿತ್ತ, ನೈಮಿತ್ತಿಕದಿಂದ ಕರ್ಮಗಳೂ-ಭಾವಗಳೂ ಆಗುತ್ತವೆ.

ಮೋಕ್ಷಮಾರ್ಗದ ಪ್ರಾರಂಭವು ಔಪಶಮಿಕ ಸಮ್ಯಕ್ತ್ವದಿಂದ ಆಗುತ್ತದೆ. ಮೋಹನೀಯ ಕರ್ಮದ ಉಪಶಮವಾದಾಗ ಸಮ್ಯಗ್ದರ್ಶನ ಉಂಟಾಗುತ್ತದೆ.

**೮. ಯಾವ ಯಾವ ಗುಣಸ್ಥಾನದಲ್ಲಿ ಆತ್ಮನಲ್ಲಿ ಯಾವ ಯಾವ ಭಾವಗಳಿರುತ್ತವೆ ?**

ಮೊದಲ ಗುಣಸ್ಥಾನದಲ್ಲಿ ಆತ್ಮನಿಗೆ ಔದಾಯಿಕ ಭಾವವಿರುತ್ತದೆ. ಇದನ್ನು ದರ್ಶನ ಮೋಹನೀಯ ಕರ್ಮದ ಅಪೇಕ್ಷೆಯಿಂದ ಹೇಳಲಾಗಿದೆ. ಏಕೆಂದರೆ ನಾಲ್ಕನೇ ಗುಣಸ್ಥಾನದ ವರೆಗೆ ಚಾರಿತ್ರವಿರುವುದಿಲ್ಲ.

ಎರಡನೇ ಗುಣಸ್ಥಾನದಲ್ಲಿ ಪಾರಿಣಾಮಿಕ ಭಾವವಿರುತ್ತದೆ. ಅಂತಲೇ ಇದಕ್ಕೆ ಕರ್ಮದ ಅಪೇಕ್ಷೆ ಇಲ್ಲ. ಅಂದರೆ ಎಲ್ಲಾ ಜೀವಿಗಳಿಗೂ ಈ ಪಾರಿಣಾಮಿಕ ಭಾವವಿರುತ್ತದೆ.

ಮೂರನೇ ಗುಣಸ್ಥಾನದಲ್ಲಿ ಕ್ಷಯೋಪಶಮ ಭಾವವಿರುತ್ತದೆ. ಇದು ಮಿಶ್ರಭಾವ.

ನಾಲ್ಕನೆಯ ಗುಣಸ್ಥಾನದಲ್ಲಿ ಕರ್ಮದ ಉಪಶಮ, ಕ್ಷಯ, ಕ್ಷಯೋಪಶಮ ಈ ಮೂರೂ ಭಾವಗಳಿರುತ್ತವೆ.

ಐದು, ಆರನೇ ಗುಣಸ್ಥಾನದಲ್ಲಿ ಚಾರಿತ್ರಮೋಹನೀಯ ಕರ್ಮದ ಅಪೇಕ್ಷೆಯಿಂದ ಕ್ಷಯೋಪಶಮಿಕ ಭಾವವಿರುತ್ತದೆ.

ಇಲ್ಲಿಯವರೆಗೆ ಆತ್ಮನು ಪ್ರಮತ್ತನೆನಿಸಿರುತ್ತಾನೆ.

ಮುಂದೆ ಏಳನೇ ಗುಣಸ್ಥಾನದಿಂದ ಹನ್ನೊಂದನೇ ಗುಣಸ್ಥಾನದವರೆಗೆ ಔಪಶಮಿಕ ಭಾವವಿರುತ್ತದೆ.

ಇಲ್ಲಿಂದ ಮುಂದೆ ಕ್ಷಾಯಿಕ ಭಾವವಿರುವುದು.

**೯. ಔಪಶಮಿಕ ಭಾವದ ಭೇದಗಳಾವುವು ?**

ಔಪಶಮಿಕ ಭಾವದಲ್ಲಿ ೨ ವಿಧ :-

1. ಔಪಶಮಿಕ ಸಮ್ಯಕ್ತ್ವ 2. ಔಪಶಮಿಕ ಚಾರಿತ್ರ. ಇವು ಮೋಹನೀಯ ಕರ್ಮದ ಉಪಶಮದಿಂದಾಗುವ ಭಾವಗಳು.

**೧೦. ಔಪಶಮಿಕ ಸಮ್ಯಕ್ತ್ವವೆಂದರೇನು ?**

ಅನಂತಾನುಬಂಧೀ ಕ್ರೋಧ, ಮಾನ, ಮಾಯಾ, ಲೋಭ ಮತ್ತು ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್ತ್ವ ಪ್ರಕೃತಿಗಳ ಉಪಶಮನದಿಂದ ಔಪಶಮಿಕ ಸಮ್ಯಕ್ತ್ವ ಉಂಟಾಗುತ್ತದೆ.



**೧೧. ಔಪಶಮಿಕ ಚಾರಿತ್ರ ಎಂದರೇನು ?**

ಚಾರಿತ್ರ ಮೋಹನೀಯ ಕರ್ಮದ ಉಪಶಮದಿಂದ ಉಂಟಾಗುವ ಚಾರಿತ್ರವೇ ಔಪಶಮಿಕ ಚಾರಿತ್ರ.

**೧೨. ಔಪಶಮಿಕ ಸಮ್ಯಕ್ತ್ವದ ವಿಧಗಳಾವುವು ?**

ಔಪಶಮಿಕ ಸಮ್ಯಕ್ತ್ವದಲ್ಲಿ ೨ ವಿಧ ಇವೆ :-

1. ಪ್ರಥಮೋಪಶಮ ಸಮ್ಯಕ್ತ್ವ 2. ದ್ವಿತೀಯೋಪಶಮ ಸಮ್ಯಕ್ತ್ವ

**ಪ್ರಥಮೋಪಶಮ ಸಮ್ಯಕ್ತ್ವ** : ಅನಾದಿ ಕಾಲದಿಂದಲೂ ಬಂದಿರುವ ಮಿಥ್ಯಾತ್ವ ಗುಣಸ್ಥಾನದ ಬಿಡುಗಡೆಯಾದ ನಂತರ ಕೆಲವು ಲಬ್ಧಿಗಳು ಉಂಟಾದಾಗ ಪ್ರಪ್ರಥಮವಾಗಿ ಉಂಟಾಗುವ ಸಮ್ಯಕ್ತ್ವಕ್ಕೆ ಪ್ರಥಮೋಪಶಮ ಸಮ್ಯಕ್ತ್ವವೆನ್ನುವರು.

**ದ್ವಿತೀಯೋಪಶಮ ಸಮ್ಯಕ್ತ್ವ** : ಈ ಹಿಂದೆ ಸಮ್ಯಕ್ತ್ವ ಉಂಟಾಗಿ ಅದನ್ನು ಕಳೆದುಕೊಂಡ ಮತ್ತೆ ಲಬ್ಧಿಗಳು ಒದಗಿದಾಗ ಅಥವಾ ಪೂರ್ವ ಭವದ ಸಂಸ್ಕಾರದಿಂದ ಅಥವಾ ಏಳನೇ ಗುಣಸ್ಥಾನದಲ್ಲಿ ಉಪಶಮ ಶ್ರೇಣಿಯನ್ನು ಅಂದರೆ ಮುಂದಿನ ಗುಣಸ್ಥಾನಗಳನ್ನು ಏರುವಾಗ ಉಂಟಾಗುವ ಸಮ್ಯಕ್ತ್ವಕ್ಕೆ ದ್ವಿತೀಯೋಪಶಮ ಸಮ್ಯಕ್ತ್ವವೆನ್ನುವರು.

ಲಬ್ಧಿಗಳು : ಪ್ರಥಮೋಪಶಮ ಸಮ್ಯಕ್ತ್ವವಾಗುವ ಮೊದಲು ಮಿಥ್ಯಾತ್ವ ಗುಣಸ್ಥಾನದಲ್ಲಿದ್ದವರಿಗೆ ೫ ವಿಶೇಷ ರೀತಿಯ ಅವಕಾಶಗಳು ಒದಗಬೇಕು. ಆಗ ಕೆಲವರಿಗೆ ಸಮ್ಯಕ್ತ್ವ ಉಂಟಾಗುತ್ತದೆ. ಈ ಅವಕಾಶಗಳೇ ಲಬ್ಧಿಗಳು.

**೧೩. ಲಬ್ಧಿಗಳೆಷ್ಟು ವಿಧ ? ಅವು ಯಾವುವು ?**

ಲಬ್ಧಿಗಳು ೫ :- 1. ಕ್ಷಯೋಪಶಮ ಲಬ್ಧಿ 2. ವಿಶುದ್ಧಿ ಲಬ್ಧಿ 3. ದೇಶನಾ ಲಬ್ಧಿ 4. ಪ್ರಾಯೋಗ್ಯ ಲಬ್ಧಿ 5. ಕರಣ ಲಬ್ಧಿ.

ಕ್ಷಯೋಪಶಮ ಲಬ್ಧಿ : ಕರ್ಮಗಳ ಶಕ್ತಿಯು ಕಡಿಮೆಯಾಗುವುದು.

ವಿಶುದ್ಧಿ ಲಬ್ಧಿ : ಧರ್ಮದಲ್ಲಿ ಅನುರಾಗ, ವಿಶ್ವಾಸ ಹುಟ್ಟುವುದು.

**ದೇಶನಾಲಬ್ಧಿ :** ಗುರುಗಳ ಧರ್ಮೋಪದೇಶವನ್ನು ಕೇಳುವ ಅವಕಾಶ ದೊರೆಯುವುದು.

**ಪ್ರಾಯೋಗ್ಯಲಬ್ಧಿ :** ಪರಿಣಾಮವು ವಿಶುದ್ಧವಾಗುತ್ತಾ ಹೋಗುವುದು. ಪ್ರಾಯೋಗ್ಯಲಬ್ಧಿ ಒದಗಿದಾಗ ಪ್ರಥಮೋಪಶಮ ಸಮ್ಯಕ್ತ್ವವು ಉಂಟಾದರೆ ಒಳ್ಳೆಯದು. ಈ ಲಬ್ಧಿಯಿಂದ ಕರ್ಮವನ್ನು ಕಡಿಮೆ ಮಾಡಿಕೊಳ್ಳುವ ಅವ ಕಾಶವಿರುತ್ತದೆ.

**ಕರಣಲಬ್ಧಿ :** ಕಷಾಯಗಳು ಮಂದವಾಗುತ್ತಾ ಹೋಗಿ ಧರ್ಮ, ದೇವ, ಗುರು, ಶಾಸ್ತ್ರದಲ್ಲಿ ಶ್ರದ್ಧೆ ಉಂಟಾಗುವ ಮನೋಭಾವ ಒದಗುವುದು. ಮನ, ವಚನ, ಕಾಯಗಳ ಕ್ರಿಯೆಗಳು ನಿರ್ಮಲವಾಗುತ್ತಾ ಹೋಗುವುವು.

ಹೀಗೆ ಈ ೫ ಲಬ್ಧಿಗಳು ಒದಗಿದಾಗ ಪ್ರಥಮೋಪಶಮ ಸಮ್ಯಕ್ತ್ವ ಪ್ರಾಪ್ತವಾಗುತ್ತದೆ. ಆದರೆ ಇವುಗಳಲ್ಲಿ ಮೊದಲ ನಾಲ್ಕು ಯಾವಾಗಲಾದರೂ ಒದಗಬಹುದು. ಆದರೆ ಕರಣಲಬ್ಧಿ ಒದಗುವುದು ಕಷ್ಟ.

ಮೊದಲ ನಾಲ್ಕೂ ಲಬ್ಧಿಗಳು ಅಭವ್ಯರಿಗೂ, ಭವ್ಯರಿಗೂ ಒದಗುತ್ತವೆ. ಆದರೆ ಅಭವ್ಯರು ಅವು ಒದಗಿದರೂ ಸಮ್ಯಕ್ತ್ವವನ್ನು ಗ್ರಹಿಸುವುದಿಲ್ಲ. ಮಿಥ್ಯಾದೃಷ್ಟಿಗಳೇ ಆಗಿರುತ್ತಾರೆ.

ಆದರೆ ೫ ನೆಯದಾದ ಕರಣಲಬ್ಧಿಯು ಕೇವಲ ಭವ್ಯಾತ್ಮರಿಗೆ ಒದಗುತ್ತದೆ. ಇದನ್ನು ಸದುಪಯೋಗ ಮಾಡಿಕೊಂಡು ಭವ್ಯಾತ್ಮರು ಸಮ್ಯಕ್ತ್ವವನ್ನು ಗ್ರಹಿಸಿ, ಕ್ರಮದಿಂದ ಮುಂದೆಸಾಗಿ ಮುಕ್ತರಾಗುತ್ತಾರೆ. ಭವ್ಯಾತ್ಮರೂ ಇಂತಹ ಅವಕಾಶಗಳು ಒದಗಿದಾಗ ಸದುಪಯೋಗ ಮಾಡಿಕೊಂಡು ಸಮ್ಯಗ್ದೃಷ್ಟಿಗಳಾಗಬೇಕು.

**೧೪. ಕ್ಷಾಯಿಕಭಾವದ ಭೇದಗಳಾವುವು ?**

ಕ್ಷಾಯಿಕಭಾವದಲ್ಲಿ 9 ಭೇದಗಳಿವೆ :-

1. ಕೇವಲಜ್ಞಾನ 2. ಕೇವಲದರ್ಶನ 3. ಕ್ಷಾಯಿಕದಾನ 4. ಕ್ಷಾಯಿಕ ಲಾಭ 5. ಕ್ಷಾಯಿಕಭೋಗ 6. ಕ್ಷಾಯಿಕ ಉಪಭೋಗ 7. ಕ್ಷಾಯಿಕ ವೀರ್ಯ 8. ಕ್ಷಾಯಿಕ ಸಮ್ಯಕ್ತ್ವ 9. ಕ್ಷಾಯಿಕ ಚಾರಿತ್ರ.

**ಕೇವಲಜ್ಞಾನ :** ಸಂಪೂರ್ಣ ಜ್ಞಾನಾವರಣೀಯ ಕರ್ಮದ ಕ್ಷಯದಿಂದ ಆತ್ಮನಿಗೆ ಸ್ವಾಭಾವಿಕವಾದ ಕೇವಲಜ್ಞಾನವಾಗುತ್ತದೆ.



**ಕೇವಲದರ್ಶನ :** ದರ್ಶನಾವರಣೀಯ ಕರ್ಮದ ಸಂಪೂರ್ಣ ಕ್ಷಯ ವಾಗುವುದರಿಂದ ಕೇವಲದರ್ಶನ ಉಂಟಾಗುತ್ತದೆ.

**ಕ್ಷಾಯಿಕ ದಾನ, ಕ್ಷಾಯಿಕ ಲಾಭ, ಕ್ಷಾಯಿಕಭೋಗ, ಕ್ಷಾಯಿಕ ಉಪ ಭೋಗ ಮತ್ತು ಕ್ಷಾಯಿಕ ವೀರ್ಯ.**

ಈ ಐದೂ ಕ್ರಮವಾಗಿ ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ ಮತ್ತು ವೀರ್ಯಾಂತರಾಯ ಕರ್ಮಗಳು ಸಂಪೂರ್ಣ ಕ್ಷಯವಾದ ನಂತರ ಉಂಟಾಗುತ್ತವೆ.

**ಕ್ಷಾಯಿಕಸಮ್ಯಕ್ತ್ವ :** ಅನಂತಾನುಬಂಧೀ, ಅಪ್ರತ್ಯಾಖ್ಯಾನ, ಪ್ರತ್ಯಾಖ್ಯಾನ ಮತ್ತು ಸಂಜ್ವಲನದ ಕ್ರೋಧ, ಮಾನ, ಮಾಯಾ, ಲೋಭಗಳೂ, ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್ತ್ವಪ್ರಕೃತಿಗಳೂ ಆದ ದರ್ಶನ ಮೋಹನೀಯ ಕರ್ಮದ ಸಂಪೂರ್ಣ ಕ್ಷಯವಾದಾಗ ಕ್ಷಾಯಿಕಸಮ್ಯಕ್ತ್ವ ಉಂಟಾಗುತ್ತದೆ.

**ಕ್ಷಾಯಿಕಚಾರಿತ್ರ :** ಅನಂತಾನುಬಂಧೀ, ಅಪ್ರತ್ಯಾಖ್ಯಾನ, ಪ್ರತ್ಯಾಖ್ಯಾನ, ಸಂಜ್ವಲನದ ಕ್ರೋಧ, ಮಾನ, ಮಾಯಾ, ಲೋಭಗಳೂ ಮಿಥ್ಯಾತ್ವ, ಸಮ್ಯಗ್ ಮಿಥ್ಯಾತ್ವ, ಸಮ್ಯಕ್ತ್ವ ಪ್ರಕೃತಿಗಳೂ ಆದ ಚಾರಿತ್ರ ಮೋಹನೀಯ ಕರ್ಮದ ಸಂಪೂರ್ಣ ಕ್ಷಯವಾದಾಗ ಕ್ಷಾಯಿಕ ಸಮ್ಯಕ್ಚಾರಿತ್ರ ಉಂಟಾಗುತ್ತದೆ.

**೧೫. ಕ್ಷಯೋಪಶಮಿಕ ಭಾವದ ಭೇದಗಳಾವುವು ?**

ಕ್ಷಯೋಪಶಮಿಕ ಭಾವದ ಭೇದಗಳು ೧೮ :-

ಮತಿ, ಶ್ರುತಿ, ಅವಧಿ, ಮನಃಪರ್ಯಾಯ, ಎಂಬ ಜ್ಞಾನಗಳು - ೪.

ಕುಮತಿ, ಕುಶ್ರುತ, ಕುಅವಧಿ ಎಂಬ ಅಜ್ಞಾನಗಳು - ೩.

ಚಕ್ಷುದರ್ಶನ, ಅಚಕ್ಷುದರ್ಶನ, ಅವಧಿ ದರ್ಶನಗಳೆಂಬ ದರ್ಶನ ಗಳು- ೩.

ಕ್ಷಯೋಪಶಮಿಕ ದಾನ, ಲಾಭ, ಭೋಗ, ಉಪಭೋಗ ಮತ್ತು ವೀರ್ಯ ಎಂಬ ಲಬ್ಧಿಗಳು - ೫.

ಕ್ಷಯೋಪಶಮ ಸಮ್ಯಕ್ತ್ವ, ಕ್ಷಯೋಪಶಮ ಚಾರಿತ್ರ ಮತ್ತು ಸಂಯಮಾ ಸಂಯಮ ಎಂಬ - ೩.

ಹೀಗೆ ಈ ೧೮ ಕ್ಷಯೋಪಶಮ ಭಾವದ ಭೇದಗಳಾಗಿವೆ.

**೧೬. ಔದಾಯಿಕ ಭಾವದ ಭೇದಗಳಾವುವು ?**

ಔದಾಯಿಕ ಭಾವದಲ್ಲಿ ೨೧ ಭೇದಗಳಿವೆ :-

ಗತಿಗಳು ೪ - ನರಕ, ತಿರ್ಯಂಚ, ಮನುಷ್ಯ, ದೇವಗತಿ.

ಕಷಾಯಗಳು ೪ - ಕ್ರೋಧ, ಮಾನ, ಮಾಯಾ, ಲೋಭ.

ವೇದಗಳು ೩ - ಸ್ತ್ರೀವೇದ, ಪುಂವೇದ, ನಪುಂಸಕವೇದ ಮತ್ತು ಮಿಥ್ಯಾತ್ವ, ಅಜ್ಞಾನ, ಅಂಸಯಮ, ಅಸಿದ್ಧತ್ವ

ಲೇಶ್ಯಗಳು ೬ - ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ, ಶುಕ್ಲ.

ಹೀಗೆ ಔದಾಯಿಕ ಭಾವದ ಭೇದಗಳು ೨೧ ಇವೆ.

**೧೭. ಪಾರಿಣಾಮಿಕ ಭಾವದ ಭೇದಗಳಾವುವು ?**

ಪಾರಿಣಾಮಿಕ ಭಾವದ ಭೇದಗಳು - ೩.

1. ಜೀವತ್ವ 2. ಭವ್ಯತ್ವ 3. ಅಭವ್ಯತ್ವ

ಇವು ಆತ್ಮನ ಸ್ವಭಾವ ರೂಪವಾದವುಗಳು. ಇವುಗಳಿಗೆ ಕರ್ಮದ ಅಪೇಕ್ಷೆ ಇರುವುದಿಲ್ಲ.

ಹೀಗೆ ಭೇದಗಳುಳ್ಳವುಗಳು ಜೀವನ ಅಸಾಧಾರಣ ಭಾವಗಳು. ಎಲ್ಲಾ ಜೀವಿಗಳಿಗೂ ಇವುಗಳಲ್ಲಿ ಯಾವುದಾದರೊಂದು ಭಾವ ಇದ್ದೇ ಇರುತ್ತದೆ.

ಈ ಭಾವಗಳಿಗೂ, ಗುಣಸ್ಥಾನಗಳಿಗೂ ಸಂಬಂಧವಿದೆ. ಈ ಭಾವಗಳಿಂದಲೇ ಗುಣಸ್ಥಾನಗಳ ವಿವರ ಗೊತ್ತಾಗುತ್ತದೆ. ಸಮ್ಯಕ್ತ್ವಕ್ಕೂ ಸಂಬಂಧವಿದೆ.

ಈ ಭಾವದಿಂದಲೇ ಜೀವನಿಗೆ ಕರ್ಮಬಂಧ ಉದಯ, ಅನುಭವ, ಬಿಡುಗಡೆಗಳು ಆಗುತ್ತವೆ.

ಹೀಗೆ ಮಿಥ್ಯಾದೃಷ್ಟಿಯು ಸಮ್ಯಗ್ದೃಷ್ಟಿಯಾಗಲಿಕ್ಕೆ ಲಬ್ಧಿಗಳೂ, ಭಾವಗಳೂ ನಿಮಿತ್ತ ಕಾರಣಗಳಾಗಿವೆ. ಇವುಗಳಲ್ಲಿ ಯಾವ ಯಾವ ಲಬ್ಧಿಗಳು, ಯಾವ ಯಾವ ಭಾವಗಳು ಉತ್ತಮವೆಂದು ತಿಳಿದು ಜೀವಿಗಳು ಸದ್ಭಾವಗಳಿಂದ ದೇಶನಾಲಬ್ಧಿ, ಕರಣಲಬ್ಧಿಯನ್ನು ಒದಗಿಸಿಕೊಂಡು ಸಮ್ಯಕ್ತ್ವವನ್ನು ಧರಿಸಿ ಉತ್ತರೋತ್ತರ ತನ್ನ ಆತ್ಮ ಕಲ್ಯಾಣ ಮಾಡಿಕೊಳ್ಳಬಹುದು.



# ೫೮ ಗುಣಸ್ಥಾನಗಳು

**೧. ಗುಣಸ್ಥಾನ ಎಂದರೇನು ?**

ಮೋಹ ಮತ್ತು ಯೋಗಗಳಿಂದಾಗುವ ಜೀವಿಗಳ ಪರಿಣಾಮಗಳ, ಭಾವಗಳ, ಗುಣಗಳ ಏರಿಳಿತವನ್ನು ತಿಳಿಸುವ ಹಂತಗಳಿಗೆ ಗುಣಸ್ಥಾನಗಳು ಎನ್ನುತ್ತಾರೆ.

**೨. ಗುಣಸ್ಥಾನಗಳು ಎಷ್ಟು ? ಅವು ಯಾವುವು ?**

1. ಮಿಥ್ಯಾತ್ವ 2. ಸಾಸಾದನ 3. ಮಿಶ್ರ 4. ಅವಿರತ ಸಮ್ಯಗ್ದೃಷ್ಟಿ 5. ದೇಶವಿರತ 6. ಪ್ರಮತ್ತಾಪ್ರಮತ್ತ 7. ಅಪ್ರಮತ್ತ 8. ಅಪೂರ್ವಕರಣ 9. ಅನಿವೃತ್ತಿಕರಣ 10. ಸೂಕ್ಷ್ಮಸಂಪರಾಯ 11. ಉಪಶಾಂತ ಕಷಾಯ 12. ಕ್ಷೀಣಮೋಹ 13. ಸಯೋಗಕೇವಲಿ 14. ಅಯೋಗಕೇವಲಿ

-ಹೀಗೆ ಗುಣಸ್ಥಾನಗಳು ೧೪ ಇವೆ.

**೩. ವಿರತ ಎಂದರೇನು ?**

ವಿರತ ಎಂದರೆ-ವ್ರತ, ಸಂಯಮಗಳು ಎಂದರ್ಥ. ಇನ್ನೊಂದು ಅರ್ಥದಲ್ಲಿ ಹಿಂಸಾದಿ ಪಾಪಕಾರ್ಯಗಳನ್ನು ಬಿಡುವುದು.

**೪. ಮಿಥ್ಯಾತ್ವ ಎಂದರೇನು ?**

ಸದ್ಧರ್ಮದಲ್ಲಿ , ಸತ್ಕಾರ್ಯದಲ್ಲಿ, ಜಿನದೇವ, ಜಿನಶಾಸ್ತ್ರ, ಜಿನಗುರುಗಳಲ್ಲಿ ಶ್ರದ್ಧೆ ಇಲ್ಲದೆ ಮೂಢನಂಬಿಕೆ, ದುರ್ಭಾವ, ದುರ್ವಚನ, ದುರಾಚಾರಗಳಿಂದ ಕೂಡಿರುವ ಮತ್ತು ರಾಗ-ದ್ವೇಷಗಳಿಂದ ಕೂಡಿರುವ, ದೇವ-ಗುರು-ಧರ್ಮ-ಶಾಸ್ತ್ರಗಳನ್ನು ನಂಬುವುದು ಮಿಥ್ಯಾತ್ವವಾಗಿದೆ. ಈ ಮಿಥ್ಯಾತ್ವ ಅಜ್ಞಾನ, ವಿಪರೀತ, ವಿನಯ, ಸಂಶಯ, ಏಕಾಂತಗಳಿಂದ ಕೂಡಿರುತ್ತದೆ. ಒಳ್ಳೆಯದನ್ನು ನಂಬುವುದಿಲ್ಲ, ತಿಳಿಯುವುದಿಲ್ಲ, ಹೀಗೆ ಯಾರ ಪರಿಣಾಮ-ಮನೋಭಾವ, ಕಾರ್ಯಗಳು ಇರುತ್ತವೋ ಆ ಜೀವಿಗಳು ತೀರ ಕೆಳಹಂತದ ಕಳಪೆ ದರ್ಜೆಯ ಗುಣಸ್ಥಾನದವರೆಂದೂ ತಿಳಿಯಲಾಗುತ್ತದೆ. ಇದು ಶ್ರೀಮಂತಿಕೆ-ಬಡತನ-ಜಾತಿ-ಪಂಥ-ವಿದ್ಯೆ ಇವುಗಳಿಗೆ ಸಂಬಂಧಿಸಿದುದಲ್ಲ. ಕೇವಲ ಧಾರ್ಮಿಕ ರಂಗಕ್ಕೆ ಮಾತ್ರ ಸಂಬಂಧಿಸಿದ್ದು. ಪಿತ್ತಜ್ವರ ಯುಕ್ತರಾದವರಿಗೆ ರುಚಿಯಾದ ಹಾಲೂ ವಿಷವಾಗಿ ಪರಿಣಮಿಸುವಂತೆ, ರುಚಿಕರವಾಗದಂತೆ,

ಇಷ್ಟಪಡದಂತೆ ಸದ್ಧರ್ಮ, ಸದಾಚಾರಗಳು ಯಾರಿಗೆ ರುಚಿಸುವುದಿಲ್ಲವೋ ಅಂತಹವರು ಮಿಥ್ಯಾದೃಷ್ಟಿಗಳಾಗಿರುತ್ತಾರೆ. ಇವರಿಗೆ ಧರ್ಮ-ಕರ್ಮ, ಪಾಪ-ಪುಣ್ಯ, ಸ್ವರ್ಗ-ಮೋಕ್ಷಗಳ ಬಗ್ಗೆ ಅರಿವು ಇರುವುದಿಲ್ಲ. ಶರೀರವೇ ತಾನೆಂದೂ, ಶರೀರ ಸುಖವೇ ನಿಜವಾದ ಸುಖವೆಂದೂ ವಿಪರೀತವಾದ ಶ್ರದ್ಧೆ ಇರುತ್ತದೆ. ತಿಳಿವಳಿಕೆ ತಪ್ಪಾಗಿರುತ್ತದೆ. ಅತಿಯಾದ ದೀನಭಾವವಿರುತ್ತದೆ. ಸದಾ ಅಪನಂಬಿಕೆಯ ಮನೋಭಾವದವರಾಗಿರುತ್ತಾರೆ. ತನ್ನದೇ, ತಾನು ಹೇಳಿದ್ದೇ, ತಾನು ನಂಬಿದ್ದೇ ಸರಿ ಎನ್ನುವ ಏಕಾಂತ ಪಟ್ಟು ಇರುತ್ತದೆ. ಇದೇ ಮಿಥ್ಯಾತ್ವವೆಂಬ ಮೊದಲ ಗುಣಸ್ಥಾನ. ಇವರಿಗೆ ಆತ್ಮಶ್ರದ್ಧೆ ಇರುವುದಿಲ್ಲ.

**೫. ಮಿಥ್ಯಾತ್ವದ ವಿಧಾನಗಳಾವುವು ?**

ಮಿಥ್ಯಾತ್ವದಲ್ಲಿ ೨ ವಿಧ :-

1. ಗೃಹೀತ ಮಿಥ್ಯಾತ್ವ 2. ಅಗೃಹೀತ ಮಿಥ್ಯಾತ್ವ

ಯಾರು ಈ ಭವದಲ್ಲಿ ಪರೋಪದೇಶದಿಂದ, ವಾತಾವರಣ ಒತ್ತಡದಿಂದ ತನ್ನ ಉತ್ತಮ ನಂಬಿಕೆಯನ್ನು ಕಳೆದುಕೊಂಡು ಅಧರ್ಮದಲ್ಲಿ ಶ್ರದ್ಧೆಯುಳ್ಳವನಾಗುವನೋ ಅದನ್ನು ಗೃಹೀತ ಮಿಥ್ಯಾತ್ವವೆನ್ನುತ್ತಾರೆ.

ಯಾರಿಗೆ ಅನಾದಿ ಕಾಲದಿಂದಲೂ ಜನ್ಮದೊಂದಿಗೆ ಅಂಟಿ ಬಂದಿರುವ ಮೋಹನೀಯ ಕರ್ಮದಿಂದ ಆತ್ಮನಲ್ಲಿ ಅಶ್ರದ್ಧೆ ಧರ್ಮದಲ್ಲಿ ಅಪನಂಬಿಕೆ ಇದೆಯೋ ಅದನ್ನು ಅಗೃಹೀತ ಮಿಥ್ಯಾತ್ವ ಅಥವಾ ಅನಾದಿ ಮಿಥ್ಯಾತ್ವವೆನ್ನುತ್ತಾರೆ.

**೬. ಸಾಸಾದನ ಗುಣಸ್ಥಾನಗಳು ಎಂದರೇನು ?**

ಕೆಲವರಿಗೆ ಕಾರಣಾಂತರದಿಂದ ಒಳ್ಳೆಯ ಧರ್ಮ, ದೇವ, ಗುರು, ಶಾಸ್ತ್ರ ಮತ್ತು ಆತ್ಮತತ್ತ್ವದಲ್ಲಿ ಶ್ರದ್ಧೆ ಉಂಟಾಗಿರುತ್ತದೆ. ಆದರೆ ಅದು ಬೇಗ ಮಾಯವಾಗಿ ಹೋಗುತ್ತದೆ. ಬಹುಕಾಲವಿರುವುದಿಲ್ಲ. ಮೇಲೆ ನೆಗೆದವರು ಕೆಳಗುರುಳಿ ಬೀಳುವಂತೆ ಅವರು ಸೀದಾ ಮಿಥ್ಯಾತ್ವ ಗುಣಸ್ಥಾನಕ್ಕೆ ಬಂದು ಬೀಳುತ್ತಾರೆ. ಸಮ್ಯಕ್ತ್ವ ನಷ್ಟವಾಗಿರುತ್ತದೆ. ಸಮ್ಯಕ್ತ್ವದಲ್ಲೂ ಇಲ್ಲ ಅಥವಾ ಮಿಥ್ಯಾತ್ತ್ವದಲ್ಲೂ ಇಲ್ಲ. ಇಂತಹ ಮನೋಭಾವ ಪರಿಣಾಮದವರಿಗೆ ಸಾಸಾದನ ಗುಣಸ್ಥಾನದವರಾಗಿರುತ್ತಾರೆ.

**೭. ಸಮ್ಯಗ್ಮಿಥ್ಯಾತ್ವ ಎಂದರೇನು ?**



ಸಮ್ಯಕ್ತ್ವವನ್ನು, ನಿಜವಾದ ದೇವ, ಗುರು, ಧರ್ಮ, ಆತ್ಮಶ್ರದ್ಧೆಯನ್ನು ಒಪ್ಪಿಕೊಂಡರೂ ಮಿಥ್ಯಾತ್ವವನ್ನು ಬಿಡದೆ ಅವರ ನಂಬಿಕೆ, ಶ್ರದ್ಧೆ, ನಡವಳಿಕೆಯು ಮಿಶ್ರವಾಗಿರುತ್ತದೆ. ಒಂದೇ ಕಾಲದಲ್ಲಿ ಸಮ್ಯಕ್ತ್ವ-ಮಿಥ್ಯಾತ್ವರೂಪದ ಪರಿಣಾಮವಿರುತ್ತದೆ. ಇದನ್ನು ಮಿಶ್ರ ಗುಣಸ್ಥಾನವೆನ್ನುವರು. ಇಲ್ಲಿದ್ದಾಗ ಇದು, ಅಲ್ಲಿದ್ದಾಗ ಅದು. ಯಾವುದರಲ್ಲಿಯೂ ಸ್ಥಿರವಾಗಿರುವುದಿಲ್ಲ. ಎರಡನ್ನೂ ನಂಬುವುದು. ನಮಗೆ ಯಾವುದಾದರೇನು ಎಲ್ಲದರಲ್ಲೂ ಒಂದೇ ಭಾವನೆ ಎನ್ನುತ್ತಾರೆ. ಅಂದರೆ ಮೊಸರಿಗೆ ಸಕ್ಕರೆ ಬೆರೆಸಿ ತಿಂದಂತೆ ಸಿಹಿಯೂ ಇಲ್ಲ, ಹುಳಿಯೂ ಇಲ್ಲ. ಇಂತಹ ಪರಿಣಾಮ, ಭಾವನೆ ಗುಣವುಳ್ಳವರು ಮಿಶ್ರ ಅಥವಾ ಸಮ್ಯಗ್ಮಿಥ್ಯಾತ್ವ ಗುಣಸ್ಥಾನವರ್ತಿಗಳೆನ್ನುವರು.

ಈ ಮೂರೂ ಮಿಥ್ಯಾತ್ವದ ವಿವಿಧ ರೂಪಗಳೇ ಆಗಿವೆ.

ಈ ಮೂರೂ ಗುಣಸ್ಥಾನವರ್ತಿಗಳು ತೀರ ಕೆಳದರ್ಜೆಯವರು. ಅವರಿಗೆ ಸದ್ಧರ್ಮದ ಆತ್ಮ-ಮೋಕ್ಷ-ಪುರುಷಾರ್ಥದಲ್ಲಿ ನಂಬಿಕೆ ಇರುವುದಿಲ್ಲ. ಇಂತಹ ಪರಿಣಾಮಿಗಳು ನಾಲ್ಕೂ ಗತಿಗಳಲ್ಲಿ ಹುಟ್ಟಿ ಸಾಯುತ್ತಾ ತೊಳಲಿ-ಬಳಲುತ್ತಿರುತ್ತಾರೆ. ಇಂತಹವರಿಗೆ ಬಹಿರಾತ್ಮರು ಎಂದು ಕರೆಯುತ್ತಾರೆ. ಇಂತಹ ಪರಿಣಾಮದವರು ವ್ರತ-ನೇಮ-ನಿಷ್ಠೆಗಳನ್ನೂ, ಸಂಯಮವನ್ನೂ ಪಾಲಿಸುವುದಿಲ್ಲ. ಮಿಥ್ಯಾತ್ತ್ವ ಚಂಚಲ ಸ್ವಭಾವ, ಹಟ, ಅಪನಂಬಿಕೆ, ದುರಾಗ್ರಹ, ಅತಿವಿನಯ ಸ್ವಭಾವದವರಾಗಿರುತ್ತಾರೆ. ಈ ಮಿಥ್ಯಾತ್ವಗಳು ಆತ್ಮನನ್ನು ಅಧೋಗತಿಗೆ ತಳ್ಳುತ್ತವೆ.

**೮. ಅವಿರತ ಸಮ್ಯಗ್ದೃಷ್ಟಿ ಗುಣಸ್ಥಾನ ಎಂದರೆ ಏನು ?**

ಯಾರಿಗೆ ಮೇಲೆ ಹೇಳಿದ ಮಿಥ್ಯಾತ್ವ, ಸಾಸಾದನ, ಸಮ್ಯಗ್ಮಿಥ್ಯಾತ್ವ ಪ್ರಕೃತಿಗಳು ಇರುವುದಿಲ್ಲವೋ, ಯಾರಿಗೆ ಕ್ರೋಧ, ಮಾನ, ಮಾಯಾ, ಲೋಭ ಕಷಾಯಗಳು ಅನಂತಾನುಬಂಧಿಯಾಗಿರುವುದಿಲ್ಲವೋ ಅಂತಹವರು ಜಿನದೇವ, ಗುರು, ಶಾಸ್ತ್ರ, ಧರ್ಮವನ್ನು ಅಂತಃಕರಣ ಪೂರ್ವಕವಾಗಿ, ದೃಢವಾಗಿ ನಂಬುತ್ತಾರೆ. ಇಂತಹ ಗುಣ ಪರಿಣಾಮವುಳ್ಳ ಜೀವಿಗಳಿಗೆ ಸಮ್ಯಗ್ದೃಷ್ಟಿಗಳೆಂದು ಹೇಳುವರು. ಆದರೆ ಇವರು ಯಾವ ವ್ರತ, ನಿಯಮವನ್ನು ಮಾಡಿರುವುದಿಲ್ಲ. ಸಂಯಮವನ್ನೂ ಪಾಲಿಸುವುದಿಲ್ಲವಾದ್ದರಿಂದ ಅವಿರತ ಸಮ್ಯಗ್ದೃಷ್ಟಿಗಳೆಂದು ಹೇಳುವರು. ಆದರೂ ಅಷ್ಟಮೂಲ ಗುಣಧಾರಿಗಳಾಗಿರುತ್ತಾರೆ. ಅಷ್ಟಾಂಗಸಹಿತರಾಗಿರುತ್ತಾರೆ. ಜೀವಾದಿ ದ್ರವ್ಯ-

ತತ್ತ್ವಗಳಲ್ಲಿ ಶ್ರದ್ಧೆ ಇರುತ್ತದೆ. ಮೂರು ಮೂಢ, ಆರು ಅನಾಯತನ, ಏಳು ಮದಗಳಿರುವುದಿಲ್ಲ. ಜಿನವಚನದಲ್ಲಿ ಶ್ರದ್ಧೆ ಇರುತ್ತದೆ. ಇದೇ ನಾಲ್ಕನೇ ಅವಿರತ ಸಮ್ಯಕ್ತ್ವಗುಣಸ್ಥಾನ. ಇವರಿಗೆ ದರ್ಶನ ಮೋಹನೀಯ ಕರ್ಮ ಕಡಿಮೆಯಾಗಿರುತ್ತದೆ.

**೯. ದೇಶವಿರತ ಗುಣಸ್ಥಾನವೆಂದರೇನು ?**

ಯಾರು ಜಿನದೇವ-ಗುರು-ಧರ್ಮ-ಶಾಸ್ತ್ರದಲ್ಲಿ ಅಗಾಧವಾದ ಶ್ರದ್ಧೆಯೆನ್ನಿಟ್ಟು ತ್ರಸಹಿಂಸೆಯಿಂದ ಮತ್ತು ಸ್ಥಾವರಹಿಂಸೆಯಿಂದ ದೂರವಿರುವರೋ ಮತ್ತು ಅಣುವ್ರತ, ಗುಣವ್ರತ, ಶಿಕ್ಷಾವ್ರತಗಳನ್ನು ಪಾಲಿಸುತ್ತಾ ಶ್ರಾವಕರ ಹನ್ನೊಂದು ನೆಲೆಗಳನ್ನು ಏರುತ್ತಾ ಇರುತ್ತಾರೆ ಅವರು ದೇಶವಿರತ ಅಥವಾ ಪ್ರಮತ್ತ-ಸಂಯತ ಅಂದರೆ ಸಂಯಮ ಪಾಲಿಸುವುದರಲ್ಲಿ ಪ್ರಮಾದ ದೋಷಗಳಾಗುತ್ತಿರುತ್ತವೆ. ಪೂರ್ಣರೂಪ ಸಂಯಮವನ್ನು ಪಾಲಿಸುವುದಿಲ್ಲ. ಇಂತಹ ಮನೋಭಾವದವರು ಶ್ರಾವಕರೂ, ಕ್ಷುಲ್ಲಕರೂ, ಐಲಕರೂ, ದೇಶವಿರತಿ ಗುಣಸ್ಥಾನದವರೆಂದು ಹೇಳಲಾಗುತ್ತದೆ. ಇವರೇ ಪ್ರಮತ್ತ- ಸಂಯತರು. ಇದು ಐದನೇ ಗುಣಸ್ಥಾನ.

**೧೦. ಪ್ರಮತ್ತಾ-ಪ್ರಮತ್ತ ಗುಣಸ್ಥಾನವೆಂದರೇನು ?**

ಸಕಲ ಸಂಯಮ ಪಾಲಕರೂ, ನಿರತಿಚಾರವಾಗಿ ಮಹಾವ್ರತ ಪಾಲಕರೂ, ಆಗಿರುವ ಮಹಾಮುನಿಗಳು ೬ನೇ ಗುಣಸ್ಥಾನವಾದ ಪ್ರಮತ್ತಾ ಪ್ರಮತ್ತ ಗುಣಸ್ಥಾನದವರು ಎಂದು ಹೇಳುತ್ತಾರೆ. ಸಂಯತ ಎಂದರೆ ಅಹಿಂಸಾ ಪಾಲನೆ, ದೋಷಗಳಿಲ್ಲದ ಚಾರಿತ್ರ ಪಾಲನೆ. ಆದರೆ ಇವರಿಗೂ ಆಗಾಗ ಸಂಯಮ ಪಾಲನೆಯಲ್ಲಿ ಪ್ರಮಾದಗಳೂ ದೋಷಗಳು ಆಗುವುದುಂಟು. ಹೀಗಾಗಿ ಇವರಿಗೆ ಪ್ರಮತ್ತಾಪ್ರಮತ್ತರೆಂದು ಹೇಳುವರು. ಇವರು ಮುನಿಗಳು.

**೧೧. ಪ್ರಮಾದಗಳು ಯಾವುವು ?**

ನಾಲ್ಕು ವಿಕಥೆಗಳಾದ ಸ್ತ್ರೀಕಥಾ, ರಾಜ ಕಥಾ, ಚೋರ ಕಥಾ, ರಾಷ್ಟ್ರ ಕಥಾಗಳು ನಾಲ್ಕು ಕಷಾಯಗಳಾದ ಕ್ರೋಧ, ಮಾನ, ಮಾಯಾ, ಲೋಭಗಳೂ, ಐದು ಇಂದ್ರಿಯಗಳಾದ ಸ್ಪರ್ಶ, ರಸ, ಘ್ರಾಣ, ಚಕ್ಷು, ಶ್ರೋತೃಗಳೂ ಹಾಗೂ ನಿದ್ರೆ, ಸ್ನೇಹ ಎಂಬಿವುಗಳಿಂದ ಹದಿನೈದು ಪ್ರಮಾದಗಳೂ ಆಗುತ್ತವೆ. ಮುನಿಗಳಿಗೆ ಕೆಲವೊಮ್ಮೆ ಈ ರೀತಿಯ ಪ್ರಮಾದಗಳಲ್ಲಿ ಒಂದಿಲ್ಲೊಂದು ಆಗಾಗ ಉಂಟಾಗುತ್ತವೆ. ಧ್ಯಾನ ಮಾಡುವಾಗ ಪ್ರಮಾದರಹಿತರೂ, ಆಹಾರ, ವಿಹಾರ ಮುಂತಾದ ವ್ಯವಹಾರದಲ್ಲಿ ಪ್ರಮತ್ತರೂ ಆಗಿರುತ್ತಾರೆ.



**೧೨. ಅಪ್ರಮತ್ತ ಗುಣಸ್ಥಾನ ಎಂದರೇನು ?**

ಯಾರಲ್ಲಿ ಎಲ್ಲಾ ಪ್ರಮಾದಗಳೂ ಇಲ್ಲವಾಗಿವೆಯೋ, ಯಾರು ಆತ್ಮ ಧ್ಯಾನಾಸಕ್ತರಾಗಿರುವರೋ, ಯಾರು ಪೂರ್ಣ ಸಂಯಮ ಪಾಲಕರಾಗಿರುವರೋ, ಯಾರು ನಿರ್ದೋಷವಾದ ಚಾರಿತ್ರಪಾಲಕರಾಗಿರುವರೋ, ಅವರು ಅಪ್ರಮತ್ತ ಗುಣಸ್ಥಾನವರ್ತಿಗಳೆಂದು ಹೇಳುವರು. ಆದರೂ ಇವರಿಗೆ ಕರ್ಮದ ಪೂರ್ಣ ಉಪಶಮವಾಗಿರುವುದಿಲ್ಲ ಹಾಗೂ ಕರ್ಮವನ್ನು ನಿರ್ಜರೆ ಮಾಡುವ ಹಂತದಲ್ಲಿರುತ್ತಾರೆ. ಆತ್ಮಧ್ಯಾನ ಮತ್ತು ತಪೋನಿರತರಾಗಿರುತ್ತಾರೆ. ಮುಂದಿನ ಗುಣಸ್ಥಾನವನ್ನು ಏರುತ್ತಿರುತ್ತಾರೆ. ಇವರು ನಿರತಿಚಾರವಾಗಿ, ಪ್ರಮಾದರಹಿತರಾಗಿ ಪಂಚಮಹಾವ್ರತವನ್ನೂ, ೨೮ ಮೂಲ ಗುಣಗಳನ್ನೂ ಪಾಲಿಸುವ ಶ್ರಮಣ ದಿಗಂಬರ ಸಾಧುಗಳಾಗಿರುತ್ತಾರೆ. ಆದರೂ ಧ್ಯಾನಾಸಕ್ತರಾದ ಮುನಿಗಳ ಅವಸ್ಥೆಗೆ ಏಳನೇ ಗುಣಸ್ಥಾನದ ಅಪ್ರಮತ್ತರೆಂದು ಹೇಳಲಾಗಿದೆ. ಈ ಸ್ಥಿತಿ ಬಹುಕಾಲ ಇರುವುದಿಲ್ಲ.

**೧೩. ಅಪೂರ್ವಕರಣ ಗುಣಸ್ಥಾನವೆಂದರೇನು ?**

ಯಾರು ಧ್ಯಾನಾಸಕ್ತರಾಗಿದ್ದು ಪರಿಣಾಮದ ವಿಶುದ್ಧವಾಗುತ್ತಾ ಇರುತ್ತಾರೋ ಅವರಿಗೆ ಹಿಂದೆಂದೂ ಕಾಣದಿದ್ದ ಆತ್ಮಸ್ವರೂಪ ಕಾಣುತ್ತದೆ. ಹಿಂದೆಂದೂ ಆಗದಿದ್ದ ಆನಂದದ ಅನುಭವವಾಗುತ್ತದೆ. ತಮ್ಮ ಮನ, ವಚನ, ಕಾಯಗಳು ಒಂದು ರೀತಿಯ ಅಪೂರ್ವವಾದ ರೀತಿಯಲ್ಲಿ ಆತ್ಮಾನಂದದಲ್ಲಿ ತಲ್ಲೀನವಾಗಿರುತ್ತವೆ. ಇಂತಹ ಮಹಾಮುನಿಗಳ ಸ್ಥಿತಿಯು ಎಂಟನೆಯ ಅಪೂರ್ವಕರಣ ಗುಣಸ್ಥಾನದಲ್ಲಿರುತ್ತದೆ. ಇಲ್ಲಿ ಆತ್ಮ ಬೇರೆ, ಶರೀರ ಬೇರೆ, ಆತ್ಮನೇ ನಾನು, ಶರೀರ ನಾನಲ್ಲ ಎಂಬ ಭೇದವಿಜ್ಞಾನದಲ್ಲಿ ಮುನಿಗಳು ತೊಡಗಿರುತ್ತಾರೆ.

**೧೪. ಅನಿವೃತ್ತಿಕರಣ ಗುಣಸ್ಥಾನವೆಂದರೇನು ?**

ಯಾರ ಪರಿಣಾಮವು ವಿಶುದ್ಧವಾಗುತ್ತಾ ಹೋಗಿ ಆತ್ಮಾನಂದದ ಅನುಭವದಲ್ಲಿ ತೊಡಗಿರುತ್ತಾರೋ ಅವರಿಗೆ ಅದರಿಂದ ನಿವೃತ್ತರಾಗಲು ಅಂದರೆ ಅಂತಹ ಅಪೂರ್ವವಾದ ಸ್ಥಿತಿಯಿಂದ ಹಿಮ್ಮುಖರಾಗಲು ಇಷ್ಟ ಇರುವುದಿಲ್ಲ. ಇಂತಹ ಅವಸ್ಥೆ ಕೇವಲ ಒಂದು ಅಂತರ್‌ಮುಹೂರ್ತ ಮಾತ್ರವಿರುತ್ತದೆ. ಈ ಗುಣಸ್ಥಾನವರ್ತಿಗಳ ಮನ, ವಚನ, ಕಾಯಗಳ ಪರಿಣಾಮವು ಕರ್ಮಗಳ

ಕ್ಷಯದ ಕಡೆಗೆ ಇರುತ್ತದೆ, ಇಂತಹ ನಿರ್ಮಲ ಧ್ಯಾನವೆಂಬ ಅಗ್ನಿಯಿಂದ ಕರ್ಮಗಳನ್ನು ಸುಡುತ್ತಾ ಇರುತ್ತಾರೆ. ಇಂತಹ ಧ್ಯಾನಾಸಕ್ತರಾದ ಮುನಿಗಳ ಅವಸ್ಥೆಗೆ ಅನಿವೃತ್ತಿಕರಣವೆಂಬ ಒಂಭತ್ತನೆಯ ಗುಣಸ್ಥಾನವೆನ್ನುವರು.

**೧೫. ಸೂಕ್ಷ್ಮ ಸಾಂಪರಾಯ ಗುಣಸ್ಥಾನವೆಂದರೇನು ?**

ಕೊಳೆಯಾದ ಬಟ್ಟೆಯನ್ನು ಸ್ವಚ್ಛಗೊಳಿಸಿದರೂ ಅಲ್ಪ-ಸ್ವಲ್ಪ ಕೊಳೆಯ ಛಾಯೆ ಕಾಣುವಂತೆ ಪದಾರ್ಥಗಳ ಮೇಲೆ ಧೂಳು ಸೂಕ್ಷ್ಮವಾಗಿ ಕುಳಿತಿರುವಂತೆ, ಕನ್ನಡಿಯಮೇಲೆ ಧೂಳು ಕುಳಿತಿರುವಂತೆ ಧ್ಯಾನಾಸಕ್ತರಾದ ಮುನಿಗಳು ಆತ್ಮನಲ್ಲಿ ಕರ್ಮಗಳೂ ಸೂಕ್ಷ್ಮವಾಗಿ ಇರುವುದುನ್ನು ಕಾಣುತ್ತಿರುತ್ತಾರೆ. ಅವರಿಗೆ ಇನ್ನೂ ರಾಗ-ಮೋಹ-ಲೋಭ ಕಷಾಯಗಳು ಸೂಕ್ಷ್ಮವಾಗಿ ಇರುತ್ತವೆ. ಆದರೂ ಕರ್ಮಗಳು ಸ್ವಲ್ಪ ಸ್ವಲ್ಪವಾಗಿ ಕಳೆಯುತ್ತಾ ಹೋಗುತ್ತಿರುವ ಪರಿಣಾಮಕ್ಕೆ ಸೂಕ್ಷ್ಮಸಾಂಪರಾಯ ಗುಣಸ್ಥಾನವೆನ್ನುವರು. ಇದು ಹತ್ತನೆಯ ಗುಣಸ್ಥಾನ. ಈ ಸ್ಥಾನದಲ್ಲಿ ಯಥಾಖ್ಯಾತ ಚಾರಿತ್ರದಲ್ಲಿ ಸ್ವಲ್ಪ ನ್ಯೂನತೆ ಇರುತ್ತದೆ.

**೧೬. ಉಪಶಾಂತ ಮೋಹ ಗುಣಸ್ಥಾನವೆಂದರೇನು ?**

ಧ್ಯಾನಾಸಕ್ತರಾದ ಮಹಾಮುನಿಗಳ ಪರಿಣಾಮವು ನಿರ್ಮಲವಾಗಿದ್ದು ಮೋಹನೀಯ ಕರ್ಮವು ಉಪಶಾಂತಿ ಹೊಂದಿ ಕಡಿಮೆಯಾಗಲಾರಂಭಿಸುವುದು. ಇತರ ಕರ್ಮಗಳೂ ಕೂಡ ಉಪಶಮನವಾಗಿ ಅವುಗಳ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಅಂತಹ ಗುಣಶ್ರೇಣಿಯನ್ನು ಹೊಂದಿದ ಪರಿಣಾಮಕ್ಕೆ ಉಪಶಾಂತ ಮೋಹವೆಂಬ ಹನ್ನೊಂದನೆಯ ಗುಣಸ್ಥಾನವೆನ್ನುವರು.

**೧೭. ಕ್ಷೀಣಮೋಹ ಗುಣಸ್ಥಾನವೆಂದರೇನು ?**

ಯಾವ ನಿರ್ಗ್ರಂಥ ಮುನಿಗಳ ಚಿತ್ತವು, ಪರಿಣಾಮವೂ, ಧ್ಯಾನದ ಕ್ರಿಯೆಯೂ ಕರ್ಮವನ್ನು ಸುಟ್ಟುಹಾಕುವಷ್ಟು ಪ್ರಖರವಾಗಿರುವುದೋ ಆಗ ಅವರಲ್ಲಿದ್ದ ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯವೆಂಬ ಘಾತೀಯ ಕರ್ಮಗಳು ಕ್ಷೀಣಿಸಿ, ಕ್ಷಯಿಸಿ, ಭಸ್ಮವಾಗಿ ಸಂಪೂರ್ಣವಾಗಿ ಇಲ್ಲವಾಗುತ್ತವೆ. ಸ್ಫಟಿಕದ ಪಾತ್ರೆಯಲ್ಲಿಟ್ಟ ಶೋಧಿಸಿದ ನೀರಿನಂತೆ ಪರಿಶುದ್ಧವಾಗಿ ಆತ್ಮತತ್ತ್ವ ಪ್ರಕಟವಾಗುವುದೋ ಅಂತಹ ಶುದ್ಧನಿರ್ಮಲ ಅವಸ್ಥೆಗೆ ಕ್ಷೀಣಮೋಹವೆಂಬ ಹನ್ನೆರಡನೆಯ ಗುಣಸ್ಥಾನವೆನ್ನುವರು. ಅವರಿಗೆ ಶುದ್ಧಾತ್ಮ ದರ್ಶನವಾಗುವುದು.



**೧೮. ಸಯೋಗಕೇವಲಿ ಗುಣಸ್ಥಾನವೆಂದರೇನು ?**

ಮುನಿಗಳು ಧ್ಯಾನದಿಂದ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯವೆಂಬ ಘಾತೀಯ ಕರ್ಮಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ. ಆಗ ಮಹಾಮುನಿಗಳು ತಮ್ಮ ಪರಿಶುದ್ಧ ಪರಮಾತ್ಮನ ದರ್ಶನ ಮಾಡಿ ಅತ್ಯಂತ ಚಿದಾನಂದ ಸ್ವರೂಪದಲ್ಲಿರುವ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತಶಕ್ತಿಗಳೆಂಬ ಅನಂತ ಚತುಷ್ಟಯಗಳನ್ನು ಹೊಂದುತ್ತಾರೆ, ಯಾರು ಈ ಅನಂತ ಚತುಷ್ಟಯಗಳನ್ನು ಹಿಡಿದಿದ್ದ ಘಾತೀಯ ಕರ್ಮಗಳನ್ನು ಕ್ಷಯಿಸುವರೋ ಆಗ ಅವರು ಕೇವಲಿಗಳಾಗುವರು. ಅವರಿಗೆ ಇನ್ನೂ ಮನ, ವಚನ, ಕಾಯಗಳ ಕಾರ್ಯ ಇರುವುದರಿಂದ ಅವರು ಸಯೋಗಕೇವಲಿಗಳೆನಿಸುವರು. ವೀತರಾಗರೂ, ಸರ್ವಜ್ಞರೂ, ಹಿತೋಪದೇಶಿಗಳೂ ಆಗಿ ಪರಮಾತ್ಮ ಪದವಿಗೇರುವರು. ಅವರಿಗೆ ಲೋಕಾಲೋಕವನ್ನೆಲ್ಲಾ ಒಮ್ಮೆಲೇ ತಿಳಿಯುವ ಸರ್ವಜ್ಞತ್ವ ಪ್ರಾಪ್ತವಾಗಿರುತ್ತದೆ. ಪ್ರಬಲವಾದ ಕರ್ಮಶತ್ರುಗಳನ್ನು ಗೆದ್ದಿರುವುದರಿಂದ ಜಿನರೆಂದೂ, ಪೂಜಾರ್ಹರೂ ಅರಿ ಎಂದರೆ ಅಂತರಂಗ- ಬಹಿರಂಗ ಶತ್ರುಗಳನ್ನು ಹಂತ ಎಂದರೆ ನಾಶ ಮಾಡಿರುವುದರಿಂದ ಅರಿಹಂತರೆಂದೂ, ರಾಗ-ದ್ವೇಷಾದಿ ದೋಷಗಳಿಲ್ಲದ್ದರಿಂದ ವೀತರಾಗಿಗಳೆಂದೂ, ಭವ್ಯಾತ್ಮರಿಗೆ ಧರ್ಮೋಪದೇಶ ಮಾಡಿ ಮುಕ್ತಿ ಮಾರ್ಗವನ್ನು ತೋರುವುದರಿಂದ ಹಿತೋಪದೇಶಿಗಳೆಂದೂ ನಾಮಾಂಕಿತರಾಗುವರು. ಇವರು ಸಮವಸರಣದಲ್ಲಿದ್ದು ವಿಹರಿಸುತ್ತಾರೆ.

ಇದೇ ಹದಿಮೂರನೆಯ ಸಯೋಗಕೇವಲಿ ಗುಣಸ್ಥಾನ. ಅವರಿಗೆ ಮನ-ವಚನ-ಕಾಯಗಳಿದ್ದರೂ ರಾಗ-ದ್ವೇಷಾದಿಗಳಿಲ್ಲದ್ದರಿಂದ ಮತ್ತೆ ಕರ್ಮಬಂಧವಾಗುವುದಿಲ್ಲ. ಅವರಿಗಿನ್ನೂ ನಾಮ, ಗೋತ್ರ, ವೇದನೀಯ, ಆಯುಷ್ಯವೆಂಬ ಅಘಾತೀಯ ಕರ್ಮಗಳಿದ್ದರೂ ಅವು ಸುಟ್ಟ ದಾರದಂತಿರುತ್ತವೆ.

**೧೯. ಅಯೋಗಕೇವಲೀ ಗುಣಸ್ಥಾನವೆಂದರೇನು ?**

ಅರಹಂತರಾದ ಮೇಲೆ ಅಂದರೆ ಘಾತೀಯ ಕರ್ಮಗಳನ್ನು ಗೆದ್ದ ನಂತರ ಹೊಸ ಕರ್ಮಗಳು ಆತ್ಮನತ್ತ ಬರುವುದು ನಿಂತಮೇಲೆ ಇನ್ನೂ ಆಯುಷ್ಯ ನಾಮ, ಗೋತ್ರ, ವೇದನೀಯವೆಂಬ ನಾಲ್ಕು ಅಘಾತೀಯ ಕರ್ಮಗಳಿರುವುದರಿಂದ ಅವುಗಳನ್ನೂ ಕಳೆದುಕೊಳ್ಳಲು ನಿರ್ಜನ ಪ್ರದೇಶದಲ್ಲಿ ಕೆಲಕಾಲವಿದ್ದು ಶುದ್ಧ ನಿರ್ಮಲವಾದ ಪರಮ ಶುಕ್ಲ ಧ್ಯಾನವಾದ ವ್ಯುಪರತ

ಕ್ರಿಯಾ ನಿವೃತ್ತಿ ಎಂಬ ಶುದ್ಧಧ್ಯಾನದಲ್ಲಿ ತೊಡಗುತ್ತಾರೆ. ಆಗ ತಮ್ಮಲ್ಲಿದ್ದ ಅಘಾತೀಯ ಕರ್ಮಗಳು ನಾಶವಾಗುತ್ತವೆ. ಅವರಿಗೆ ಮನ, ವಚನ, ಕಾಯಗಳ ಕ್ರಿಯೆಗಳೂ ನಿಂತುಹೋಗುತ್ತವೆ. ಇಂತಹ ಅವಸ್ಥೆಗೆ ಹದಿನಾಲ್ಕನೇ ಅಯೋಗ ಕೇವಲೀ ಗುಣಸ್ಥಾನವೆನ್ನುವರು.

**೨೦. ಸಿದ್ಧಾವಸ್ಥೆ ಎಂದರೇನು ?**

ಆತ್ಮನಿಗೆ ಆವರಿಸಿದ್ದ ಘಾತೀಯ, ಅಘಾತೀಯ ಕರ್ಮಕ್ಷಯವಾದಾಗ ಆತ್ಮ ಪರಿಶುದ್ಧ ಅವಸ್ಥೆಯನ್ನು ಹೊಂದಿ ಅನಂತಜ್ಞಾನ, ದರ್ಶನ, ಸುಖ, ವೀರ್ಯ, ಅವ್ಯಾಬಾಧತ್ವ, ಅವಗಾಹನತ್ವ, ಸೂಕ್ಷ್ಮತ್ವ, ಅಗುರುಲಘುತ್ವ ಎಂಬ ಎಂಟು ಗುಣಗಳನ್ನು ಹೊಂದಿರುತ್ತಾರೆ. ಜೀವನ ಸ್ವಾಭಾವಿಕ ಲಕ್ಷಣ ವಾದ ಊರ್ಧ್ವಗಮನತ್ವ ಶಕ್ತಿಯಿಂದ ಲೋಕದ ತುತ್ತತುದಿಯಲ್ಲಿರುವ ಸಿದ್ಧ ಲೋಕದಲ್ಲಿ ಶಾಶ್ವತವಾಗಿ ನಿಲ್ಲುತ್ತಾರೆ. ಆಗ ಅವರು ನಿರ್ಮಲರೂ, ನಿರುಪ ಮರೂ, ನಿರ್ಲೇಪರೂ, ನಿರಂಜನರೂ, ನಿತ್ಯರೂ, ಸದಾ ಸುಖ-ಶಾಂತರೂ, ಮತ್ತೆ ಈ ಸಂಸಾರಕ್ಕೆ ಬಾರದೇ ಇರುವವರೂ ಆಗಿ ಸಿದ್ಧಾತ್ಮರೆನಿಸಿ ಇರುತ್ತಾರೆ. ಇವರಿಗೆ ಯಾವ ಗುಣಸ್ಥಾನವೂ ಇಲ್ಲ. ಯಾವ ಲೌಕಿಕ ಸುಖ-ದುಃಖಾದಿಗಳೂ ಇಲ್ಲ. ಅವರ ಆತ್ಮ ಕೃತಕೃತ್ಯವಾಯಿತು, ಪರಿಶುದ್ಧವಾಯಿತು, ಪೂಜ್ಯವಾಯಿತು.

ಇದೇ ಎಲ್ಲಾ ಆತ್ಮರೂ ಬಯಸುವ ಪದವಿ. ಆದರೆ ಅದನ್ನು ಪಡೆ ಯಲು ಪುರುಷಾರ್ಥ ಪ್ರಯತ್ನದಿಂದ ಆ ಮೋಕ್ಷಮಾರ್ಗದಲ್ಲಿ ಸಮ್ಯಗ್ ರೀತಿ ಯಲ್ಲಿ ಸಾಗಿ, ಬಿಡದೆ ಸಹನೆಯಿಂದ ಸಾಧಿಸಿ ಆ ಸಿದ್ಧಿಯನ್ನು ಪಡೆಯಬೇಕು.

**೨೧. ಗುಣಸ್ಥಾನದ ಅಪೇಕ್ಷೆಯಿಂದ ಯಾವ ಯಾವ ಗುಣಸ್ಥಾನದಲ್ಲಿ ಜೀವಿಗಳು ಎಷ್ಟೆಷ್ಟು ಪ್ರಮಾಣದಲ್ಲಿವೆ ?**

ಇಡೀ ಲೋಕದಲ್ಲಿ ಜೀವಗಳು ಈ ರೀತಿ ಇವೆ :

| | | |
|---|---|---|
| 1. ಮಿಥ್ಯಾದೃಷ್ಟಿ | .... | ಅನಂತವಾಗಿ ಇವೆ. |
| 2. ಸಾಸಾದನ | .... | ಅಸಂಖ್ಯಾತ ಇವೆ. |
| 3. ಮಿಶ್ರ | .... | ಅಸಂಖ್ಯಾತ ಇವೆ. |
| 4. ಅವಿರತಸಮ್ಯಗ್ದೃಷ್ಟಿ | .... | ಸಂಖ್ಯಾತ ಇವೆ. |
| 5. ಸಂಯತಾಸಂಯತ | .... | ಅಸಂಖ್ಯಾತ ಇವೆ. |
| 6. ಪ್ರಮತ್ತವಿರತ | .... | 593,98,206 |



| | | |
|---|---|---|
| 7. ಅಪ್ರಮತ್ತವಿರತ | .... | 296,99,103 |
| 8. ಅಪೂರ್ವಕರಣ | .... | 897 |
| 9. ಅನಿವೃತ್ತಿಕರಣ | .... | 897 |
| 10. ಸೂಕ್ಷ್ಮಸಾಂಪರಾಯ | .... | 897 |
| 11. ಉಪಶಾಂತಮೋಹ | .... | 299 |
| 12. ಕ್ಷೀಣ ಮೋಹ | .... | 598 |
| 13. ಸಯೋಗಕೇವಲಿ | .... | 898, 502 |
| 14. ಅಯೋಗಕೇವಲಿ | .... | 598 |
| ಸಿದ್ಧರು | .... | ಅನಂತಾನಂತ ಇವೆ. |
| ಜಗತ್ತಿನ ಸರ್ವಜೀವರಾಶಿ | .... | ಅನಂತಾನಂತ ಇವೆ. |

ಪ್ರಮತ್ತ-ವಿರತ ಎಂಬ 6ನೇ ಗುಣಸ್ಥಾನದಿಂದ ಅಯೋಗಕೇವಲಿಗಳ ವರೆಗೆ ಇರುವ ದಿಗಂಬರ ಮುನಿಗಳು ಒಟ್ಟು 3 ಕಡಿಮೆ 9 ಕೋಟಿ ಸಂಖ್ಯೆ ಯಲ್ಲಿದ್ದಾರೆ. ಈ ಸಂಖ್ಯೆ ಎರಡೂವರೆ ದ್ವೀಪದೊಳಗಿನ ಒಟ್ಟು ಮುನಿಗಳ ಸಂಖ್ಯೆಯಾಗಿದೆ.

★ ★ ★ ★ ★

**ನಂಬುವುದು ಏಳು ತತ್ತ್ವಮಂ ಅದು ಉತ್ತಮದೃಷ್ಟಿ, ತದರ್ಥಮಂ ನಯಾರ್ಥಂ**
**ಬರೆ, ನೋಡಿ ಭೇದಿಪುದು ಅದು ಉತ್ತಮ ಬೋಧಂ ಅಹಿಂಸೆಯಲ್ಲಿ ಮಾರ್ಗಂ**
**ಬಿಡದಿರ್ಪುದು ಉತ್ತಮ ಚರಿತ್ರಂ, ಇವಿಂತು ಮಣಿತ್ರಯಂ,**
**ತದೀಯ ಅಂಬುಧಿಯಾವುದು ? ಉತ್ತಮ ತಪಂಗಳಲಾ, ಅಪರಾಜಿತೇಶ್ವರಾ !**

**ಅರ್ಥ :-** ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷಗಳೆಂಬ ಸಪ್ತತತ್ತ್ವಗಳನ್ನು ಸಂಬುವುದೇ 'ಸಮ್ಯಗ್ದರ್ಶನ'ವೆನಿಸುತ್ತದೆ. ಈ ಸಪ್ತತತ್ತ್ವಗಳಲ್ಲಿ ಶ್ರದ್ಧೆಯಿಟ್ಟು, ಅವುಗಳ ಸರಿಯಾದ ಅರ್ಥವನ್ನು ಗ್ರಹಿಸಿ, ಮನನಮಾಡಿ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡಾಗ ಅದು 'ಸಮ್ಯಕ್ ಜ್ಞಾನ'ವಾಗುವುದು. ಅಹಿಂಸಾ ಮಾರ್ಗದಲ್ಲಿ ಬಾಳಿ, ಬದುಕುವುದೇ 'ಸಮ್ಯಕ್ ಚಾರಿತ್ರ'. ಇವುಗಳನ್ನೇ ರತ್ನತ್ರಯವೆಂದು ಕರೆಯುವರು. ಮೋಕ್ಷಮಾರ್ಗಕ್ಕೆ ಈ ರತ್ನತ್ರಯಗಳೇ ಸೋಪಾನವಿದ್ದಂತೆ. ಶ್ರೇಷ್ಠವಾದ ತಪಸ್ಸೇ ಈ ರತ್ನತ್ರ ಯಕ್ಕೆ (ರತ್ನಗಳಿಗೆ) ಸಮುದ್ರ. --ಅಪರಾಜಿತೇಶ್ವರ ಶತಕ.

# ೫೯ ಲೇಶ್ಯೆಗಳು

**೧. ಲೇಶ್ಯೆ ಎಂದರೇನು ?**

ಯಾರ ಮನ-ವಚನ-ಕಾಯಗಳ ಕ್ರಿಯೆಗಳು ಮತ್ತು ಭಾವನೆಯು, ವರ್ತನೆಯು, ವೃತ್ತಿಗಳು, ಆಚಾರ, ವಿಚಾರ, ವ್ಯವಹಾರಗಳು, ನಡೆ-ನುಡಿಗಳು, ಅಶುಭ-ಶುಭ, ದುಷ್ಟ-ಶಿಷ್ಟ, ಅಧಮ-ಉತ್ತಮ, ಕ್ರೂರ-ಮೃದು, ಅಧರ್ಮ-ಧರ್ಮ ರೂಪದಿಂದ ಕೂಡಿರುವುದೋ, ಅವುಗಳನ್ನು ಗುರ್ತಿಸಲು ಇರುವ ಸಂಕೇತಗಳು, ಚಿಹ್ನೆಗಳು, ಸ್ವರೂಪ, ಸ್ವಭಾವಗಳ ಸ್ಥಿತಿಯೇ ಲೇಶ್ಯಗಳು-ಅಂದರೆ ಮನಸ್ಸಿನಲ್ಲಿ, ವೃತ್ತಿಯಲ್ಲಿ ಕಂಡುಬರುವ ಪರಿಣಾಮಕ್ಕೆ ಲೇಶ್ಯೆ ಎನ್ನುತ್ತಾರೆ. ಎಲ್ಲಾ ಜೀವಿಗಳಲ್ಲೂ ಇವನ್ನು ಕಾಣಬಹುದು.

**೨. ಲೇಶ್ಯೆಗಳನ್ನು ಯಾವುದಕ್ಕೆ ಹೋಲಿಸಿದ್ದಾರೆ ?**

ಅವರವರ ಶುಭಾಶುಭ ಪರಿಣಾಮಗಳನ್ನು ತಿಳಿಸಲು ಕಪ್ಪು, ನೀಲಿ, ಬೂದು, ಹಳದಿ, ಕೆಂಪು, ಬಿಳುಪು ಎಂಬ ಆರು ಬಣ್ಣಗಳಿಗೆ ಹೋಲಿಸಿದ್ದಾರೆ. ಇವುಗಳಂತೆ ಕೆಲವರ ಭಾವನೆ, ವರ್ತನೆಗಳು ಅತಿ ಗಾಢವಾಗಿ, ಅಶುದ್ಧವಾಗಿ, ಒರಟಾಗಿರುತ್ತವೆ. ಕೆಲವು ಮೃದು, ಶುಭ, ಶುದ್ಧವಾಗಿರುತ್ತವೆ. ಇವೆಲ್ಲವೂ ಒಬ್ಬರಲ್ಲೇ ಕಂಡುಬರುವುದಿಲ್ಲ. ವಿವಿಧ ಪರಿಣಾಮದ ನಡೆ-ನುಡಿಯ, ಮನೋಭಾವದ ಜೀವಿಗಳನ್ನು ಗುರ್ತಿಸಲು ಇರುವ ಚಿಹ್ನೆಗಳೇ ಲೇಶ್ಯೆಗಳು.

**೩. ಲೇಶ್ಯೆಗಳು ಎಷ್ಟು ವಿಧ, ಅವು ಯಾವುವು ?**

ಲೇಶ್ಯೆಗಳು ಆರು, ಅವು ಕೆಳಗಿಂತಿವೆ :-

1. ಕೃಷ್ಣ ಲೇಶ್ಯೆ (ಕಪ್ಪು) -- ಕ್ರೂರ ಸ್ವಭಾವ.
2. ನೀಲ ಲೇಶ್ಯೆ (ನೀಲಿ) -- ಒರಟು ಸ್ವಭಾವ.
3. ಕಾಪೋತ ಲೇಶ್ಯೆ (ಬೂದು) -- ಅವಿನಯ ಸ್ವಭಾವ.
4. ಪೀತ ಲೇಶ್ಯೆ (ಹಳದಿ) -- ಮೃದು ಸ್ವಭಾವ.
5. ಪದ್ಮ ಲೇಶ್ಯೆ (ಕೆಂಪು) -- ಉತ್ತಮ ಗುಣ.
6. ಶುಕ್ಲ ಲೇಶ್ಯೆ (ಬಿಳುಪು) -- ಶುದ್ಧ ಸ್ವಭಾವ.

**೪. ಇವುಗಳಲ್ಲಿ ಶುಭಾಶುಭ ಲೇಶ್ಯೆಗಳಾವುವು ?**



ಆರು ಲೇಶ್ಯೆಗಳ ದೃಷ್ಟಾಂತ

ಇವುಗಳಲ್ಲಿ ಮೊದಲ ಮೂರು ಅಂದರೆ ಕೃಷ್ಣ, ನೀಲ, ಕಾಪೋತ ಲೇಶ್ಯೆಗಳು ಅಶುಭವೂ, ಮಿಕ್ಕ ಮೂರು ಅಂದರೆ ಪೀತ, ಪದ್ಮ, ಲೇಶ್ಯೆಗಳು ಶುಭವೂ, ಶುಕ್ಲವು, ಶುದ್ಧ ಸ್ವಭಾವವೂ ಆಗಿವೆ. ಇವುಗಳಲ್ಲಿಯೂ ಕ್ರಮವಾಗಿ ಶುಭಾಶುಭ ಲೇಶ್ಯೆಗಳಲ್ಲಿ ಕನಿಷ್ಠ, ಮಧ್ಯಮ, ಉತ್ತಮ ದರ್ಜೆಯ ಪರಿಣಾಮಗಳಾಗಿವೆ.

**೫. ಈ ಪರಿಣಾಮವನ್ನು ತಿಳಿಸುವ ಒಂದು ದೃಷ್ಟಾಂತ ಯಾವುದು ?**

ಆರು ಜನ ಸ್ನೇಹಿತರು ಎಲ್ಲಿಗೋ ವಿಹಾರ ಹೊರಟಿದ್ದರು. ಅವರ ಸ್ವಭಾವವೂ ವಿವಿಧವಾಗಿದ್ದವು. ಅವರು ದಾರಿಯಲ್ಲಿ ಒಂದು ನೇರಳೇ ಮರವನ್ನು ಕಂಡರು. ಎಲ್ಲರೂ ಅದರ ಹಣ್ಣನ್ನು ತಿನ್ನಲು ಬಯಸಿದರು. ಅವರಲ್ಲಿ ಒಬ್ಬನು ಕೆಳಗೆ ಬಿದ್ದ ಹಣ್ಣನ್ನು ಮಾತ್ರ ಆರಿಸಿ ತಿಂದನು. ಎರಡನೆಯವನು ಮರದಲ್ಲಿ ಕೈಗೆ ಎಟಕುವ ಹಣ್ಣನ್ನು ಕಿತ್ತು ತಿಂದನು. ಮೂರನೆಯವನು ಮೇಲೇರಿ ಹಣ್ಣಿನ ಗೊಂಚಲನ್ನು ಕಿತ್ತು ಅದರಲ್ಲಿ ಹಣ್ಣಾಗಿದ್ದುವನ್ನು ತಿಂದು ಕಾಯಿಯನ್ನು ಬಿಸಾಡಿದನು. ನಾಲ್ಕನೆಯವನು ದೊಡ್ಡ ದೊಡ್ಡ ರೆಂಬೆಗಳನ್ನು ಮುರಿದು ಹಣ್ಣು ತಿಂದನು. ಐದನೆಯವನು ದೊಡ್ಡ ದೊಡ್ಡ ಕೊಂಬೆಗಳನ್ನು ಮುರಿದು ಹಣ್ಣು ತಿಂದನು. ಆರನೆಯವನು ತನಗೆ ಬೇಕಾಗಿದ್ದ ಕೆಲವೆರಡು ಹಣ್ಣುಗಳಿಗಾಗಿ ಆ ಮರದ ಬುಡವನ್ನೇ ಕತ್ತರಿಸಿ ಉರುಳಿಸಿ ಹಣ್ಣು ತಿಂದನು.

ಹೀಗೆ ಅವರವರ ಸ್ವಭಾವಕ್ಕನುಸಾರವಾಗಿ ಕೃತ್ಯವೆಸಗಿದರು. ಕ್ರಮವಾಗಿ ಅವರ ಪರಿಣಾಮಗಳು ಶುಕ್ಲ, ಪದ್ಮ, ಪೀತ, ಕಾಪೋತ, ನೀಲ, ಕೃಷ್ಣಲೇಶ್ಯೆಗಳಿಂದ ಕೂಡಿದ್ದವು, ಅವಕ್ಕೆ ತಕ್ಕಂತೆ ಅವರು ನಡೆದುಕೊಂಡರು.

**೬. ಕೃಷ್ಣಲೇಶ್ಯೆ ಎಂದರೇನು ?**

ಯಾರು ಆರ್ತ-ರೌದ್ರಧ್ಯಾನಗಳೆಂಬ ಅಶುಭ ಭಾವನೆಯಿಂದ ಕೂಡಿ ಯಾವಾಗಲೂ ಕೋಪ-ತಾಪ, ಮದ-ಮತ್ಸರ, ಕ್ರೂರ-ಒರಟು-ಕಟುಕ ಸ್ವಭಾವದವನಾಗಿರುತ್ತಾನೋ, ತನ್ನ ಸ್ವಾರ್ಥಕ್ಕಾಗಿ ಸರ್ವನಾಶ ಮಾಡುವ ಮನೋಭಾವ ಉಳ್ಳವನಾಗಿರುತ್ತಾನೋ, ಯಾರು ನಿರ್ದಯನೂ, ಹಿಂಸಕನೂ, ಪಂಚಪಾಪ ಕ್ರಿಯಾನಿರತನೂ ಆಗಿರುತ್ತಾನೋ, ಸದಾ ಅಶಾಂತಿ, ಕ್ರಾಂತಿಕಾರಿ ಪರಿಣಾಮದಿಂದ ಕೂಡಿರುತ್ತಾನೋ, ಯಾರು ಸಮಾಜ ಘಾತುಕನಾಗಿ ಅಧರ್ಮದಿಂದ ಕೂಡಿ ಧರ್ಮ ಕಂಟಕನಾಗಿರುತ್ತಾನೋ, ಯಾರು ಮಿಥ್ಯಾ ದೃಷ್ಟಿಯಾಗಿರುತ್ತಾನೋ ಅಂತಹವನು ಕೃಷ್ಣಲೇಶ್ಯೆಯವನಾಗಿರುತ್ತಾನೆ. ಹಣ್ಣು

ತಿನ್ನಲು ಇಡೀ ಮರವನ್ನೇ ಕತ್ತರಿಸುವಂತಹ ಪರಿಣಾಮದವನು. ಇವನ ಮನೋಭಾವನೆ, ವೃತ್ತಿ, ಆಚಾರ, ವಿಚಾರಗಳು ದುಷ್ಟವೂ, ಕಷ್ಟಕರವೂ ಆಗಿದ್ದು, ಗಾಢಾಂಧಕಾರದ ಕರ್ರನೆಯ ವರ್ಣದಂತೆ ಅಜ್ಞಾನಮಯವಾಗಿರುತ್ತದೆ. ಇದರಿಂದ ತನಗೂ ಇತರರಿಗೂ ಕೇಡಾಗುತ್ತದೆ. ಇಂತಹವನು ಸರ್ವಘಾತುಕನಾಗಿ, ಮಹಾಪಾಪಿಯಾಗಿ ಸತ್ತು ನರಕದಲ್ಲಿ ಜನಿಸಿ, ದುಃಖಿಯಾಗುತ್ತಾನೆ. ಇದೇ ಕೃಷ್ಣಲೇಶ್ಯೆಯ ಗುಣ.

೭. ನೀಲ ಲೇಶ್ಯೆ ಎಂದರೇನು ?

ಯಾರು ಮಾನಕಷಾಯದಿಂದ ಕೂಡಿ ಗರ್ವದಿಂದ ಬೀಗಿ ಮೆರೆಯುತ್ತಾರೋ, ಸದಾ ಆಲಸ್ಯದಿಂದ ಸೋಮಾರಿಯಾಗಿ ಮಂದಬುದ್ಧಿಯುಳ್ಳವರಾಗಿರುತ್ತಾರೋ, ವ್ಯಭಿಚಾರಿ, ಮಾಯಾಚಾರಿಯಾಗಿ, ಸಮಾಜಘಾತುಕನಾಗಿರುತ್ತಾನೋ, ಹಿತಾಹಿತ ವಿಚಾರ ಮಾಡದೆ ಸದಾ ಅಶುಭ ಭಾವನೆಯಿಂದಿರುತ್ತಾನೋ, ಮಾಯಕಷಾಯದಿಂದ ಇತರರನ್ನು ವಂಚಿಸುತ್ತಾ ಜೀವಿಸುತ್ತಾನೋ, ಕಷ್ಟಪಟ್ಟು ದುಡಿಯದೆ ಕಪಟತನದಿಂದ ಸದಾ ಪರಾವಲಂಬಿಯಾಗಿ ಬಾಳುತ್ತಾನೋ, ಇಂತಹ ಅಶುಭ ಪರಿಣಾಮಿಯ ವೃತ್ತಿಗೆ ನೀಲಲೇಶ್ಯೆ ಎನ್ನುತ್ತಾರೆ. ಇವನು ತನ್ನ ಸ್ವಾರ್ಥಕ್ಕಾಗಿ ಮರದ ದೊಡ್ಡ ಕೊಂಬೆಗಳನ್ನು ಕಡಿದು, ಹಣ್ಣು ತಿನ್ನುವ ಮನೋಭಾವದವನಾಗಿರುತ್ತಾನೆ. ಇವರ ಭಾವನೆ ನೀಲೀ ಬಣ್ಣದಂತೆ ಮೋಡ ಮುಸುಗಿದ ಸಂಜೆಯಂತೆ ಇರುತ್ತದೆ. ಇವನೂ ಆರ್ತಧ್ಯಾನದಿಂದ ಇರುತ್ತಾನೆ. ತನ್ನ ಮಾಯಾಚಾರದಿಂದ ಸತ್ತು ಏಕೇಂದ್ರಿಯ ಸ್ಥಾವರ ಜೀವಿಯಾಗಿ ಹುಟ್ಟಿ, ಬಹುಕಾಲ ದುಃಖವನ್ನು ಅನುಭವಿಸಬೇಕಾಗುತ್ತದೆ. ಇವನೂ ಮಿಥ್ಯಾದೃಷ್ಟಿಯೇ ಆಗಿರುತ್ತಾನೆ.

೮. ನೀಲಲೇಶ್ಯೆಯ ವಿಧಗಳಾವುವು ?

ಈ ಲೇಶ್ಯೆಯಲ್ಲಿ ಎರಡು ವಿಧಗಳಿವೆ :-

1. ದ್ರವ್ಯಲೇಶ್ಯೆ 2. ಭಾವಲೇಶ್ಯೆ.

ಶರೀರ ನಾಮಕರ್ಮದ ಉದಯದಿಂದ ಉತ್ಪನ್ನವಾಗುವ ಲೇಶ್ಯವೇ ದ್ರವ್ಯಲೇಶ್ಯವಿದೆ. ಮೋಹನೀಯ ಕರ್ಮದ ಉದಯದಿಂದ ಉಂಟಾಗುವ ಪರಿಣಾಮವೇ ಭಾವಲೇಶ್ಯವಿದೆ. ದ್ರವ್ಯ ಲೇಶ್ಯಾಗಳೇ ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ, ಶುಕ್ಲ ಲೇಶ್ಯಗಳು.



೯. ಕಾಪೋತಲೇಶ್ಯೆ ಎಂದರೇನು ?

ಯಾರು ಸದಾ ಲೋಭ ಕಷಾಯದಿಂದ ಕೂಡಿ ಅತ್ಯಾಸೆ-ಜಿಪುಣತನದಿಂದ ಇರುತ್ತಾನೋ, ಸದಾ ಅತೃಪ್ತಿ, ಅಶಾಂತಿ, ಅಸಹನೆಯಿಂದ ಕೊರಗುತ್ತಿರುತ್ತಾನೋ, ಹೇಡಿಯಂತೆ ಅಂಜುಬುರುಕನಾಗಿರುತ್ತಾನೋ, ಪರರ ನಿಂದೆ, ಸ್ವಪ್ರತಿಷ್ಠೆಯಿಂದ, ಉತ್ತರನಂತೆ ವ್ಯರ್ಥ ಪೌರುಷ ತೋರುತ್ತಾನೋ, ಪರರ ಏಳಿಗೆಯನ್ನು ಸಹಿಸದೆ ಮನಸ್ಸಿನಲ್ಲೇ ಕರುಬುತ್ತಾನೋ, ಅವನ ಇಂತಹ ಅಶುಭ ಪರಿಣಾಮಕ್ಕೆ ಕಾಪೋತಲೇಶ್ಯೆ ಎನ್ನುತ್ತಾರೆ. ಇವನು ತನ್ನ ಸ್ವಾರ್ಥಕ್ಕಾಗಿ ಮರದ ರೆಂಬೆಗಳನ್ನು ಕಿತ್ತು ಕೆಲವೆರಡು ಹಣ್ಣನ್ನು ತಿನ್ನುವಂತಹ ಸ್ವಭಾವದವನಾಗಿರುತ್ತಾನೆ. ಇವನ ಪರಿಣಾಮವು ಕಾಪೋತ ಅಂದರೆ ಬೂದು ಬಣ್ಣದಂತೆ ಮಾಸಲು ಮಾಸಲಾಗಿರುತ್ತದೆ. ಇಂತಹವನು ಸತ್ತು ದ್ವೀಂದ್ರಿಯಾದಿ ನೀಚಗತಿಗಳಲ್ಲಿ ಹುಟ್ಟುತ್ತಾನೆ.

ಹೀಗೆ ಮೇಲ್ಕಂಡ ಮೂರೂ ಲೇಶ್ಯೆಯವರು ಅಶುಭ ಪರಿಣಾಮದವರು-ಮಿಥ್ಯಾದೃಷ್ಟಿಗಳು. ಇವರಿಗೆ ಧರ್ಮ - ಕರ್ಮ, ಪಾಪ - ಪುಣ್ಯಗಳ ಪರಿವೆಯೇ ಇರುವುದಿಲ್ಲ. ಇವರು ಬಹಿರಾತ್ಮರಾಗಿರುತ್ತಾರೆ.

೧೦. ಪೀತಲೇಶ್ಯೆ ಎಂದರೇನು ?

ಯಾರು ದಯಾವಂತನೂ, ವಿವೇಕಿಯೂ, ಮಂದಕಷಾಯಿಯೂ ಆಗಿರುತ್ತಾನೋ, ಯಾರು ದೈವಭಕ್ತನೂ, ಹಿತಾಹಿತ ಕಾರ್ಯಗಳ ವಿಚಾರಪರನೂ, ಶುಭ ಕಾರ್ಯಾಸಕ್ತನೂ, ಧಾರ್ಮಿಕನೂ, ಅಹಿಂಸಾದಿ ವ್ರತಯುತನೂ, ಸಮ್ಯಗ್ದೃಷ್ಟಿಯಾದವನೂ, ಲಾಭಾಲಾಭ, ಹರ್ಷವಿಷಾದಗಳಲ್ಲಿ ಸಮಭಾವ ಉಳ್ಳವನೂ ಆಗಿರುತ್ತಾನೋ ಇಂತಹ ಪರಿಣಾಮಿಗೆ ಪೀತಲೇಶ್ಯೆ ಸ್ವಭಾವದವನೆಂದೂ ಇದಕ್ಕೆ ಪೀತಲೇಶ್ಯೆ ಎಂದೂ ಹೇಳುವರು.

ಇಂತಹ ಪರಿಣಾಮಿಯು ಮರ ಹತ್ತಿ ಹಣ್ಣಿನ ಗೊಂಚಲನ್ನು ಕಿತ್ತು ತಿನ್ನುವಂತಹ ಸ್ವಭಾವದವನು. ತನ್ನ ಸ್ವಾರ್ಥಕ್ಕಾಗಿ ಸರ್ವನಾಶ ಮಾಡುವ ಬುದ್ಧಿ ಇರುವುದಿಲ್ಲ. ಇವನ ಈ ಸ್ವಭಾವವು ಹಳದಿ ಬಣ್ಣದಂತೆ ಉತ್ತಮವಾಗಿರುತ್ತದೆ. ಈತನು ಅಂತರಾತ್ಮನೆನಿಸಿ ಸದ್ಗತಿಯನ್ನು ಪಡೆಯುತ್ತಾನೆ. ಇದು ಶುಭಲೇಶ್ಯೆಯಾಗಿರುತ್ತದೆ.

೧೧. ಪದ್ಮಲೇಶ್ಯೆ ಎಂದರೇನು ?

ಯಾರು ಜಿನದೇವ, ಗುರು, ಶಾಸ್ತ್ರಗಳನ್ನು ಪೂರ್ಣವಾಗಿ ನಂಬಿ, ಸಮ್ಯಗ್ದೃಷ್ಟಿಯಾಗಿ ಸಕಲ ಪಾಪ ಕಾರ್ಯಗಳನ್ನು ತ್ಯಜಿಸಿ, ಸರಳ-ಸಾತ್ವಿಕ ವೃತ್ತಿಯಿಂದ ಸಭ್ಯನೂ, ಪ್ರಾಮಾಣಿಕನೂ ಆಗಿ, ಧರ್ಮಮಯ ಜೀವನ ನಡೆಸುತ್ತಾನೋ, ಯಾರ ಅಂತಃಕರಣವು ಕೋಮಲವೂ, ಮೃದುಮಧುರವಾದ ಮಾತನಾಡುತ್ತಾ, ಉತ್ತಮವಾದ ಕಾರ್ಯ ತತ್ಪರನಾಗಿರುವನೋ, ದೇವ ಪೂಜಾದಿ ಷಟ್‌ಕ್ರಿಯಾ ಸಹಿತನಾಗಿ ತನ್ನ ಕರ್ತವ್ಯವನ್ನು ಪಾಲಿಸುತ್ತಾನೋ, ಕ್ರಮೇಣ ಸಂಸಾರ ಶರೀರ ಭೋಗಗಳಿಂದ ವೈರಾಗ್ಯ ಹೊಂದಿ, ತನ್ನ ಶಕ್ತಿಗನುಸಾರ ದೀಕ್ಷಾಧಾರಿಯಾಗಿ ಜ್ಞಾನ, ಧ್ಯಾನ, ತಪೋನಿರತನಾಗುತ್ತಾನೋ, ಸದಾ ವೀತರಾಗ ಭಾವದಿಂದ ಪ್ರಸನ್ನ ಚಿತ್ತನಾಗಿರುತ್ತಾನೋ, ಇಂತಹವರ ಪರಿಣಾಮಕ್ಕೆ ಪದ್ಮಲೇಶ್ಯೆ ಎನ್ನುತ್ತಾರೆ. ಇಂತಹವನು ಮರಕ್ಕೆ ಹತ್ತದೆ ಕೈಗೆ ಎಟುಕಿದ ಹಣ್ಣನ್ನು ಮಾತ್ರ ತಿಂದು ತೃಪ್ತನಾಗುತ್ತಾನೆ. ತಾವರೆ ಹೂವಿನಂತಹ ತಿಳಿ ಕೆಂಪಿನಂತೆ ಇವನ ಸ್ವಭಾವವಿರುತ್ತದೆ, ಇಂತಹವರು ಸತ್ಪರಿಣಾಮದಿಂದ ಸತ್ತು ಸ್ವರ್ಗದಲ್ಲಿ ಹುಟ್ಟುತ್ತಾರೆ. ಇವರೂ ಅಂತರಾತ್ಮರೆನಿಸುತ್ತಾರೆ.

## ೧೨. ಶುಕ್ಲಲೇಶ್ಯೆ ಎಂದರೇನು ?

ಶುಕ್ಲವೆಂದರೆ ಪರಿಶುದ್ಧವಾದ, ಶುಭ್ರವಾದ, ಕೊಳೆಯಿಲ್ಲದ, ನಿರ್ಮಲವಾದ, ಸ್ಪಟಿಕದಂತೆ ಬಿಳಿಯದಾದ, ಹಾಲಿನಂತಹ, ತಿಳಿಯಾದ, ಸ್ವಲ್ಪವೂ ಕಲಂಕವಿಲ್ಲದ ಮನೋಭಾವವುಳ್ಳದ್ದು ಎಂದರ್ಥ. ಯಾರು ರಾಗ-ದ್ವೇಷದಿಂದ ಮುಕ್ತರಾಗಿ ಕಷಾಯ ರಹಿತರಾಗಿ, ಆತ್ಮಧ್ಯಾನದಲ್ಲಿ ತಲ್ಲೀನರಾಗಿ ಶುದ್ಧ ಪರಿಣಾಮಿಗಳಾಗಿರುತ್ತಾರೋ, ಇಂತಹವರು ಮಹಾಮುನಿವರ್ಯರಾಗಿ, ದೇಹದ ಮಮಕಾರವನ್ನು ತೊರೆದು, ಶುಕ್ಲಧ್ಯಾನಾಸಕ್ತರಾಗಿ ಕರ್ಮಗಳನ್ನು ಜಯಿಸುವಂಥ ಶುದ್ಧ ಪರಿಣಾಮಿಗಳಾಗಿರುತ್ತಾರೆ. ಇವರಿಗೆ ಕಾಲಲಬ್ಧಿ ಒದಗಿದರೆ ಅದೇ ಭವದಲ್ಲಿ ಕರ್ಮಕ್ಷಯ ಮಾಡಿ ಮುಕ್ತಿ ಹೊಂದುತ್ತಾರೆ. ಇಂತಹವರೇ ಮರದಿಂದ ಬಿದ್ದ ಶುಭ್ರವಾದ ಕೆಲವೆರಡು ಹಣ್ಣುಗಳನ್ನು ತಿಂದು ತೃಪ್ತರಾಗುವಂತಹ ಸ್ವಭಾವದವರು, ಭದ್ರಪರಿಣಾಮಿಗಳು, ಶುದ್ಧ ಸಮ್ಯಗ್ದೃಷ್ಟಿಗಳು, ಮೋಕ್ಷಗಾಮಿಗಳು, ಸಿದ್ಧಪರಮೇಷ್ಠಿಗಳಾಗುವವರು. ಪೂರ್ಣ ಕರ್ಮಕ್ಷಯವಾಗದಿದ್ದರೆ, ಉತ್ತಮವಾದ ಅಹಮಿಂದ್ರ ಪದವಿ ಹೊಂದಿ ಸ್ವರ್ಗಸುಖವನ್ನು ನಿರ್ಲಿಪ್ತರಾಗಿ ಅನುಭವಿಸಿ, ಮುಂದಿನ ಭವದಲ್ಲಿ ಮುಕ್ತರಾಗುತ್ತಾರೆ.



# ೬೦ ಸ್ಯಾದ್ವಾದ

## ೧. ಸ್ಯಾದ್ವಾದ ಎಂದರೇನು ?

ಸ್ಯಾದ್ವಾದವೆಂಬುದು ಜೈನ ನ್ಯಾಯ. ಇದರಿಂದ ಯಾವುದೇ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಬಹುದು. ಇದನ್ನೇ ಅನೇಕಾಂತವಾದ, ಸಪ್ತಭಂಗೀ ನ್ಯಾಯ, ಅಪೇಕ್ಷಾವಾದ, ಕಥಂಚಿದ್ವಾದ ಅನೇಕಾಂತ ಧರ್ಮಗುಣವನ್ನುಳ್ಳ ವಸ್ತುಸ್ವರೂಪವನ್ನು ತಿಳಿಸುವುದಕ್ಕೆ ಸ್ಯಾದ್ವಾದವೆನ್ನುವರು.

## ೨. ಅನೇಕಾಂತವಾದವೆಂದರೇನು ?

ವಸ್ತುಸ್ವರೂಪವೂ, ವಿಚಾರಗಳೂ, ತತ್ತ್ವಗಳೂ ಒಂದೇ ವಿಚಾರದಿಂದಾಗಲೀ, ಏಕಾಂತವಾದವಾಗಲೀ ಇರುವುದಿಲ್ಲ. ''ತತ್'' ಆಗಿರುವುದು ಇನ್ನೊಂದು ದೃಷ್ಟಿಯಿಂದ ಅಪೇಕ್ಷೆಯಿಂದ 'ಅತತ್' ಕೂಡಾ ಆಗಿರುತ್ತದೆ. ಸತ್ ಆಗಿರುವುದು ಅಸತ್ ಕೂಡಾ ಆಗಿರುತ್ತದೆ. ನಿತ್ಯವೂ-ಅನಿತ್ಯವೂ ಆಗಿರುತ್ತದೆ. ಹೀಗೆ ಪರಸ್ಪರ ವಿರುದ್ಧ ಶಕ್ತಿಗಳನ್ನು, ವಿಚಾರಗಳನ್ನು, ಧರ್ಮಗಳನ್ನು, ಗುಣಗಳನ್ನು ವಸ್ತುವಿನ-ವಸ್ತುತ್ವದ ನಿಜವನ್ನು ತಿಳಿಸುವ ವಿಧಾನವೇ ಅನೇಕಾಂತವಾಗಿದೆ.

## ೩. ಸ್ಯಾದ್ವಾದ ಶಬ್ದದ ವಿವರವೇನು ?

ಸ್ಯಾದ್ವಾದದಲ್ಲಿ ಸ್ಯಾತ್+ವಾದ ಎಂಬ ಎರಡು ಶಬ್ದಗಳಿವೆ.

''ಸ್ಯಾತ್''ಎಂದರೆ ದ್ರವ್ಯ ವಸ್ತುಗಳಲ್ಲಿ ಇರುವ ಅನೇಕ ಗುಣಧರ್ಮಗಳ ದೃಷ್ಟಿಯಲ್ಲಿಟ್ಟುಕೊಂಡು ಕೆಲವನ್ನು ಗೌಣವಾಗಿ ಮತ್ತೆ ಕೆಲವನ್ನು ವಿಶೇಷವಾಗಿ ಒಂದು ಗುಣಕ್ಕೆ , ವಸ್ತುತ್ತ್ವಕ್ಕೆ ಪ್ರಾಮುಖ್ಯತೆ ಕೊಟ್ಟು ಪ್ರತಿಪಾದಿಸುವ ಮತ್ತು ಏಕಾಂತವಾದವನ್ನು ನಿರಾಕರಿಸಿ, ಅನೇಕಾಂತವನ್ನು ಹೇಳಲಾಗುವ, ಮುಖ್ಯವಾಗಿ ಅಥವಾ ಗೌಣ ರೂಪವಾಗಿ ಹೇಳುವ ಒಂದು ಅಪೇಕ್ಷೆಯಿಂದ, ಬಹುಶಃ ಒಂದು ದೃಷ್ಟಿ ಎಂದು ತಿಳಿಸುವ ಶಬ್ದಸೂಚಕವೇ ಸ್ಯಾತ್ ಆಗಿದೆ. 'ವಾದ'ವೆಂದರೆ ಅನೇಕ ದೃಷ್ಟಿಕೋನಗಳಿಂದ ವಸ್ತುಸ್ವರೂಪವನ್ನೂ, ವಿಚಾರವನ್ನೂ ನಿರ್ಣಯಿಸಲು ಬಳಸುವ ಶಬ್ದ. ಹೀಗೆ ಸ್ಯಾದ್ವಾದವು ಅಪೇಕ್ಷಾವಾದವೆನಿಸಿದೆ-ದೃಷ್ಟಿವಾದವೆನಿಸಿದೆ.

**೪. ಸ್ಯಾದ್ವಾದವನ್ನು ಪ್ರತಿಪಾದಿಸಲು ಬಳಸುವ ವಿಧಾನಗಳಾವುವು ?**

ಸ್ಯಾದ್ವಾದವನ್ನು ಪ್ರತಿಪಾದಿಸಲು ಏಳು ವಿಧವಾದ ಸೂತ್ರಗಳನ್ನು ಬಳಸುತ್ತಾರೆ. ಇವೇ ಸಪ್ತಭಂಗಿಗಳು. ಭಂಗಿ ಅಥವಾ ಭಂಗವೆಂದರೆ ವಿಭಾಗ ವೆಂದರ್ಥ. ಅವು ಯಾವುವೆಂದರೆ-

೧. ಸ್ಯಾದಸ್ತಿ, ೨. ಸ್ಯಾನ್ನಾಸ್ತಿ, ೩. ಸ್ಯಾದಸ್ತಿ-ನಾಸ್ತಿ, ೪. ಸ್ಯಾದವಕ್ತವ್ಯಂ, ೫. ಸ್ಯಾದಸ್ತಿ ಅವಕ್ತವ್ಯಂ, ೬. ಸ್ಯಾನ್ನಾಸ್ತಿ ಅವಕ್ತವ್ಯಂ, ೭. ಸ್ಯಾದಸ್ತಿ-ನಾಸ್ತಿ ಅವಕ್ತವ್ಯಂ.

**೫. ಸ್ಯಾದ್ವಾದಕ್ಕೆ ಸಹಕಾರಿಯಾಗಿರುವ ಸಾಧನಗಳಾವುವು ?**

ಸ್ಯಾದ್ವಾದಕ್ಕೆ ಬಳಸಲಾಗುವ ಕೆಲವು ಸಹಕಾರಿ ಸಾಧನಗಳಿವೆ ಅವು ಗಳೆಂದರೆ :-

೧. ಸ್ವದ್ರವ್ಯ ೨. ಸ್ವಕ್ಷೇತ್ರ, ೩. ಸ್ವಕಾಲ, ೪. ಸ್ವಭಾವ, ೫. ಪರದ್ರವ್ಯ, ೬. ಪರಕ್ಷೇತ್ರ, ೭. ಪರಕಾಲ, ೮. ಪರಭಾವ.

ಸ್ಯಾದ್ವಾದದ ಸಹಕಾರೀ ಸಾಧನಗಳ ಸಹಾಯದಿಂದ ಸ್ಯಾದ್ವಾದವನ್ನು ನಿರೂಪಿಸಬಹುದು.

---

**೬. ಸ್ಯಾದ್ವಾದವನ್ನು ತಿಳಿಸಲು ಒಂದು ದೃಷ್ಟಾಂತವನ್ನು ತಿಳಿಸಿ.**



ಆರು ಮಂದಿ ಅಂಧರು ಒಂದು ಮಂಟಪದಲ್ಲಿದ್ದರು. ಆ ಮಂಟಪದ ಪಕ್ಕದಲ್ಲಿದ್ದ ಮರದ ಕೆಳಗೆ ಒಂದು ಆನೆಯನ್ನು ಕಟ್ಟಿಹಾಕಿದ್ದರು, ಅದನ್ನು ಎಷ್ಟೋ ಜನರು ನೋಡಿಕೊಂಡು ಹೋದರು. ಅಲ್ಲಿದ್ದ ಅಂಧರೂ ಬಂದು



ಆನೆಯ ಸುತ್ತಾ ನಿಂತು, ಅದನ್ನು ಮುಟ್ಟಿ ನೋಡಿದರು. ಅವರಿಗೆ ಆನೆಯ ವಿಷಯ ಭಾಗಶಃ ತಿಳಿಯಿತು. ಅವರು ತಾವು ಆನೆಯನ್ನು ನೋಡಿ ತಿಳಿದ ಬಗ್ಗೆ ಹೇಳತೊಡಗಿದರು. ಒಬ್ಬ ಹೇಳಿದ ಆನೆ ಗೋಡೆ ಇದ್ದಂತೆ ಇದೆ ಎಂದು. ಅದನ್ನು ವಿರೋಧಿಸಿ, ಇನ್ನೊಬ್ಬ ಇಲ್ಲ ಆನೆ ಕಂಬ ಇದ್ದಂತೆ ಇದೆ ಎಂದನು. ಇನ್ನೊಬ್ಬ ಆನೆ ಹಾವು ಇದ್ದಂತೆ ಇದೆ ಎಂದನು. ಮತ್ತೊಬ್ಬನು ಆನೆ ಮೊರ ಇದ್ದಂತೆ ಇದೆ ಎಂದನು. ಅದನ್ನು ವಿರೋಧಿಸಿ ಇನ್ನೊಬ್ಬನು ಆನೆ ಪೊರಕೆ ಇದ್ದಂತೆ ಇದೆ ಎಂದನು. ಕೊನೆಯವನು ಇಲ್ಲ ಇಲ್ಲ ಆನೆ ಭರ್ಜಿ ಇದ್ದಂತೆ ಇದೆ ಎಂದನು. ಹೀಗೆ ತಾವು ನೋಡಿದ ತಿಳಿದ ವಿಷಯವನ್ನು ಸಮರ್ಥಿಸುತ್ತಾ ತಮ್ಮ ವಾದವೇ ಸರಿ ಎಂದು ಜಗಳವಾಡಲಾರಂಭಿಸಿದರು. ಅದೇ ಸಮಯಕ್ಕೆ ಓರ್ವ ಕಣ್ಣಿದ್ದ ಬುದ್ಧಿವಂತ ವ್ಯಕ್ತಿಯು ಅಲ್ಲಿಗೆ ಬಂದನು. ಅವರ ಜಗಳದ ಕಾರಣವನ್ನು ಕೇಳಿ, ತಿಳಿದು ಅವನು ಹೇಳಿದ- ''ಅಣ್ಣಂದಿರಾ ನೀವು ಆನೆಯ ಒಂದೊಂದು ಭಾಗವನ್ನು ಮಾತ್ರ ಮುಟ್ಟಿ ನೋಡಿ ಹೇಳುತ್ತಿದ್ದೀರಿ. ಹೇಗೆಂದರೆ ಆನೆಯ ಹೊಟ್ಟೆಯನ್ನು ಮುಟ್ಟಿ ಆನೆ ಗೋಡೆ ಇದ್ದಂತೆ ಇದೆ ಎಂದೂ, ಕಾಲನ್ನು ಮುಟ್ಟಿ ಕಂಬವಿದ್ದಂತೆ ಇದೆ ಎಂದೂ, ಸೊಂಡಿಲನ್ನು ಮುಟ್ಟಿ ಆನೆ ಹಾವು ಇದ್ದಂತೆ ಇದೆ ಎಂದೂ, ದಂತವನ್ನು ಮುಟ್ಟಿ ಆನೆ ಭರ್ಜಿ ಇದ್ದಂತೆ ಇದೆ ಎಂದೂ, ವಾದಿಸುತ್ತಿದ್ದೀರಿ. ಆದರೆ ಆನೆ ಗೋಡೆಯಂತೆ ಆಗಲೀ, ಕಂಬದಂತೆ ಆಗಲೀ, ಹಾವಿನಂತಾಗಲೀ, ಮೊರ, ಪೊರಕೆ ಅಥವಾ ಭರ್ಜಿಯಂತಾಗಲೀ ಇಲ್ಲ. ಆದರೆ ನೀವು ಪ್ರತ್ಯೇಕವಾಗಿ ಮುಟ್ಟಿದ ಭಾಗಗಳು ಹಾಗಿರುವುದು ನಿಜ. ಗೋಡೆಯಂತಿರುವ ಹೊಟ್ಟೆಯು ಆನೆಯ ಒಂದು ಭಾಗ ಆದ್ದರಿಂದ ನೀನು ಆನೆಯ ಒಂದಂಗವನ್ನು ಮಾತ್ರ ಸತ್ಯವೆಂದು ತಿಳಿದಿರಿ, ಆದರೆ ಅದು ಪೂರ್ಣ ಸತ್ಯವಲ್ಲ. ಹೀಗೆ ನೀವು ಹೇಳುವ ಮಾತು ಅಂಶ ಸತ್ಯ. ಆನೆಯ ಪೂರ್ಣ ಸತ್ಯವು ನಿಮ್ಮೆಲ್ಲಾ ಆಂಶಿಕ ಸತ್ಯಗಳು ಸೇರಿದಾಗ ಆಗುತ್ತದೆ'' ಎಂದು ಅವರನ್ನು ಒಪ್ಪಿಸಿದ. ಆಗ ಅವರು ತಮ್ಮ ತಮ್ಮ ವಾದವನ್ನು ಬಿಟ್ಟರು. ಹೀಗೆ ಗೋಡೆ ಎಂದವನ ಮಾತು ಅಂಶ ಮಾತ್ರ ಸತ್ಯ, ಪೂರ್ಣ ಸತ್ಯವಲ್ಲ, ಆದರೂ ಅವನ ಮಾತನ್ನು ತೆಗೆದುಹಾಕುವಂತಿಲ್ಲ. ಇದೇ ಸ್ಯಾದ್ವಾದ.

ಹೀಗೆ ಸ್ವದ್ರವ್ಯ, ಸ್ವಕಾಲ, ಸ್ವಕ್ಷೇತ್ರ, ಸ್ವಭಾವದಿಂದ ಅವನ ಮಾತು ಸತ್ಯವೂ ಅದೇ ಮಾತು ಪರದ್ರವ್ಯ, ಪರಕಾಲ, ಪರಕ್ಷೇತ್ರ, ಪರಭಾವದಿಂದ ಅಸತ್ಯವೂ ಆಗಿರುತ್ತದೆ. ಆದರೂ ಇವುಗಳ ಮಧ್ಯೆ ಪೂರ್ಣ ಸತ್ಯವಂತೂ ಅಡಗಿರುತ್ತದೆ.

ಹೀಗೆಯೇ ಇನ್ನೊಂದು ನಿದರ್ಶನ ನೋಡೋಣ :

ಒಂದು ಚಿನ್ನದ ಬಳೆ ಇದೆ. ಅದು ಈಗ ಇಲ್ಲಿ ಅಂದರೆ ಸ್ವದ್ರವ್ಯ, ಸ್ವಕ್ಷೇತ್ರ, ಸ್ವಕಾಲ, ಸ್ವಭಾವದಿಂದ ಬಳೆಯೇ ಆಗಿದೆ. ಕೆಲಕಾಲಾನಂತರ ಅದನ್ನು ಕರಗಿಸಿ ಅದರಿಂದ ಸರ ಮಾಡಿಸಲಾಯಿತು. ಆಗ ಅದರ ಬಳೆಯ ಸ್ವರೂಪ ಹೋಯಿತು. ಸರದ ಸ್ವರೂಪವಾಯಿತು. ಬಳೆಯು ಪರದ್ರವ್ಯ, ಪರಕ್ಷೇತ್ರ, ಪರಕಾಲ, ಪರಭಾವದಲ್ಲಿತ್ತು. ಈಗ ಅದೇ ಸ್ವದ್ರವ್ಯ, ಸ್ವಕ್ಷೇತ್ರ, ಸ್ವಕಾಲ ಸ್ವಭಾವ ದಿಂದ ಸರವಾಯಿತು. ಆದರೂ ಬಳೆಯಲ್ಲೂ, ಸರದಲ್ಲಿಯೂ ಚಿನ್ನ ಮಾತ್ರ ಅದೇ ಆಗಿದೆ. ಆ ಚಿನ್ನದ ಗುಣ-ಧರ್ಮ ಬದಲಾಗಿಲ್ಲ. ಅದರ ಪರ್ಯಾಯಗಳು ಮಾತ್ರ ಬದಲಾದವು. ಆದ್ದರಿಂದ ಚಿನ್ನ ಮಾತ್ರ ಸತ್ಯ, ಅದರ ಪರ್ಯಾಯಗಳು ಅಸತ್ಯವಾಗಿವೆ. ಹೀಗೆ ಸತ್ಯಾಸತ್ಯ, ನಿತ್ಯಾನಿತ್ಯ, ಅಸ್ತಿ-ನಾಸ್ತಿಯಿಂದ ಕೂಡಿದ ವಸ್ತುಸ್ವರೂಪವನ್ನು ಸ್ಯಾದ್ವಾದದಿಂದ ಸುಲಭವಾಗಿ ನಿರ್ಣಯಿಸಬಹುದು. ಹೀಗೆಯೇ ಎಲ್ಲಾ ವಸ್ತುಸ್ವರೂಪವನ್ನು ತಿಳಿಯಬೇಕು. (ಅಸ್ತಿ ಎಂದರೆ ಇದೆ, ನಾಸ್ತಿ ಎಂದರೆ ಇಲ್ಲ ಎಂದರ್ಥ)

**೭. ಸ್ಯಾದಸ್ತಿ ಎಂದರೇನು ?**

ತತ್ಕಾಲದಲ್ಲಿ ಒಂದು ವಸ್ತುವು ಒಂದು ಅಪೇಕ್ಷೆಯಿಂದ, ಒಂದು ದೃಷ್ಟಿ ಕೋನದಿಂದ ಸ್ವದ್ರವ್ಯ, ಸ್ವಕ್ಷೇತ್ರ, ಸ್ವಕಾಲ, ಸ್ವಭಾವವೆಂಬ ಸ್ವಚತುಷ್ಟಯದಿಂದ ''ಇದೆ'' ಎನ್ನುವುದೇ ಸ್ಯಾದಸ್ತಿಯಾಗಿದೆ.

ಚಿನ್ನದ ಬಳೆಯನ್ನು ನೋಡಿ ಈಗ ಇದು ಚಿನ್ನದ ಬಳೆ ಅಹುದು ಎಂದು ನಿರ್ಧರಿಸುವುದು. ಈಗ ಕೇವಲ ಬಳೆ ಎಂಬ ದ್ರವ್ಯ ಈ ವರ್ತಮಾನ ಕಾಲದಲ್ಲಿ ಈ ಸ್ಥಳದಲ್ಲಿ ಇದರ ಸ್ವಭಾವದಿಂದ ಇದು ಬಳೆಯೇ ಅಹುದು ಎಂದು ನಿರ್ಧರಿಸುವುದು, ಹಾಗೆಯೇ ಈತ ಮಾನವ ಇದ್ದಾನೆ. ಕಾರಣ ಹಲನ-ಚಲನ, ನೋಡುವ-ತಿಳಿಯುವ ಶಕ್ತಿಯು ದೇಹಧಾರಿಯಾಗುವುದ ರಿಂದ ಈತ ಮಾನವ ಎಂದು ನಿರ್ಧರಿಸುವುದು. ಒಂದು ಅಪೇಕ್ಷೆಯಿಂದ ''ಇದೆ'' ಎನ್ನುವುದು ''ಸ್ಯಾದಸ್ತಿ'' ಎಂಬ ಭಂಗಿಯಾಗಿದೆ. ಒಂದು ಅಪೇಕ್ಷೆ ಯಿಂದ ಈಗ ಬಳೆಯಿದೆ, ಎಂದು ಹೇಳುವುದೇ ಸ್ಯಾದಸ್ತಿಯಾಗಿದೆ.

**೮. ಸ್ಯಾನ್ನಾಸ್ತಿ ಎಂದರೇನು ?**

ಇದನ್ನೇ ಪರದ್ರವ್ಯ, ಪರಕ್ಷೇತ್ರ, ಪರಕಾಲ, ಪರಭಾವದ ಒಂದು ದೃಷ್ಟಿ ಯಿಂದ 'ಇಲ್ಲ' ಎನ್ನುವುದು. ಅಂದರೆ ಬಳೆ ಈ ಹಿಂದೆ ಗಟ್ಟಿಯಾಗಿತ್ತು, ಅದು



ಈಗ ಇಲ್ಲ. ಈ ಹಿಂದೆ ಇದ್ದ ಸ್ವಭಾವ, ಆ ಸ್ವರೂಪವು ಈಗ ಇಲ್ಲವೆಂದು ಆಗ ಅದು ಚಿನ್ನದ ಗಟ್ಟಿಯಾಗಿತ್ತು. ಆ ರೂಪವು ಈಗ ಇಲ್ಲ. ಅಂದರೆ ''ಒಂದು ಅಪೇಕ್ಷೆಯಿಂದ ಇಲ್ಲ'' ಎಂಬ ಭಂಗಿಯಾಗಿದೆ. ಈ ಮಾನವನು ಹಿಂದೆ ದೇವನೋ, ನಾರಕಿಯೋ, ತಿರ್ಯಂಚನೋ ಆದ ಪರ್ಯಾಯದಲ್ಲಿದ್ದ ಜೀವನು, ಹಿಂದಿದ್ದ ಶರೀರದಿಂದ ಆಯುಷ್ಯ ಮುಗಿದಾಗ ಆ ಶರೀರವನ್ನು ಬಿಟ್ಟು ಹೋಗಿದ್ದರಿಂದ ಅಲ್ಲಿ ಆ ಪರ್ಯಾಯವಿಲ್ಲ ಎನ್ನುವುದು, ಒಂದು ಅಪೇಕ್ಷೆಯಿಂದ ಇಲ್ಲ ಎನ್ನುವುದೇ ಸ್ಯಾನ್ನಾಸ್ತಿ ಆಗಿದೆ.

**೯. ಸ್ಯಾದಸ್ತಿ-ನಾಸ್ತಿ ಎಂದರೇನು ?**

ಒಂದು ಅಪೇಕ್ಷೆಯಿಂದ ಇದೆ, ಇನ್ನೊಂದು ಅಪೇಕ್ಷೆಯಿಂದ ಇಲ್ಲ. ಆನೆಯ ಹೊಟ್ಟೆಯನ್ನು ಮುಟ್ಟಿ, ಆನೆ ಗೋಡೆಯಂತೆ ಇದೆ ಎನ್ನುವುದು ಸರಿ. ಆದರೆ ಇನ್ನೊಂದು ಅಪೇಕ್ಷೆಯಿಂದ ಆನೆ ಗೋಡೆಯಲ್ಲ. ಹೊಟ್ಟೆಯಷ್ಟೇ ಆನೆಯಲ್ಲ ಎಂಬುದು. ಆತ್ಮನು ಹಿಂದೆ ಒಂದು ಶರೀರದಲ್ಲಿದ್ದುದು, ನಿಜ. ಆದರೆ ಈಗ ಅಲ್ಲಿ ಇಲ್ಲ ಎನ್ನುವುದು ''ಸ್ಯಾದಸ್ತಿ-ನಾಸ್ತಿ'' ಎಂಬ ಭಂಗವಾಗಿದೆ. ಇನ್ನೊಂದು ಅಪೇಕ್ಷೆಯಿಂದ ಇದೆ-ಇಲ್ಲ ಎನ್ನುವುದು.

**೧೦. ಸ್ಯಾದವಕ್ತವ್ಯಂ ಎಂದರೇನು ?**

ವಿಧಿ ಮತ್ತು ನಿಷೇಧದ ದೃಷ್ಟಿಯಿಂದ ಅಂದರೆ ಇದೆ ಮತ್ತು ಇಲ್ಲ ಎಂದು ಒಂದೇ ಸಮಯದಲ್ಲಿ ಹೇಳಲು ಬರುವುದಿಲ್ಲ ಎಂಬುದೇ ''ಸ್ಯಾದ ವಕ್ತವ್ಯಂ''ಎಂಬ ಭಂಗವಾಗಿದೆ. ಚಿನ್ನದಿಂದ ಬಳೆಯಾದದ್ದು, ಮುಂದೆ ಯಾವ ಪರ್ಯಾಯ ಹೊಂದುವುದೋ ಈಗ ಹೇಳಲು ಬರುವುದಿಲ್ಲ. ಜೀವನು ಈ ಮನುಷ್ಯ ಪರ್ಯಾಯದಲ್ಲಿದ್ದು ಮುಂದೆ ಯಾವ ಗತಿ ಹೊಂದುವುದೋ ಈಗ ಹೇಳಲು ಬರುವುದಿಲ್ಲ. ಆದರೂ ಒಂದಲ್ಲ ಒಂದು ಗತಿ ಹೊಂದಿಯೇ ತೀರಬೇಕಾದರೂ ಈಗ ಈ ಸಮಯದಲ್ಲಿ ಒಮ್ಮೆಲೇ ಒಂದು ಅಪೇಕ್ಷೆಯಿಂದ ಹೇಳಲು ಬರುವುದಿಲ್ಲ ಎಂಬುದೇ ಸ್ಯಾದವಕ್ತವ್ಯಂ ತತ್ತ್ವವಾಗಿದೆ.

**೧೧. ಸ್ಯಾದಸ್ತಿ ಅವಕ್ತವ್ಯಂ ಎಂದರೇನು ?**

ಒಂದು ವಸ್ತು ಇದ್ದರೂ ಅದನ್ನು ಹೇಳಲಿಕ್ಕೆ ಬರುವುದಿಲ್ಲ. ಜೀವನಿಗೆ ಜ್ಞಾನ, ದರ್ಶನ, ಚೇತನ ಸ್ವಭಾವವಿದೆ. ಆದರೆ ಅದು ಕಣ್ಣಿಗೆ ಕಾಣುವುದಿಲ್ಲ. ಆದರೂ ಅದು ಇದೇ ಆದ್ದರಿಂದ ಈ ಶರೀರವನ್ನೇ ಜೀವವೆಂದು ಹೇಳಲು ಬರುವುದಿಲ್ಲ. ಓರ್ವ ವ್ಯಕ್ತಿ ಒಳಗೆ ಇದ್ದಾರೆ, ಅವರು ಹೊರಗೆ ಇರುವವನ

ತಂದೆಯೇ ಎಂದು ಒಮ್ಮೆಲೇ ಹೇಳಲು ಬರುವುದಿಲ್ಲ. ಆತ ಒಳಗಿರುವವನು ಅಣ್ಣನಿರಬಹುದು, ತಮ್ಮ ನಿರಬಹುದು; ಈ ಅಪೇಕ್ಷೆಯಿಂದ ಹೇಳಲು ಬರುವುದಿಲ್ಲವೆಂದು ತಿಳಿಸುವುದೇ ''ಸ್ಯಾದಸ್ತಿ ಅವಕ್ತವ್ಯಂ'' ಎಂಬ ಭಂಗವಾಗಿದೆ.

**೧೨. ಸ್ಯಾನ್ನಾಸ್ತಿ ಅವಕ್ತವ್ಯಂ ಎಂದರೇನು ?**

ವಸ್ತುವಿನ ಸ್ವರೂಪವು ಪ್ರತಿ ಸಮಯದಲ್ಲೂ ಬದಲಿಸುತ್ತಿರುತ್ತದೆ. ಈ ರೀತಿ ವಸ್ತುವಿನ ಪರ್ಯಾಯದ ದೃಷ್ಟಿಯಿಂದ ಇಲ್ಲದೆಯೂ ಇರಬಹುದು. ಒಂದು ಅಪೇಕ್ಷೆಯಿಂದ ಆ ವಸ್ತು ಇಲ್ಲವೆಂದೂ ದ್ರವ್ಯ ಮತ್ತು ಪರ್ಯಾಯಗಳನ್ನು ಒಂದೇ ಸಮಯದಲ್ಲಿ ಹೇಳಲು ಬರುವುದಿಲ್ಲವಾದ್ದರಿಂದ ಒಂದು ಅಪೇಕ್ಷೆಯಿಂದ ಇರಲಿಕ್ಕಿಲ್ಲ ಎನ್ನುವುದೂ, ಒಳಗಿರುವ ವ್ಯಕ್ತಿ ಇವನ ತಂದೆ ಇರಲಿಕ್ಕಿಲ್ಲ ಎಂದು ಹೇಳುವುದೂ, ಜೀವವು ಈ ಶರೀರವನ್ನು ಒಂದಲ್ಲಾ ಒಂದು ದಿನ ಬಿಟ್ಟು ಹೋಗುವುದರ ದೃಷ್ಟಿಯಿಂದ ಈ ಶರೀರವು ಜೀವವಿರಲಿಕ್ಕಿಲ್ಲ ಎಂದು ಒಂದು ಅಪೇಕ್ಷೆಯಿಂದ ಹೇಳುವುದು ''ಸ್ಯಾನ್ನಾಸ್ತಿ ಅವಕ್ತವ್ಯಂ'' ಎಂಬ ಭಂಗವಾಗಿದೆ, ಇಲ್ಲವೆಂಬುದನ್ನು ಹೇಳಲು ಬರುವುದಿಲ್ಲ.

**೧೩. ಸ್ಯಾದಸ್ತಿ-ನಾಸ್ತಿ ಅವಕ್ತವ್ಯಂ ಎಂದರೇನು ?**

ಸ್ವರೂಪದ ಅಪೇಕ್ಷೆಯಿಂದ ವಸ್ತುವಿದೆ. ಪರರೂಪದ ಅಪೇಕ್ಷೆಯಿಂದ ವಸ್ತುವಿಲ್ಲ. ಈ ಎರಡನ್ನು ಒಮ್ಮೆಲೇ ಇದೆ ಅಥವಾ ಇಲ್ಲ ಎಂಬುದನ್ನು ಹೇಳಲಿಕ್ಕೆ ಬರುವುದಿಲ್ಲ. ನೋಡುವ ಓಡಾಡುವ, ಮಾತಾಡುವ ಶರೀರವನ್ನು ನೋಡಿ ಈ ಶರೀರ ಜೀವವಲ್ಲ ಎಂದು ಒಮ್ಮೆಲೇ ಹೇಳಲಿಕ್ಕೆ ಬರುವುದಿಲ್ಲ. ಹಾಗೆಯೇ ಇದೇ ಶರೀರದಲ್ಲಿದ್ದ ಜೀವವು ಹೋದ ಮೇಲೆ ಶವವಾಗಿ ಬಿದ್ದಿರುವ ಶರೀರವನ್ನು ನೋಡಿ ಈ ಶವಕ್ಕೆ ಜೀವ ಎಂದು ಹೇಳಲಿಕ್ಕೆ ಬರುವುದಿಲ್ಲ. ಈ ಎರಡನ್ನೂ ಒಮ್ಮೆಲೇ ಸ್ಯಾದಸ್ತಿ-ನಾಸ್ತಿ ಅವಕ್ತವ್ಯಂ ಎಂಬ ಭಂಗವಾಗಿದೆ. ಅಂದರೆ ಒಳಗಿರುವ ವ್ಯಕ್ತಿ ಇವನ ತಂದೆ ಆಗಿರಲೂಬಹುದು, ಇಲ್ಲದೆಯೂ ಇರಬಹುದು. ಅದನ್ನು ಈಗಲೇ ಹೇಳಲು ಬರುವುದಿಲ್ಲ. ಅವರು ಹೊರಗೆ ಬಂದಾಗ ಗೊತ್ತಾಗುತ್ತದೆ ಎಂಬುದನ್ನು ತಿಳಿಸುವುದೇ ''ಸ್ಯಾದಸ್ತಿ-ನಾಸ್ತಿ ಅವಕ್ತವ್ಯಂ'' ಎಂದು ಹೇಳುವರು. ಪ್ರತ್ಯಕ್ಷವಲ್ಲದ್ದನ್ನು ಪ್ರಮಾಣಿಸಿ ತಿಳಿಯುವುದು.

**೧೪. ಈ ಸ್ಯಾದ್ವಾದವನ್ನು ತಿಳಿಯುವುದರಿಂದ ಪ್ರಯೋಜನವೇನು ?**

ಈ ಸ್ಯಾದ್ವಾದದಿಂದ ವಸ್ತುಸ್ವರೂಪವನ್ನು ವಿವಿಧವಾದ ದೃಷ್ಟಿಕೋನ



ಗಳಿಂದ ಅಳೆದು, ಒರೆಹಚ್ಚಿ, ಪರೀಕ್ಷಿಸಿ ಒಂದು ನಿರ್ಧಾರಕ್ಕೆ, ನಿರ್ಣಯಕ್ಕೆ ಬರಬಹುದು. ಇದರಿಂದ ಪರರ ಮಾತನ್ನು ಸಾವಧಾನದಿಂದ ಸ್ವೀಕರಿಸಿ, ಅವರಿಗೆ ಸಮಾಧಾನಕರವಾದ ನಿರ್ಣಯಕ್ಕೆ ಉತ್ತರವನ್ನು ನೀಡಿ ಒಪ್ಪಿಸಬಹುದು. ಇದರಿಂದ ವೈರ-ವಿರೋಧಗಳು ಆಗುವುದಿಲ್ಲ. ಯಾವುದೂ, ಯಾರ ಮಾತೂ ಸರ್ವಥಾ ನಿಷೇಧವಲ್ಲ, ಸರ್ವಥಾ ವಿಧಿಯೂ ಅಲ್ಲ. ಈ ಪೂರ್ಣ ಸತ್ಯವನ್ನು ಈ ಸ್ಯಾದ್ವಾದದಿಂದ ಕಂಡುಕೊಳ್ಳಬಹುದು. ವಿಧಿ ನಿಷೇಧ, ಸತ್ಯಾಸತ್ಯವನ್ನು ಕಂಡುಕೊಳ್ಳಬಹುದು. ಇದರಿಂದ ಈ ಸ್ಯಾದ್ವಾದವು ಜೈನ ನ್ಯಾಯವಾಗಿದೆ. ಇದರಲ್ಲಿರುವ ಭಂಗಗಳೂ, ಸ್ವ-ಪರ ಚತುಷ್ಟಯಗಳೂ ಈ ನ್ಯಾಯದ ಸೂತ್ರವಾಗಿದೆ.

**೧೫. ಸ್ಯಾದ್ವಾದವು ಸಂಶಯವಾದವೇ ?**

ಇಲ್ಲ; ಸ್ಯಾದ್ವಾದವು ಸಂಶಯವಾದವಲ್ಲ, ನಿರ್ಣಾಯಕವಾಗಿದೆ. ಸ್ಯಾದ್ವಾದವು ಏಕಾಂತವಾದವಲ್ಲ, ಅನೇಕಾಂತವಾದವಾಗಿದೆ, ಅಪೇಕ್ಷಾವಾದವಾಗಿದೆ.

**೧೬. ಅನೇಕಾಂತವಾದ ಮತ್ತು ಸ್ಯಾದ್ವಾದದ ಸಾಮ್ಯವೇನು ?**

''ತುಪ್ಪದ ಕೊಡ'' ಎಂದಾಗ ಒಂದು ಅಪೇಕ್ಷೆಯಿಂದ ಸತ್ಯ, ಇನ್ನೊಂದು ಅಪೇಕ್ಷೆಯಿಂದ ಅಸತ್ಯ. ಕಾರಣ ತುಪ್ಪವನ್ನು ಆ ಕೊಡದಲ್ಲಿ ಇಟ್ಟಿರುವುದರಿಂದ ಅಥವಾ ತುಪ್ಪಕ್ಕಾಗಿ ಆ ಕೊಡವನ್ನು ಬಳಸುವುದರಿಂದ ಅದು ತುಪ್ಪದ ಕೊಡ ಸರಿ. ಆದರೆ ಈಗ ಅದರಲ್ಲಿ ತುಪ್ಪ ಇಲ್ಲ, ಆದರೂ ತುಪ್ಪದ ಕೊಡವಾಗಿದೆ. ಆದರೆ ಅದು ತುಪ್ಪದಿಂದ ಮಾಡಿದ ಕೊಡವಲ್ಲ, ಮಣ್ಣಿನಿಂದ ಮಾಡಿದ ಕೊಡ. ಈ ದೃಷ್ಟಿಯಿಂದ ಅದು ತುಪ್ಪದ ಕೊಡವಲ್ಲ, ಮಣ್ಣಿನಿಂದ ಮಾಡಿದ ಅಥವಾ ಲೋಹದಿಂದ ಮಾಡಿದ ಕೊಡ. ಈ ದೃಷ್ಟಿಯಿಂದ ಅದು ತುಪ್ಪದ ಕೊಡವಲ್ಲ. ಹೀಗೆ ಒಂದೇ ವಸ್ತುವು ಹಲವು ಗುಣಧರ್ಮ-ಪರ್ಯಾಯಗಳನ್ನು, ನಾಮಗಳನ್ನು, ವಿಚಾರಗಳನ್ನು, ಹೊಂದಿರುತ್ತದೆ. ಜೀವನು ಸುಖಿಯೂ ಅಹುದು, ದುಃಖಿಯೂ ಅಹುದು. ನಾರಕಿಯೂ ಅಹುದು, ತಿರ್ಯಂಚನೂ ಅಹುದು, ಮಾನವನೂ ಅಹುದು. ಆದರೆ ನಿಶ್ಚಯದ ದೃಷ್ಟಿಯಿಂದ ಇವಾವೂ ಅಲ್ಲ. ಜೀವನು ಸಿದ್ಧನೇ ಆಗಿದ್ದಾನೆ ಎಂದು ನಿರ್ಣಯಿಸುವುದು ಸ್ಯಾದ್ವಾದ. ಒಂದೇ ವಸ್ತು-ವ್ಯಕ್ತಿ ಪದಾರ್ಥಗಳಲ್ಲಿ ಅನೇಕ ಗುಣ-ಸ್ವಭಾವಗಳನ್ನು ಕಾಣುವುದು ಅನೇಕಾಂತ, ಹೇಗೆಂದರೆ-ರಾಮನು ತಂದೆಯೂ ಆಗಿದ್ದಾನೆ, ಮಗನೂ ಆಗಿದ್ದಾನೆ, ತಾತನೂ, ಅಣ್ಣನೂ, ತಮ್ಮನೂ, ಸಖನೂ, ಮಾವನೂ ಆಗಿದ್ದಾನೆ. ಇವೆಲ್ಲಾ ಒಂದೊಂದು ದೃಷ್ಟಿಯಿಂದ

ಅನೇಕ ಪರ್ಯಾಯವಾಚಿಗಳಾಗಿವೆ. ರಾಮನಿಗೆ ಮಗನಿರುವುದರಿಂದ ತಂದೆಯೂ, ಆತನಿಗೆ ತಂದೆ ಇರುವುದರಿಂದ ರಾಮನು ಮಗನೆಂದೂ, ಅವನ ಮಗನಿಗೆ ಮಗನಿರುವುದರಿಂದ ಅವನ ಮೊಮ್ಮಗನ ದೃಷ್ಟಿಯಿಂದ ತಾತನೆಂದೂ, ತಮ್ಮನಿರುವುದರಿಂದ ಅಣ್ಣನೆಂದೂ, ಅವನಿಗೆ ಅಣ್ಣನಿರುವುದರಿಂದ ತಮ್ಮನೆಂದೂ ಹೀಗೆ ಓರ್ವನೇ ವ್ಯಕ್ತಿ ಹಲವು ಹೆಸರಿನಿಂದ ಕರೆಯಲ್ಪಡುತ್ತಾನೆ. ಹೀಗೆ ಪ್ರತಿಯೊಂದು ವಸ್ತುವೂ ಅನೇಕ ನಾಮ-ಪರ್ಯಾಯ-ಗುಣಗಳನ್ನು ಹೊಂದಿರುವುದರಿಂದಲೂ, ಎಷ್ಟೇ ಪರ್ಯಾಯಗಳನ್ನು ಹೊಂದಿದ್ದರೂ ರಾಮ ಮಾತ್ರ ಒಬ್ಬನೇ ಎಂದೂ ಪರ್ಯಾಯಗಳು ಹಲವೆಂದೂ, ಸ್ವಭಾವವು ಬದಲಾಗುವುದಿಲ್ಲವೆಂದೂ ನಿರ್ಣಯಿಸುವ ಈ ವಿಧಾನಕ್ಕೆ, ಈ ಪದ್ಧತಿಗೆ, ಈ ವಾದಕ್ಕೆ ಅನೇಕಾಂತವಾದವೆನ್ನುವರು. ಎಲ್ಲಾ ವಸ್ತು, ವಿಚಾರಗಳೂ ಅನೇಕ ಗುಣಧರ್ಮದವುಗಳಾಗಿವೆ.

ಜೀವನು ಸಂಸಾರಿಯೂ ಹೌದು, ಮುಕ್ತನೂ ಹೌದು, ಕರ್ತನೂ, ಭೋಕ್ತನೂ, ಮುಕ್ತನೂ ಹೌದು ಎಂದು ಒಂದೇ ವಸ್ತುವಿನಲ್ಲಿ ಅನೇಕ ಗುಣ ಪರ್ಯಾಯಗಳಿವೆ ಎಂದು ನಿರೂಪಿಸುವುದು ಅನೇಕಾಂತ.

ಆನೆಯ ಗೋಡೆಯಂತಹ ಹೊಟ್ಟೆ, ಕಂಬದಂತಹ ಕಾಲೂ, ಹಾವಿನಂತಹ ಸೊಂಡಿಲು, ಮೊರದಂತಹ ಕಿವಿ, ಪೊರಕೆಯಂತಹ ಬಾಲ, ಭರ್ಜಿಯಂತಹ ದಂತ ಇವೆಲ್ಲಾ ಸೇರಿಯೇ ಪೂರ್ಣ ಆನೆಯಾಯಿತು. ಹೀಗೆ ಎಲ್ಲರ ಅಭಿಪ್ರಾಯವನ್ನೂ ಸಾವಧಾನದಿಂದ ಸ್ವೀಕರಿಸಿ ವಸ್ತುವಿನ ಮೂಲ ಸ್ವರೂಪವನ್ನು ನಿರ್ಣಯಿಸುವ ವಾದವನ್ನೇ ಅನೇಕಾಂತವಾದ ಎನ್ನುವರು.

ಧಾರ್ಮಿಕ ವಿವಾದಗಳನ್ನೂ ತಾತ್ವಿಕ ಸಮಸ್ಯೆಗಳನ್ನೂ ಈ ಸ್ಯಾದ್ವಾದ, ಅನೇಕಾಂತ ಪದ್ಧತಿಗಳಿಂದ ಬಗೆಹರಿಸಬಹುದು.

ನ್ಯಾಯಾಧೀಶರು ವಕೀಲರ ವಾದ-ವಿವಾದಗಳನ್ನು ಆಲಿಸಿ, ಅದನ್ನು ತಾನು ಪರಿಶೀಲಿಸಿ ಕಾನೂನು ಬದ್ಧವಾದ ತೀರ್ಮಾನವನ್ನು ಕೊಡುವಂತೆ ಸ್ಯಾದ್ವಾದವನ್ನು ಬಲ್ಲವರು, ಇತರರ ವಾದ-ವಿವಾದಗಳನ್ನು ಆಲಿಸಿ, ನಿಜವಾದ ನಿರ್ಣಯವನ್ನು ನೀಡಿ ವಾದವನ್ನು ಪರಿಹರಿಸಬಹುದು. ಅದಕ್ಕಾಗಿಯೇ ಸ್ಯಾದಸ್ತಿ, ಸ್ಯಾನ್ನಾಸ್ತಿ, ಸ್ಯಾದವಕ್ತವ್ಯಂ ಎಂಬ ಮೂಲ ಸೂತ್ರದ ಪದ್ಧತಿಗಳಿಂದ ಮತ್ತೆ ನಾಲ್ಕನ್ನು ವಿಭಿನ್ನ ದೃಷ್ಟಿಕೋನಗಳಿಂದ ಪರಿಶೀಲಿಸುವ ಪದ್ಧತಿಯೇ ಸ್ಯಾದ್ವಾದ, ಸಪ್ತಭಂಗಿವಾದ, ಅನೇಕಾಂತವಾದ, ಅಪೇಕ್ಷಾವಾದವಾಗಿದೆ.

★ ★ ★ ★ ★



# ೬೧ ನಯ-ಪ್ರಮಾಣ-ನಿಕ್ಷೇಪಗಳು

**೧. ನಯ ಎಂದರೇನು ?**

ವಸ್ತುವಿನ ಯಾವುದಾದರೂ ಒಂದು ಅಂಶವನ್ನು ಮಾತ್ರ ತಿಳಿಯುವ ಜ್ಞಾನಕ್ಕೆ ನಯ ಎನ್ನುವರು.

**೨. ಪ್ರಮಾಣ ಎಂದರೇನು ?**

ವಸ್ತುವಿನ ಸಂಪೂರ್ಣ ಅಂಶವನ್ನು ತಿಳಿಸುವ ಸಾಧನವೇ ಪ್ರಮಾಣ.

ಅಂದರೆ ವಸ್ತುವಿನಲ್ಲಿ ಅನೇಕ ಅಂಶಗಳು, ಗುಣಗಳು, ಸ್ವಭಾವಗಳು ಇರುತ್ತವೆ. ಅವುಗಳಲ್ಲಿ ಒಂದಂಶವನ್ನು ಭಾಗಶಃ ತಿಳಿಯುವುದು ನಯವೆಂದೂ, ಆ ವಸ್ತುವಿನ ಸಕಲ ವಿಭಾಗವನ್ನು ತಿಳಿಯುವುದು ಪ್ರಮಾಣವೆಂತಲೂ ಹೇಳುವರು.

ಆನೆಯ ಹೊಟ್ಟೆ ಮುಟ್ಟಿ ಆನೆಯ ವಿಷಯವನ್ನು ತಿಳಿದರೆ ಅದು ನಯವೆಂದಾಗುತ್ತದೆ. ಆನೆಯ ಪೂರ್ಣ ಅಂಗಗಳ ಪರಿಚಯವಾದರೆ ಪ್ರಮಾಣವಾಗುತ್ತದೆ.

ನಯಜ್ಞಾನವು ಅಪೂರ್ಣವಾದುದು, ಪ್ರಮಾಣಜ್ಞಾನವು ಪೂರ್ಣವಾದುದು. ನಯ, ಪ್ರಮಾಣಗಳಿಲ್ಲದೆ ಜೈನ ನ್ಯಾಯವಾದ ಸ್ಯಾದ್ವಾದ-ಅನೇಕಾಂತವಾದ ತತ್ತ್ವನಿರ್ಣಯವಾಗುವುದಿಲ್ಲ. ನಯ ಮತ್ತು ಪ್ರಮಾಣಗಳು ತತ್ತ್ವವನ್ನು ತಿಳಿಯುವ ಉಪಾಯಗಳಾಗಿವೆ.

ನಯವು ಹೇಯವಲ್ಲ. ಪೂರ್ಣಜ್ಞಾನಕ್ಕೆ ಅಂದರೆ ಪ್ರಮಾಣಕ್ಕೆ ಅದು ಉಪಾದೇಯವೇ ಆಗಿದೆ, ಅಂದರೆ ಬೇಕಾಗಿದೆ.

**೩. ನಯದ ಭೇದಗಳಾವುವು ?**

ನಯದಲ್ಲಿ ಏಳು ವಿಧವಿವೆ :- 1. ನೈಗಮ 2. ಸಂಗ್ರಹ 3. ವ್ಯವಹಾರ 4. ಋಜುಸೂತ್ರ 5. ಶಬ್ದ 6. ಸಮಭಿರೂಢ 7. ಏವಂಭೂತ.

**ನೈಗಮನಯ :** ವಸ್ತುವಿನ ತಯಾರಿ ಮಾಡುವ ಕಾರ್ಯ ಇನ್ನೂ ಪೂರ್ಣವಾಗದೆ ಮುಂದೆ ಅದನ್ನು ಪೂರ್ಣ ಮಾಡುವುದಕ್ಕೆ ತೊಡಗಿರುವುದಕ್ಕೆ ನೈಗಮನಯ ಎನ್ನುವರು. ಅಡಿಗೆ ಇನ್ನೂ ಆಗಿಲ್ಲ. ಅದಕ್ಕೆ ಬೇಕಾದ ಸಾಮಗ್ರಿ

ಯನ್ನು ಒದಗಿಸಿಕೊಳ್ಳುತ್ತಿದ್ದರೂ, ಅವನನ್ನು ಕೇಳಿದರೆ ಅಡಿಗೆ ಮಾಡುತ್ತೇನೆ ಎಂದು ಹೇಳುವುದು ನೈಗಮನಯವಿದೆ.

**ಸಂಗ್ರಹನಯ :** ಎಲ್ಲಾ ವಿಷಯವನ್ನೂ, ಪದಾರ್ಥದ ಪರ್ಯಾಯ ವನ್ನೂ, ಅರ್ಥವನ್ನೂ ಸೇರಿಸಿ ಒಟ್ಟಿಗೆ ತಿಳಿಯುವುದು, ಹೇಳುವುದು ಸಂಗ್ರಹ ನಯವಾಗಿದೆ. ಒಂದು ಕಡೆ ಕೆಲವು ಕೊಡ-ಲೋಟ-ತಟ್ಟೆಗಳಿದ್ದವು. ಅವೇ ನೆಂದರೆ ಪಾತ್ರೆ ಎನ್ನುವುದು. ಆದರೆ ಅವುಗಳಲ್ಲಿ ವಿವಿಧ ಆಕಾರ-ಪ್ರಮಾಣದ ಪಾತ್ರೆಗಳಿದ್ದರೂ ಒಟ್ಟಿಗೆ ಸೇರಿಸಿ ಪಾತ್ರೆಗಳು ಎನ್ನುವುದು ಸಂಗ್ರಹನಯವಿದೆ.

**ವ್ಯವಹಾರನಯ :** ಸಂಗ್ರಹನಯದಿಂದ ತಿಳಿದ ವಿಷಯವನ್ನು ಪ್ರತ್ಯೇಕ ವಾಗಿ ತಿಳಿಯುವುದು. ಪಾತ್ರೆಗಳಲ್ಲಿ ಮಣ್ಣಿನ ಪಾತ್ರೆ , ಲೋಹದ ಪಾತ್ರೆ , ಹಿತ್ತಾಳೆ ಪಾತ್ರೆ. ಅವುಗಳಲ್ಲೂ ಲೋಟ, ತಟ್ಟೆ, ತಂಬಿಗೆ ಇತ್ಯಾದಿ ವಿಂಗಡಿಸಿ ಪ್ರತ್ಯೇಕವಾಗಿ ತಿಳಿಯುವುದು ವ್ಯವಹಾರನಯವಾಗಿದೆ.

**ಋಜುಸೂತ್ರನಯ :** ಈಗ ಹಾಲೀ ವರ್ತಮಾನ ಕಾಲದ ಪರ್ಯಾಯ, ಬದಲಾವಣೆ, ಕಾರ್ಯವಸ್ತುಗಳನ್ನು ತಿಳಿಯುವುದು, ತಾನು ಹಿಡಿದಿರುವ ಅಥವಾ ತನಗೆ ಬೇಕಾಗಿರುವ ಒಂದೇ ಪಾತ್ರೆಯ ಬಗ್ಗೆ ತಿಳಿಯುವುದು "ಅಲ್ಲಿರುವ ಗಡಿಗೆಯನ್ನು ತಾ" ಎಂದಾಗ ಪಾತ್ರೆಗಳಲ್ಲಿ ಕೇವಲ ಮಣ್ಣಿನ ಗಡಿಗೆಯನ್ನು ಮಾತ್ರ ಎಂದು ತಿಳಿದು ತರುವುದು ಋಜುಸೂತ್ರನಯವಿದೆ.

**ಶಬ್ದನಯ :** ವಸ್ತುಗಳ ತಿಳಿವಳಿಕೆಯನ್ನು ಕೆಲವು ಶಬ್ದಗಳಿಂದ ಉಂಟು ಮಾಡಿಕೊಳ್ಳುವುದು, ಒಂದು ಪಾತ್ರೆಯನ್ನು ಬಡಿದು ಅದರ ಶಬ್ದದಿಂದ ಇದು ಮಣ್ಣಿನದೋ-ಲೋಹದ್ದೋ ಎಂದು ತಿಳಿಯುವುದು. ಇಲ್ಲಿ ಶಬ್ದ, ಪದ, ಲಿಂಗ, ಕಾರಕ, ಸ್ತ್ರೀ, ಪುಂ, ನಪುಂಸಕ ಹೀಗೆ ವಾಚಕ ಶಬ್ದಗಳಿಂದ ವಸ್ತು ಗಳನ್ನು ತಿಳಿಯುವುದು ಶಬ್ದನಯವಿದೆ.

**ಸಮಭಿರೂಢನಯ :** ಅನೇಕ ಪದಾರ್ಥಗಳನ್ನು ಬಿಟ್ಟು ಈಗ ರೂಢಿ ಯಲ್ಲಿರುವ ಕೇವಲ ಈಗ ಬೇಕಾಗಿರುವ ಪದಾರ್ಥಗಳ ಬಗ್ಗೆ ತಿಳಿಯುವುದು. ಅಂದರೆ ಶಬ್ದದ ಅರ್ಥದ ಬಗ್ಗೆ ಗಮನ ಕೊಡುವುದು. ಪಾತ್ರೆ ಎಂದಾಗ ಅನ್ನದ ಪಾತ್ರೆ, ಸಾರಿನ ಪಾತ್ರೆ, ನೀರಿನ ಪಾತ್ರೆ ಎಂದು ಅವುಗಳಲ್ಲಿ ತನಗೆ ಬೇಕಾದುದನ್ನು ಸ್ವೀಕರಿಸುವುದು ಸಮಭಿರೂಢನಯವಿದೆ.



**ಏವಂಭೂತನಯ :** ವಸ್ತುಗಳಿಗೆ ಭಿನ್ನ ಭಿನ್ನ ರೂಪ, ಗುಣ, ಶಬ್ದ , ಹೆಸರು ಬಳಕೆಯಲ್ಲಿವೆ. ಯಾವ ಶಬ್ದದ, ಯಾವ ವಸ್ತುವಿನ, ಯಾವ ಕ್ರಿಯೆಯ ಅರ್ಥವು ನಿರ್ದಿಷ್ಟವಾಗಿ ಬೇಕಾಗಿದೆಯೋ ಅದನ್ನು ಗ್ರಹಣೆ ಮಾಡುವುದೇ ಏವಂಭೂತನಯವೆನ್ನುತ್ತಾರೆ.

ಈ ರೀತಿ ಏಳೂ ನಯಗಳೂ ವಸ್ತುವಿನ ವಿಚಾರಗಳ, ದ್ರವ್ಯಗಳ ಒಂದೊಂದು ಅಂಶವನ್ನು ಮಾತ್ರ ಪರಿಚಯಿಸುತ್ತವೆ. ಇದರಿಂದ ಸಮಗ್ರ ವಾದ, ಪೂರ್ಣವಾದ ಪರಿಜ್ಞಾನವಾಗುವುದಿಲ್ಲ. ಆದರೂ ಇವುಗಳ ಸಹಾಯ ವಿಲ್ಲದೆ ಪೂರ್ಣವಾದ ವಸ್ತುಸ್ವರೂಪದ ಪರಿಚಯವಾಗುವುದಿಲ್ಲ. ಆದ್ದರಿಂದ ಧರ್ಮದ ಪ್ರತಿಯೊಂದು ತತ್ತ್ವ-ಆಚಾರ-ವಿಚಾರಗಳನ್ನು ತಿಳಿಯಲು ಈ ನಯಗಳ ಸಹಕಾರ ಬೇಕಾಗುತ್ತದೆ. ಇವುಗಳು ಸ್ಯಾದ್ವಾದವನ್ನು ತಿಳಿಯಲು ಸಹಕಾರಿ ಸಾಧನವಾಗಿವೆ.

**೪. ನಯದಲ್ಲಿ ಇನ್ನೂ ಇರುವ ಭೇದಗಳಾವುವು ?**

ನಯದಲ್ಲಿ ಹಲವು ಭೇದ-ಪ್ರಭೇದಗಳಿವೆ. ಮುಖ್ಯವಾಗಿ ಎರಡು ಭೇದಗಳಿವೆ :- 1. ದ್ರವ್ಯಾರ್ಥಿಕನಯ 2. ಪರ್ಯಾಯಾರ್ಥಿಕನಯ.

ಕೇವಲ ದ್ರವ್ಯಗಳ, ವಸ್ತುಗಳ ಬಗ್ಗೆ ಕೇವಲ ಅವುಗಳ ಕೆಲವೆರಡು ಅಂಶ ವನ್ನು ತಿಳಿಯುವುದು ದ್ರವ್ಯಾರ್ಥಿಕನಯವಾಗಿದೆ. ದ್ರವ್ಯಗಳ ಬದಲಾಗುವ ಪರ್ಯಾಯಗಳ ಪರಿವರ್ತನೆಗಳ ಬಗ್ಗೆ ಮಾತ್ರ ಕೆಲವೆರಡು ಅಂಶಗಳನ್ನು ತಿಳಿಯುವುದು ಪರ್ಯಾಯಾರ್ಥಿಕನಯವೆನ್ನುವರು.

ಹೀಗೆ ನಯದಲ್ಲಿ ಸದ್ಭೂತ, ಅಸದ್ಭೂತ, ಉಪಚರಿತ, ಅನುಪಚರಿತ, ಶುದ್ಧನಯ, ಅಶುದ್ಧನಯ, ನಿಶ್ಚಯನಯ, ಸಾಪೇಕ್ಷ, ನಿರಪೇಕ್ಷ ಮುಂತಾಗಿ ಹಲವು ಭೇದಗಳಿವೆ. ಇವುಗಳಲ್ಲಿ ವ್ಯವಹಾರ-ನಿಶ್ಚಯನಯಗಳು ಮುಖ್ಯ ವಾದವುಗಳು.

ಇವೆಲ್ಲವೂ ವಸ್ತುಸ್ವರೂಪದ ಆತ್ಮತತ್ತ್ವದ ಪರಿಚಯ ಜ್ಞಾನಕ್ಕೆ ಸಹಕಾರಿ ಯಾಗಿವೆ.

**೫. ಪ್ರಮಾಣದ ವಿಧಗಳಾವುವು ?**

ಪ್ರಮಾಣದಲ್ಲಿ ವಸ್ತುವಿನ-ವಿಷಯದ ತತ್ತ್ವದ ಪೂರ್ಣಜ್ಞಾನವಾಗುತ್ತದೆ.

ಇದರಲ್ಲಿ ಪ್ರತ್ಯಕ್ಷ ಪ್ರಮಾಣವೆಂದೂ, ಪರೋಕ್ಷ ಪ್ರಮಾಣವೆಂದೂ ಎರಡು ವಿಧ.

ಕಣ್ಣಿಗೆ ಕಾಣುವುದು ಪ್ರತ್ಯಕ್ಷ ಪ್ರಮಾಣ. ಕೇಳಿ ತಿಳಿಯುವುದು, ಊಹೆಯಿಂದ ನಿರ್ಣಯಿಸುವುದು ಪರೋಕ್ಷ ಪ್ರಮಾಣವಾಗಿದೆ.

ಜ್ಞಾನದಲ್ಲಿ ಮತಿ, ಶ್ರುತಿ, ಅವಧಿ, ಮನಃಪರ್ಯಯ, ಕೇವಲಜ್ಞಾನಗಳು ಪ್ರಮಾಣಗಳು, ಸಮ್ಯಜ್ಞಾನಗಳು, ಪ್ರಮಾಣಗಳು.

ಇವುಗಳಲ್ಲಿ ಮತಿಜ್ಞಾನ, ಶ್ರುತಜ್ಞಾನಗಳು ಪರೋಕ್ಷ ಪ್ರಮಾಣಗಳು.

ಅವಧಿ-ಮನಃಪರ್ಯಯ ಮತ್ತು ಕೇವಲಜ್ಞಾನಗಳು ಪ್ರತ್ಯಕ್ಷ ಪ್ರಮಾಣಗಳಾಗಿವೆ. ಇವುಗಳಿಗೆ ಇಂದ್ರಿಯಾದಿ ಪರಾಪೇಕ್ಷೆ ಇಲ್ಲ.

ಪ್ರತ್ಯಕ್ಷದಲ್ಲಿ ಸಕಲಪ್ರತ್ಯಕ್ಷ , ವಿಕಲಪ್ರತ್ಯಕ್ಷ ಎಂದು ಎರಡು ವಿಧ.

ಕೇವಲಜ್ಞಾನವು ಸಕಲಪ್ರತ್ಯಕ್ಷ ಪ್ರಮಾಣ. ಅವಧಿ-ಮನಃಪರ್ಯಯಗಳು ವಿಕಲಪ್ರತ್ಯಕ್ಷ ಪ್ರಮಾಣವಾಗಿದೆ.

ಇವುಗಳಲ್ಲದೆ ಆಗಮ ಪ್ರಮಾಣ ಎಂಬುದೊಂದಿದೆ ಶಾಸ್ತ್ರದ ವಿಷಯ ನಂಬಲರ್ಹವಾದವುಗಳು. ಇವೇ ಆಗಮ ಪ್ರಮಾಣ. ಊಹೆಯಿಂದ ತಿಳಿಯುವುದು ಅನುಮಾನ ಪ್ರಮಾಣವೆಂಬುದೂ ಮತ್ತೊಂದು ಪ್ರಮಾಣವಿದೆ.

• • • • • • • • • • •

*ನರುಗಬ್ಬಿನೊಳಗಣ ಸವಿಯ ಕಾಣದೆ ಪಶು*
*ಹೊರಗಣೆಲೆಯ ಸವಿವಂತೆ ।*
*ಅರಿದೊಳಗಾತ್ಮ ಸುಖವ ಕಾಣಲರಿಯದೆ*
*ಹೊರಗೆಳಸುವ ರಂಗ ಸುಖಿಕೆ ॥* --ಭರತೇಶವೈಭವ.

*ಧರ್ಮದಿಂದಾದುದು ಸಿರಿ ಎಂದು ಸುಖಿಸುತ್ತ*
*ಧರ್ಮವ ಮರೆಯರುತ್ತಮರು*
*ಧರ್ಮವೇತರದೆಂದು ಭೋಗಕೆ ಮರುಳಾಗಿ*
*ಕರ್ಮಿಗಳಾಚರಿಸುವರು ॥* --ಭರತೇಶವೈಭವ.